ಕರುನಾಡು ಎಗ್ಸಾಂ

# ಪ್ರಚಲಿತ ವಿದ್ಯಮಾನಗಳು

ನವೆಂಬರ್

2013

ಸಂಪರ್ಕಿಸಿ:KARUNADUEXAMS.COM

# ರಾಜ್ಯ

## ರಾಜ್ಯದಿಂದ ಶೇ.70 ರಷ್ಟು ಜಾಗತಿಕ ಬಂಡವಾಳ ಹೂಡಿಕೆದಾರರು ವಾಪಸ್

ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ (ಜಿಮ್)ದಲ್ಲಿ ಒಪ್ಪಂದ ಮಾಡಿಕೊಂಡಿದ್ದ ಉದ್ಯಮಿಗಳ ಪೈಕಿ ಶೇ. 70ರಷ್ಟು ಮಂದಿ ರಾಜ್ಯದಲ್ಲಿ ಕೋಟ್ಯಂತರ ರೂ. ಬಂಡವಾಳ ಹಾಕಿ ಉದ್ದಿಮೆ- ವ್ಯವಹಾರ ನಡೆಸುವುದು ಬಹಳ ತ್ರಾಸದಾಯಕ ಎನಿಸಿ ರಾಜ್ಯದಿಂದ ಹೊರನಡೆದಿದ್ದಾರೆ. ಈ ಅಂಶವು ತಾನು ಇತ್ತೀಚೆಗೆ ನಡೆಸಿದ ಸಮೀಕ್ಷೆಯಲ್ಲಿ ಪತ್ತೆಯಾಗಿದೆ ಎಂದು ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳ ಮಹಾಒಕ್ಕೂಟ (ಅಸೋಚಾಮ್) ತಿಳಿಸಿದೆ. ಆದರೆ, ಅಸೋಚಾಮ್‌ನ ಈ ಸಮೀಕ್ಷೆಯನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಂ.ಎನ್. ವಿದ್ಯಾಶಂಕರ್ ಅಲ್ಲಗೆಳೆದಿದ್ದು, ಯಾವ ಉದ್ಯಮಿಗಳೂ ರಾಜ್ಯದಿಂದ ಹೊರ ಹೋಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

**ಶೇ.30 ಮಂದಿ ಮಾತ್ರ ಹೂಡಿಕೆ:**

ಕಳೆದ ವರ್ಷ ಬಿಜೆಪಿ ಆಡಳಿತಾವಧಿ ಯಲ್ಲಿ ನಡೆದ ಬಂಡವಾಳ ಹೂಡಿಕೆ ದಾರರ ಸಮಾವೇಶದಲ್ಲಿ 600ಕ್ಕೂ ಹೆಚ್ಚು ಉದ್ಯಮಿಗಳು ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿದ್ದರು. ಈ ಪೈಕಿ ಕೇವಲ ಶೇ.30ರಷ್ಟು ಮಂದಿ ಮಾತ್ರ ಬಂಡವಾಳ ಹೂಡಿಕೆ ಮಾಡಿದ್ದು, ಇನ್ನುಳಿದ ಶೇ.70ರಷ್ಟು ಉದ್ಯಮಿಗಳು ರಾಜ್ಯದಲ್ಲಿ ಹೂಡಿಕೆ ಮಾಡಲು ಇಚ್ಛಿಸದೆ ಹೊರಟು ಹೋಗಿದ್ದಾರೆ ಎಂದು ಅಸೋಚಾಮ್ ತನ್ನ ಸಮೀಕ್ಷಾ ವರದಿ ಯಲ್ಲಿ ತಿಳಿಸಿದೆ.

**ಗುಜರಾತ್, ಪಂಜಾಬ್, ಮಹಾರಾಷ್ಟ್ರದತ್ತ ?**

ಉದ್ಯಮಿಗಳಿಗೆ ಅತ್ಯಗತ್ಯವಾಗಿ ಬೇಕಾದ ಭೂಮಿ ಹಾಗೂ ರಸ್ತೆ ಸಂಪರ್ಕ ಕಲ್ಪಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಸರ್ಕಾರದ ವರ್ತನೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಹೂಡಿಕೆದಾರರು ರಾಜ್ಯದಿಂದ ಕಾಲ್ಕಿತ್ತಿದ್ದಾರೆ. ರಾಜ್ಯದಿಂದ ಹೊರನಡೆದು ಗುಜರಾತ್, ಪಂಜಾಬ್, ದೆಹಲಿ, ಮಹಾರಾಷ್ಟ್ರದತ್ತ ಮುಖ ಮಾಡಿದ್ದಾರೆ ಎನ್ನಲಾಗಿದೆ. ರಸ್ತೆಗಳ ಸಂಪರ್ಕ ಮಾತ್ರವಲ್ಲದೆ, ರೈಲು, ಬಂದರುಗಳ ಸಂಪರ್ಕವನ್ನೂ ಸೂಕ್ತವಾಗಿ ಕಲ್ಪಿಸಬೇಕಾದ ಅಗತ್ಯ ಇದೆ. ಕೈಗಾರಿಕಾ ನೀತಿ ಮತ್ತು ತೆರಿಗೆ ವಿಧಿಸುವ ಕ್ರಮದಲ್ಲಿ ಕೆಲವೊಂದು ಬದಲಾವಣೆ ತರಬೇಕಾದ ಅವಶ್ಯಕತೆ ಇದೆ ಎಂದು ಅಸೋಚಾಮ್‌ನ ದಕ್ಷಿಣ ವಲಯದ ಸಹ ಅಧ್ಯಕ್ಷ ಜೆ.ಕ್ರಾಸ್ಟಾ ತಿಳಿಸಿದ್ದಾರೆ. ಉದ್ಯಮಿಗಳಿಗೆ ಅಗತ್ಯ ಇರುವ ಮೂಲಭೂತ ಸೌಕರ್ಯ ಕಲ್ಪಿಸುವುದು ರಾಜ್ಯ ಸರ್ಕಾರದ ಜವಾಬ್ದಾರಿ. ಆದರೆ ರಾಜ್ಯ ಸರ್ಕಾರ ಕೇವಲ ಭರವಸೆ ನೀಡುತ್ತದೆಯೇ ಹೊರತು ಅಶ್ವಾಸನೆಗಳನ್ನು ಈಡೇರಿಸಲು ಹಿಂದೇಟು ಹಾಕುತ್ತದೆ. ರಾಜಧಾನಿ ಬೆಂಗಳೂರಿನಲ್ಲಿಯೇ ರಸ್ತೆಗಳು ಸರಿ ಇಲ್ಲದಿರುವ ಬಗ್ಗೆ ಉದ್ಯಮಿಗಳು ಬೇಸರ ವ್ಯಕ್ತಪಡಿಸಿದ್ದಾರೆ. ಭೂಸ್ವಾಧೀನ ಪ್ರಕ್ರಿಯೆಯಲ್ಲೂ ಸಮರ್ಥವಾಗಿ ಕಾರ್ಯನಿರ್ವಹಿಸಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಹೀಗಾಗಿ, ಹಲವು ಸಂಸ್ಥೆಗಳು ರಾಜ್ಯದಿಂದ ದೂರ ಸರಿದಿದೆ ಎಂದು ಹೇಳಿದ್ದಾರೆ.

**ಅತಿ ಹೆಚ್ಚು ವಿದೇಶಿ ವಿದ್ಯಾರ್ಥಿಗಳನ್ನು ಸೆಳೆಯುತ್ತಿರುವ ರಾಜ್ಯಗಳಲ್ಲಿ ಕರ್ನಾಟಕಕ್ಕೆ ಮೊದಲ ಸ್ಥಾನ**

ಅತಿ ಹೆಚ್ಚು ವಿದೇಶಿ ವಿದ್ಯಾರ್ಥಿಗಳನ್ನು ಸೆಳೆಯುತ್ತಿರುವ ರಾಜ್ಯಗಳಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಅಲ್ಲದೆ ರಾಷ್ಟ್ರೀಯ ಸರಾಸರಿ ಪ್ರಮಾಣಕ್ಕಿಂತ ಅಧಿಕ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಪ್ರಮಾಣವನ್ನು ಹೊಂದಿರುವ ಎರಡನೇ ರಾಜ್ಯವಾಗಿದೆ. ಅತಿ ಹೆಚ್ಚಿನ ಶೈಕ್ಷಣಿಕ ಸಂಸ್ಥೆಗಳನ್ನು ಹೊಂದಿರುವ ನಾಲ್ಕನೇ ರಾಜ್ಯವಾಗಿದ್ದು, ಉತ್ತಮ ಗುಣಮಟ್ಟದ ಉನ್ನತ ಶಿಕ್ಷಣ, ಮೂಲಸೌಕರ್ಯಗಳಿಂದ ಇಲ್ಲಿಯ ಶಿಕ್ಷಣ ಸಂಸ್ಥೆಗಳು ವಿದೇಶಿ ವಿದ್ಯಾರ್ಥಿಗಳನ್ನು ತಮ್ಮತ್ತ ಸೆಳೆಯುತ್ತಿವೆ.

**ರಾಜ್ಯದಲ್ಲಿ ಶೇ. 36.7:**

ಭಾರತದಲ್ಲಿರುವ ಒಟ್ಟು 27,531 ವಿದೇಶಿ ವಿದ್ಯಾರ್ಥಿಗಳ ಪೈಕಿ ಹತ್ತು ಸಾವಿರ ವಿದ್ಯಾರ್ಥಿಗಳು (ಶೇ 36.7) ರಾಜ್ಯದ ವಿವಿಧ ಶೈಕ್ಷಣಿಕ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ) ಮತ್ತು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಬಿಡುಗಡೆ ಮಾಡಿದ 'ಭಾರತದಲ್ಲಿ ಉನ್ನತ ವ್ಯಾಸಂಗದ ಸ್ಥಿತಿಗತಿ' ಕುರಿತ ವರದಿ ಈ ವಿಚಾರ ಬಹಿರಂಗಪಡಿಸಿದೆ.

**ಇತರೆ ಸ್ಥಾನಗಳು:**

- ಕರ್ನಾಟಕದ ನಂತರದ ಸ್ಥಾನದಲ್ಲಿ ಆಂಧ್ರ (4,698), ಮಹಾರಾಷ್ಟ್ರ (4,369), ತಮಿಳುನಾಡು (2,383) ಮತ್ತು ದೆಹಲಿ (1,529) ಇವೆ.
- 3,098 ಕಾಲೇಜುಗಳನ್ನು ಹೊಂದಿರುವ ಕರ್ನಾಟಕ ಅತಿ ಹೆಚ್ಚು ಕಾಲೇಜುಗಳನ್ನು ಹೊಂದಿರುವ ರಾಜ್ಯಗಳ ಪೈಕಿ ನಾಲ್ಕನೇ ಸ್ಥಾನದಲ್ಲಿದೆ.
- 23 ವಿವಿ ಗಳನ್ನು ಹೊಂದಿರುವ ರಾಜ್ಯ ಹೆಚ್ಚು ವಿಶ್ವವಿದ್ಯಾಲಯಗಳನ್ನು ಹೊಂದಿರುವ ರಾಜ್ಯಗಳ ಪೈಕಿ ಎರಡನೇ ಸ್ಥಾನದಲ್ಲಿದೆ.
- ಹೆಚ್ಚು ಸ್ವಾಯತ್ತ ವಿಶ್ವವಿದ್ಯಾಲಯಗಳನ್ನು ಹೊಂದಿದ ಮೂರನೇ ರಾಜ್ಯವಾಗಿದೆ. ದೇಶದಲ್ಲಿಯ ಅತಿ ಹೆಚ್ಚು ವೈದ್ಯಕೀಯ ವಿಶ್ವವಿದ್ಯಾಲಯಗಳು (ಆರು) ಇಲ್ಲಿವೆ. ಜನಸಂಖ್ಯೆಗೆ ಅನುಗುಣವಾಗಿ ಕಾಲೇಜುಗಳ ಸಾಂದ್ರತೆಗೆ ಸಂಬಂಧಿಸಿದಂತೆಯೂ ರಾಜ್ಯವೇ ಮುಂದಿದೆ.
- ಒಂದು ಲಕ್ಷ ಜನಸಂಖ್ಯೆಗೆ 44 ಕಾಲೇಜುಗಳನ್ನು ಹೊಂದಿರುವ ರಾಜ್ಯ ದೇಶದ ಸರಾಸರಿಗಿಂತ ಭಾರಿ ಪ್ರಮಾಣದಲ್ಲಿ ಮುಂದಿದೆ. ರಾಷ್ಟ್ರೀಯ ಸರಾಸರಿ ಪ್ರಮಾಣ ಒಂದು ಲಕ್ಷ ಜನಸಂಖ್ಯೆಗೆ 23 ಕಾಲೇಜು ಎಂದು ವರದಿ ಬೆಳಕು ಚೆಲ್ಲಿದೆ.
- ಆದರೆ, ಕಾಲೇಜು ವ್ಯಾಸಂಗ ಮತ್ತು ಉನ್ನತ ವ್ಯಾಸಂಗದ ಪ್ರವೇಶಕ್ಕೆ ಸಂಬಂಧಿಸಿದಂತೆ ಪ್ರತಿ ಕಾಲೇಜುಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ ರಾಷ್ಟ್ರೀಯ ಸರಾಸರಿಗೆ (700) ಹೋಲಿಸಿದಾಗ ತುಂಬಾ ಕಡಿಮೆ. ರಾಜ್ಯದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಸುಮಾರು 16 ಲಕ್ಷ ಎಂದೂ ವರದಿ ಹೇಳಿದೆ.

## ದೇಶದ ಅತಿದೊಡ್ಡ ವಿಮಾನ ವಾಹಕ ನೌಕೆ 'ಐಎನ್‌ಎಸ್ ವಿಕ್ರಮಾದಿತ್ಯ' ನೌಕಾಪಡೆಗೆ ಸೇರ್ಪಡೆ

ಇದು ಕೇವಲ ನೌಕೆಯಲ್ಲ, ತೇಲುನ ನಗರ. ಇದರೊಳಗಿರುವ ಸಿಬ್ಬಂದಿಯ ಸಂಖ್ಯೆ 1,600ಕ್ಕೂ ಹೆಚ್ಚು. ಈ ಸಿಬ್ಬಂದಿಗೇ ತಿಂಗಳಿಗೆ 1 ಲಕ್ಷ ಮೊಟ್ಟೆ, 20 ಸಾವಿರ ಲೀಟರ್ ಹಾಲು, 16 ಟನ್ ಅಕ್ಕಿ ಬೇಕು... ಹೌದು. ಈ ತೇಲುವ ನಗರದ ಹೆಸರೇ ಐಎನ್‌ಎಸ್ ವಿಕ್ರಮಾದಿತ್ಯ. ದೇಶದ ಅತಿದೊಡ್ಡ ವಿಮಾನ ವಾಹಕ ನೌಕೆ 'ಐಎನ್‌ಎಸ್ ವಿಕ್ರಮಾದಿತ್ಯ' ವನ್ನು ನೌಕಾಪಡೆಯ ಕಾರವಾರ ನೆಲೆಯಲ್ಲಿ ಇರಿಸಲಾಗಿದೆ. ನವೆಂಬರ್ 16 ರಂದು ಈ ನೌಕೆಯನ್ನು ರಷ್ಯಾದಲ್ಲಿ ಭಾರತೀಯ ನೌಕಾಪಡೆಗೆ ಹಸ್ತಾಂತರಿಸಲಾಯಿತು. 44,570 ಟನ್‌ನ ತೂಕದ ನೌಕೆಯನ್ನು ಈ ಹಿಂದೆ 'ಅಡ್ಮಿರಲ್ ಗೋರ್‌ಷ್ಕೋವ್' ಎಂದು ಕರೆಯಲಾಗುತ್ತಿತ್ತು.

**ಕಾರವಾರದಲ್ಲಿ ನೆಲೆ:**

ಕಾರವಾರದಲ್ಲಿ ಈ ನೌಕೆಯನ್ನು ಇರಿಸುವುದರಿಂದ ಅರಬೀ ಸಮುದ್ರ ವ್ಯಾಪ್ತಿಯಲ್ಲಿ ಉಂಟಾಗುವ ಯಾವುದೇ ಬಿಕ್ಕಟ್ಟನ್ನು ಎದುರಿಸಲು ನೌಕಾಪಡೆಗೆ ಸಾಧ್ಯವಾಗಲಿದೆ ಎಂದು ವೈಸ್ ಅಡ್ಮಿರಲ್ ಶೇಖರ್ ಸಿಂಗ್ ತಿಳಿಸಿದ್ದಾರೆ. ಮೊದಲ ಅಡ್ವಾನ್ಸ್‌ಡ್ ಲೈಟ್ ಹೆಲಿಕಾಪ್ಟರ್ 'ಧ್ರುವ' ವನ್ನು ನೌಕಾಪಡೆಗೆ ಸೇರ್ಪಡೆಗೊಳಿಸಲಾಯಿತು. ಇದು ದೇಶಿಯವಾಗಿ ವಿನ್ಯಾಸಗೊಳಿಸಿ, ನಿರ್ಮಾಣಗೊಂಡ ಕಾಪ್ಟರ್ ಇದಾಗಿದೆ. ಬೆಂಗಳೂರಿನ ಹಿಂದುಸ್ತಾನ್ ಏರಾನಾಟಿಕ್ಸ್‌ನಲ್ಲಿ ವಿನ್ಯಾಸಗೊಳಿಸಲಾಗಿತ್ತು. ಸೇನೆಯ ಮೂರು ವಿಭಾಗಗಳಲ್ಲಿ ಅದನ್ನು ಪರೀಕ್ಷಿಸಲಾಗಿತ್ತು.

**ಕಾದಿದ್ದು 5 ವರ್ಷ:**

ಈ ನೌಕೆಗಾಗಿ ರಷ್ಯಾದ ಜತೆ ಎನ್‌ಡಿಎ ಆಡಳಿತಾವಧಿಯಲ್ಲಿ (2004) ಒಪ್ಪಂದ ಮಾಡಲಾಗಿತ್ತು. ಅನಿವಾರ್ಯ ಕಾರಣಗಳಿಂದ ನೌಕೆ ಹಸ್ತಾಂತರ ಸಾಧ್ಯವಾಗಿರಲಿಲ್ಲ. 5 ವರ್ಷ ಕಾದ ಬಳಿಕ ನೌಕೆ ಭಾರತದ ನೌಕಾಪಡೆಗೆ ಸೇರಿದೆ.

**ವೈಶಿಷ್ಟ್ಯವೇನು?**

- ನೌಕೆಯ ಹಿಂದಿನ ಹೆಸರು....ಅಡ್ಮಿರಲ್ ಗೋರಶ್‌ಕೊವ್
- ರಷ್ಯಾ ನೌಕಾಪಡೆಗೆ ಸೇರ್ಪಡೆಯಾಗಿದ್ದು...........1987
- ರಷ್ಯಾದಲ್ಲಿ ಕೊನೇ ಪಯಣ...........................1995
- ನೌಕೆಯ ತೂಕ (ಟನ್‌ಗಳಲ್ಲಿ).........................44,500
- ವಿಕ್ರಮಾದಿತ್ಯದ ಉದ್ದ (ಮೀಟರ್)............. .....284
- ನೌಕೆಯಲ್ಲಿರುವ ಸಿಬ್ಬಂದಿ.............................1,600
- ಸಿಬ್ಬಂದಿಗೆ ಅಗತ್ಯವಿರುವ ಮೊಟ್ಟೆ ತಿಂಗಳಿಗೆ........1 ಲಕ್ಷ
- ಹಾಲು (ಲೀಟರ್‌ಗಳಲ್ಲಿ)...............................20 ಸಾವಿರ
- ಹೊರುವ ಸಾಮರ್ಥ್ಯ (ಟನ್)..........................8 ಸಾವಿರ

## ಎಪಿಎಲ್ ಪಡಿತರ ಚೀಟಿದಾರರಿಗೆ 'ರಾಜೀವ್‌ಗಾಂಧಿ ಆರೋಗ್ಯಶ್ರೀ' ಯೋಜನೆ

ಎಪಿಎಲ್ ಕಾರ್ಡ್‌ದಾರರಿಗೆ ಸರ್ಕಾರ ಆರಂಭಿಸುತ್ತಿರುವ ಹೊಸ ಆರೋಗ್ಯ ಸೇವೆಯ ಹೆಸರು ರಾಜೀವ್‌ಗಾಂಧಿ ಆರೋಗ್ಯಶ್ರೀ. ಎಪಿಎಲ್ ಕಾರ್ಡ್‌ದಾರರಿಗೂ ವಾಜಪೇಯಿ ಆರೋಗ್ಯ ಶ್ರೀ ಯೋಜನೆ ವಿಸ್ತರಿಸುತ್ತಿಲ್ಲ. ಬದಲಾಗಿ ರಾಜೀವ್‌ಗಾಂಧಿ ಆರೋಗ್ಯಶ್ರೀ ಯೋಜನೆಯನ್ನು ಹೊಸದಾಗಿ ಜಾರಿಗೆ ತರಲಾಗುತ್ತಿದೆ. ಬಿಪಿಎಲ್ ಕಾರ್ಡ್‌ದಾರರಿಗೆ ಇರುವ ವಾಜಪೇಯಿ ಆರೋಗ್ಯ ಶ್ರೀ ಯೋಜನೆಯನ್ನು ಎಪಿಎಲ್ ಕಾರ್ಡ್‌ದಾರರಿಗೂ ವಿಸ್ತರಿಸಲಾಗುವುದು ಸರ್ಕಾರ ತಿಳಿಸಿದೆ.

**ಯೋಜನೆ ಬಗ್ಗೆ:**

- ವಾಜಪೇಯಿ ಆರೋಗ್ಯ ಶ್ರೀ ಯೋಜನೆಯಡಿ ಬಿಪಿಎಲ್ ಕಾರ್ಡ್‌ದಾರರಿಗೆ 1.5 ಲಕ್ಷದವರೆಗೆ ಉಚಿತ ಚಿಕಿತ್ಸೆ ನೀಡಲಾಗುತ್ತದೆ.
- ಆದರೆ, ರಾಜೀವ್‌ಗಾಂಧಿ ಆರೋಗ್ಯ ಶ್ರೀ ಯೋಜನೆಯಡಿ ಎಪಿಎಲ್ ಕಾರ್ಡ್‌ದಾರರು ಚಿಕಿತ್ಸಾ ಪ್ಯಾಕೇಜ್‌ನ ಶೇ. 10ರ ಮೊತ್ತ ಭರಿಸಬೇಕು.
- ಚಿಕಿತ್ಸೆಗೆ ಪ್ಯಾಕೇಜ್‌ಗಿಂತ ಹೆಚ್ಚು ಮೊತ್ತವಾದಲ್ಲಿ ಆ ಮೊತ್ತವನ್ನು ರೋಗಿಯ ಕುಟುಂಬದವರು ಪಾವತಿಸಬೇಕು.
- ಈ ಯೋಜನೆಯಡಿಯೂ ಚಿಕಿತ್ಸೆಯ ಗರಿಷ್ಠ ಮಿತಿ 1.5 ಲಕ್ಷ. ತೀರಾ ಅಗತ್ಯ ಸಂದರ್ಭದಲ್ಲಿ 2 ಲಕ್ಷದವರೆಗೆ ಪಾವತಿಸಲು ಅವಕಾಶವಿದೆ.
- ಫಲಾನುಭವಿಗಳು ಯೋಜನೆಯಡಿ ನಿಗದಿಪಡಿಸಿದ ಚಿಕಿತ್ಸೆ ಪಡೆದುಕೊಳ್ಳಲು ರಾಜ್ಯ ಮತ್ತು ಹೊರರಾಜ್ಯದ 152 ಆಸ್ಪತ್ರೆಗಳನ್ನು ನಿಗದಿಪಡಿಸಲಾಗಿದೆ

**ದೇಶದಲ್ಲೇ ಪ್ರಥಮ:**

ಬಿಪಿಎಲ್ ಮತ್ತು ಎಪಿಎಲ್ ಕಾರ್ಡ್‌ದಾರರೆಲ್ಲರಿಗೂ ಉಚಿತ ಆರೋಗ್ಯ ಸೇವೆ ಒದಗಿಸುವ ಮೂಲಕ ಟರ್ಷಿಯರಿ ಕಾಯಿಲೆಗಳಿಗೆ ಸಂಬಂಧಿಸಿದಂತೆ ಸಮಗ್ರ ಆರೋಗ್ಯ ಸೇವೆ ಒದಗಿಸುವ ಪ್ರಥಮ ರಾಜ್ಯ ಎಂಬ ಕೀರ್ತಿಗೆ ಕರ್ನಾಟಕ ಪಾತ್ರವಾಗಲಿದೆ

## ರಾಜ್ಯದ 64 ತಾಲೂಕುಗಳನ್ನು 'ಬರ ಪೀಡಿತ' ಎಂದು ಘೋಷಿಸಿದ ರಾಜ್ಯ ಸರ್ಕಾರ

ರಾಜ್ಯದಲ್ಲಿ ಈ ವರ್ಷ ಅತಿ ಹೆಚ್ಚು ಮಳೆ ಆಗಿದ್ದರೂ 22 ಜಿಲ್ಲೆಗಳ 64 ತಾಲೂಕುಗಳು ಬರಪೀಡಿತ. ಈ ತಾಲೂಕುಗಳನ್ನು ರಾಜ್ಯ ಸರ್ಕಾರವೇ ಬರಪೀಡಿತ ಎಂದು ಘೋಷಿಸಿದೆ. ಕೇಂದ್ರ ಸರ್ಕಾರದ ಬರ ನಿರ್ವಹಣೆ ಕೈಪಿಡಿ ಮಾರ್ಗಸೂಚಿ ಅನ್ವಯ ಮಳೆ ಕೊರತೆ ಮತ್ತು ತೇವಾಂಶ ಕೊರತೆ ಪರಿಗಣಿಸಿ ಈ ಘೋಷಣೆ ಮಾಡಲಾಗಿದೆ.

**ಬರ ಪೀಡಿತ:**

ಸಚಿವ ಸಂಪುಟದ ಉಪ ಸಮಿತಿ ಸಭೆಯಲ್ಲಿ ಈ ತಾಲೂಕುಗಳ ಪಟ್ಟಿ ಮಾಡಲಾಗಿದ್ದು, ಅದರಂತೆ 2013-14ನೇ ಸಾಲಿನಲ್ಲಿ 64 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ.ಈ ತಾಲೂಕುಗಳಿಗೆ ತುರ್ತು ಕುಡಿಯುವ ನೀರು ಪೂರೈಕೆ, ಉದ್ಯೋಗ ಖಾತ್ರಿ ಯೋಜನೆ, ಉದ್ಯೋಗ ಒದಗಿಸುವ ಕಾರ್ಯಕ್ರಮ, ಜಾನುವಾರು ಸಂರಕ್ಷಣೆ ಕಾರ್ಯಗಳನ್ನು ಕೈಗೊಳ್ಳಲು ಸರ್ಕಾರ ಆದೇಶ ಹೊರಡಿಸಿದೆ.

**ಯಾವ-ಯಾವ ತಾಲೂಕುಗಳು:**

- **ಬೆಂಗಳೂರು ನಗರ:** ಬೆಂಗಳೂರು ದಕ್ಷಿಣ.
- **ರಾಮನಗರ:** ಕನಕಪುರ, ಮಾಗಡಿ, ರಾಮನಗರ.
- **ಕೋಲಾರ:** ಬಂಗಾರಪೇಟೆ, ಮುಳಬಾಗಿಲು, ಶ್ರೀನಿವಾಸಪುರ.
- **ಚಿಕ್ಕಬಳ್ಳಾಪುರ:** ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಚಿಂತಾಮಣಿ, ಶಿಡ್ಲಘಟ್ಟ.
- **ತುಮಕೂರು:** ಚಿಕ್ಕನಾಯ್ಕನಹಳ್ಳಿ, ಗುಬ್ಬಿ, ಮಧುಗಿರಿ, ಪಾವಗಡ, ಶಿರಾ.
- **ಚಿತ್ರದುರ್ಗ:** ಚಳ್ಳಕೆರೆ, ಹಿರಿಯೂರು, ಹೊಸದುರ್ಗ, ಮೊಳಕಾಲ್ಮೂರು.
- **ದಾವಣಗೆರೆ:** ಜಗಳೂರು
- **ಚಾಮರಾಜನಗರ:** ಚಾಮರಾಜನಗರ, ಗುಂಡ್ಲುಪೇಟೆ.
- **ಮೈಸೂರು:** ಕೃಷ್ಣರಾಜನಗರ, ಮೈಸೂರು, ನಂಜನಗೂಡು, ಟಿ.ನರಸೀಪುರ.
- **ಮಂಡ್ಯ:** ಕೃಷ್ಣರಾಜಪೇಟೆ, ಮದ್ದೂರು, ಪಾಂಡವಪುರ, ಶ್ರೀರಂಗಪಟ್ಟಣ.
- **ಬಳ್ಳಾರಿ:** ಬಳ್ಳಾರಿ, ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ, ಸಂಡೂರು, ಸಿರುಗುಪ್ಪ.
- **ಕೊಪ್ಪಳ:** ಗಂಗಾವತಿ;
- ಗುಲ್ಬರ್ಗ
- ಜೇವರ್ಗಿ
- **ಯಾದಗಿರಿ:** ಶಹಾಪೂರ, ಯಾದಗಿರಿ
- **ಬೆಳಗಾವಿ:** ಬೈಲಹೊಂಗಲ, ಬೆಳಗಾವಿ, ಚಿಕ್ಕೋಡಿ, ಗೋಕಾಕ್, ಹುಕ್ಕೇರಿ, ಖಾನಾಪುರ, ರಾಮದುರ್ಗಾ, ರಾಯಭಾಗ, ಸವದತ್ತಿ.
- **ಬಾಗಲಕೋಟೆ:** ಬಾದಾಮಿ, ಬಾಗಲಕೋಟೆ, ಬೀಳಗಿ, ಮುಧೋಳ.
- **ಬಿಜಾಪುರ:** ಬಿಜಾಪುರ; ಗದಗ
- ನರಗುಂದ, ರೋಣ.
- **ಹಾವೇರಿ:** ಹಾವೇರಿ;

- ಧಾರವಾಡ- ಹುಬ್ಬಳ್ಳಿ, ಕಲಘಟಗಿ.
- **ಹಾಸನ:** ಅರಕಲಗೂಡು, ಬೇಲೂರು;
- ಉತ್ತರ ಕನ್ನಡ
- ಹಳಿಯಾಳ.

**ರಾಜ್ಯದ ಸರ್ಕಾರಿ ಶಾಲೆಗಳ ಗುಣಮಟ್ಟ ಅತ್ಯಂತ ಕಳಪೆ; ಸಮೀಕ್ಷೆ**

ರಾಜ್ಯದ ಸರ್ಕಾರಿ ಶಾಲೆಗಳ ಗುಣಮಟ್ಟ ಅತ್ಯಂತ ಕಳಪೆ ಎಂದು ಮತ್ತೊಮ್ಮೆ ಸಾಬೀತಾಗಿದೆ. ಕರ್ನಾಟಕ ಸ್ಕೂಲ್ ಕ್ವಾಲಿಟಿ ಅಸ್ಸೆಸ್ಮೆಂಟ್ ಮತ್ತು ಅಕ್ರಿಡೇಶನ್ ಕೌನ್ಸಿಲ್ (Karnataka School Quality Assessment and Accreditation Council) ಜುಲೈ 2012 ರಿಂದ ಫೆಬ್ರವರಿ 2013 ರ ವರೆಗೆ ನಡೆಸಿದ ಸಮೀಕ್ಷೆಯಲ್ಲಿ ಈ ಆಘಾತಕಾರಿ ಅಂಶ ಬೆಳಕಿಗೆ ಬಂದಿದೆ.

**ಸಮೀಕ್ಷೆಯಲ್ಲಿ ಏನಿದೆ?**

- ರಾಜ್ಯದ 1020 ಸರ್ಕಾರಿ ಶಾಲೆಗಳನ್ನು ಈ ಸಮೀಕ್ಷೆಗೆ ಒಳಪಡಿಸಲಾಗಿದೆ. ವಿಪರ್ಯಾಸವೆಂದರೆ ಯಾವುದೇ ಶಾಲೆಯು "ಎ+" ಗ್ರೇಡ್ ಪಡೆದಿಲ್ಲ.
- ರಾಜ್ಯದ ಬಹುತೇಕ ಶಾಲೆಗಳು 100 ಅಂಕಗಳಿಗೆ ಕೇವಲ 40 ರಿಂದ 49.9 ಅಂಕಗಳನ್ನು ಪಡೆಯುವ ಮೂಲಕ "ಸಿ" ಗ್ರೇಡನ್ನು ಪಡೆದುಕೊಂಡಿವೆ.
- ಕೇವಲ ಐದು ಶಾಲೆಗಳು ಮಾತ್ರ 80 ರಿಂದ 89.9 ಅಂಕಗಳನ್ನು ಪಡೆಯುವ ಮೂಲಕ "ಎ"ಗ್ರೇಡ್ ಅನ್ನು ಪಡೆದುಕೊಂಡಿವೆ.
- ಸಮೀಕ್ಷೆ ಪ್ರಕಾರ 122 ಶಾಲೆಗಳು "ಸಿ" ಶ್ರೇಣಿಯನ್ನು ಹಾಗೂ 200 ಶಾಲೆಗಳು "ಡಿ" ಶ್ರೇಣಿಯನ್ನು ಪಡೆದುಕೊಂಡಿವೆ.

**ಚಿಕ್ಕೋಡಿಗೆ ಪ್ರಥಮ ಸ್ಥಾನ**

- ಚಿಕ್ಕೋಡಿ ತಾಲ್ಲೂಕಿನ ನಾಲ್ಕು ಶಾಲೆಗಳು "ಎ" ಶ್ರೇಣಿಯನ್ನು ಪಡೆಯುವ ಮೂಲಕ ಶಾಲೆ ಗುಣಮಟ್ಟದಲ್ಲಿ ಚಿಕ್ಕೋಡಿ ಪ್ರಥಮ ಸ್ಥಾನ ಪಡೆದಿದೆ.
- ಕಳೆದ ನಾಲ್ಕು ವರ್ಷಗಳ SSLC ಫಲಿತಾಂಶದಲ್ಲಿಯೂ ಸಹ ಚಿಕ್ಕೋಡಿ ಪ್ರಥಮ ಸ್ಥಾನದಲ್ಲಿದೆ.
- ಇನ್ನು ಬೀದರ್ ಜಿಲ್ಲೆಯಲ್ಲಿ ಈ ಸಮೀಕ್ಷೆಯಲ್ಲಿ ಕೊನೆಯ ಸ್ಥಾನವನ್ನು ಪಡೆದುಕೊಂಡಿದೆ. ಬೀದರ್ ನ 22 ಶಾಲೆಗಳು "ಡಿ" ಶ್ರೇಣಿಯನ್ನು ಪಡೆದುಕೊಂಡಿವೆ. ಬೀದರ್ ಜಿಲ್ಲೆ ಕಳೆದ ನಾಲ್ಕು ವರ್ಷಗಳಿಂದ SSLC ಫಲಿತಾಂಶದಲ್ಲಿ ಕೊನೆಯ ಸ್ಥಾನ ಪಡೆದಿದೆ.

**ವಾಣಿಜ್ಯ, ಇಂಜಿನಿಯರಿಂಗ್, ವೈದ್ಯಕೀಯ ಪದವಿದರರಿಗೂ 'ಬಿ.ಎಡ್ ಭಾಗ್ಯ'**

ವಾಣಿಜ್ಯ, ಇಂಜಿನಿಯರಿಂಗ್, ವೈದ್ಯಕೀಯ ಪದವಿ ಪಡೆದವರೂ ಇನ್ನು ಮುಂದೆ ಅಪೇಕ್ಷೆ ಪಟ್ಟಲ್ಲಿ ಬಿ.ಎಡ್ ಅಧ್ಯಯನ ಮಾಡಬಹುದು. ಕಲಾ ಹಾಗೂ ವಿಜ್ಞಾನ ಪದವಿಯಲ್ಲಿ ನಿರ್ದಿಷ್ಟ ಐಚ್ಛಿಕ ವಿಷಯಗಳನ್ನು ಅಧ್ಯಯನ ಮಾಡಿದವರಷ್ಟೇ ಬಿ.ಎಡ್ ಮಾಡಬೇಕೆಂಬ ಕಡ್ಡಾಯ ನಿಯಮವನ್ನು ಸಡಿಲಿಸಿರುವ ಸರ್ಕಾರ, ಯಾವುದೇ ಪದವಿ ಅಥವಾ ಸ್ನಾತಕೋತ್ತರ ಪದವಿ ಪೂರೈಸಿರುವ ಅಭ್ಯರ್ಥಿಗಳೂ ಇನ್ನು ಮುಂದೆ ಬಿ.ಎಡ್ ಶಿಕ್ಷಣಕ್ಕೆ ಪ್ರವೇಶ ಪಡೆಯಹುದೆಂಬ ಮುಕ್ತ ಅವಕಾಶ ನೀಡಿ ಆದೇಶ ಹೊರಡಿಸಿದೆ.

**ಆದೇಶದ ಬಗ್ಗೆ:**

- ಹೊಸ ಆದೇಶದ ಪ್ರಕಾರ ಕಲಾ ಮತ್ತು ವಿಜ್ಞಾನೇತರ ಪದವಿ ಪಡೆದ ಹಾಗೂ ಕಲಾ ಹಾಗೂ ವಿಜ್ಞಾನ ಪದವಿಯಲ್ಲಿ ನಿರ್ದಿಷ್ಟ ಐಚ್ಛಿಕ ವಿಷಯಗಳ ಹೊರತಾಗಿ ಯಾವುದೇ ಐಚ್ಛಿಕ ವಿಷಯಗಳನ್ನು ಅಧ್ಯಯನ ಮಾಡಿರುವ ಅಭ್ಯರ್ಥಿಗಳೂ ಬಿ.ಎಡ್ ಶಿಕ್ಷಣಕ್ಕೆ ಅರ್ಹರಾಗುತ್ತಾರೆ.
- ಹಾಗಾಗಿ ಪದವಿಯಲ್ಲಿ ನಿರ್ದಿಷ್ಟ ಶಿಕ್ಷಣ ಪಡೆಯದ ಕಾರಣ ಬಿ.ಎಡ್ ಶಿಕ್ಷಣಕ್ಕೆ ಪ್ರವೇಶ ಪಡೆಯಲು ಅರ್ಹತೆ ಇಲ್ಲದೆ ನಿರಾಶರಾಗಿದ್ದ ಯಾವುದೇ ಪದವೀಧರರೂ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಬಿ.ಎಡ್ ಶಿಕ್ಷಣಕ್ಕೆ ಪ್ರವೇಶ ಪಡೆಯಬಹುದು.
- ಅಲ್ಲದೆ ಈವರೆಗೆ ಬಿ.ಎಡ್ ಶಿಕ್ಷಣ ಅವಕಾಶ ವಂಚಿತರಾಗಿದ್ದ ವಾಣಿಜ್ಯ(ಬಿಕಾಂ, ಬಿಬಿಎಂ ಮತ್ತಿತರ), ತಾಂತ್ರಿಕ(ಬಿಇ, ಎಂಇ, ಎಂಟೆಕ್), ವೈದ್ಯಕೀಯ (ಎಂಬಿಬಿಎಸ್, ಬಿಎಸ್ಸಿ ಮತ್ತು ಎಂಎಸ್ಸಿ ನರ್ಸಿಂಗ್, ಎಂ.ಡಿ, ಎಂಎಸ್ ಮತ್ತಿತರ) ಮತ್ತಿತರ ಪದವಿ ಹಾಗೂ ಸ್ನಾತಕೋತ್ತರ ಪದವೀಧರರೂ ಬಿ.ಎಡ್ ಶಿಕ್ಷಣ ಪಡೆಯಬಹುದು .

**ನಿಯಮ ಸಡಿಸಲಿಸಲು ಏನು ಕಾರಣ?**

ಬಿ.ಎಡ್ ಶಿಕ್ಷಣದ ಪ್ರವೇಶಾತಿಗೆ ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ತು(ಎನ್‌ಸಿಟಿಇ) ರಾಷ್ಟ್ರಾದ್ಯಂತ ಏಕರೂಪತೆ ಪಾಲಿಸಲು ಈಗಾಗಲೇ ಯಾವುದೇ ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದವರು ಅರ್ಹರೆಂದು ಘೋಷಿಸಿದೆ. ಆದರೆ ಕರ್ನಾಟಕದಲ್ಲಿ ಈವರೆಗೆ ಪ್ರೌಢಶಾಲೆಯಲ್ಲಿ ಬೋಧಿಸುವ ವಿಷಯಗಳನ್ನು ಪದವಿಯಲ್ಲಿ ಅಧ್ಯಯನ ಮಾಡಿದವರಿಗೆ ಮಾತ್ರ ಬಿ.ಎಡ್ ಪ್ರವೇಶ ನೀಡಲಾಗುತ್ತಿತ್ತು. ಇದೀಗ ರಾಜ್ಯ ಸರ್ಕಾರ ಪಿಯು ಉಪನ್ಯಾಸಕರಿಗೂ ಬಿ.ಎಡ್ ಶಿಕ್ಷಣ ಕಡ್ಡಾಯಗೊಳಿಸಿದೆ.

**ಬಿ.ಎಡ್ ಗೆ ಹಿಂದಿನ ನಿಯಮ ಏನಿತ್ತು?**

ಕಲಾ ಮತ್ತು ವಿಜ್ಞಾನ ಪದವಿಯಲ್ಲಿ ಇಂಗ್ಲೀಷ್, ಕನ್ನಡ, ಹಿಂದಿ, ಉರ್ದು, ಸಂಸ್ಕೃತ ಮತ್ತು ಮರಾಠಿ ಈ ಯಾವುದಾದರೂ ಒಂದು ಭಾಷೆಯ ಜತೆಗೆ ಅಧ್ಯಯ ಮಾಡುವ ಮೂರು ಐಚ್ಛಿಕ ವಿಷಯದಲ್ಲಿ ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಭೂಗೋಳ ಶಾಸ್ತ್ರ, ಅರ್ಥಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಗಣಿತ, ಜೀವಶಾಸ್ತ್ರ, ಕನ್ನಡ, ಹಿಂದಿ, ಉರ್ದು, ಸಂಸ್ಕೃತ

ಮತ್ತು ಮರಾಠಿ(ಪ್ರೌಢಶಾಲೆಗಳಲ್ಲಿ ಬೋಧಿಸುವ ವಿಷಯಗಳು) ಇವುಗಳಲ್ಲಿ ಎರಡು ವಿಷಯಗಳನ್ನು ಅಧ್ಯಯನ ಮಾಡಿರುವುದು ಕಡ್ಡಾಯವಾಗಿತ್ತು.

**2013 ನೇ ಸಾಲಿನ ವಿವಿಧ ಪ್ರಶಸ್ತಿಗಾಗಿ ಆಯ್ಕೆ ಸಮಿತಿಗಳನ್ನು ರಚಿಸಿದ ರಾಜ್ಯ ಸರ್ಕಾರ**

ವಿವಿಧ ಕ್ಷೇತ್ರಗಳಲ್ಲಿನ ಗಣನೀಯ ಸೇವೆಗಾಗಿ ನೀಡುವ 2013ನೇ ಸಾಲಿನ ಪ್ರಶಸ್ತಿಗಳ ಆಯ್ಕೆಗಾಗಿ ರಾಜ್ಯ ಸರ್ಕಾರ ಆಯ್ಕೆ ಸಮಿತಿಗಳನ್ನು ರಚಿಸಿ ಆದೇಶ ಹೊರಡಿಸಿದೆ.

**ಸಮಿತಿಗಳ ವಿವರ:**

- **ಪ್ರೊ| ಕೆ.ಜಿ.ಕುಂದಣಗಾರ ಗಡಿನಾಡ ಸಾಹಿತ್ಯ ಪ್ರಶಸ್ತಿ:** ಡಾ| ಎಂ.ಜಿ.ಬಿರಾದಾರ್ (ಅಧ್ಯಕ್ಷರು), ನೀಲಗಂಗಾ ಚರಂತಿಮಠ, ಡಾ| ಕೃಷ್ಣಮೂರ್ತಿ ಹನೂರು, ಡಾ| ತಮಿಳು ಸೆಲ್ವಿ, ಡಾ| ಅಮರೇಶ್ ನುಗಡೋಣಿ (ಸದಸ್ಯರು).
- **ಸಂಗೊಳ್ಳಿರಾಯಣ್ಣ ಪ್ರಶಸ್ತಿ:** ಪ್ರೊ| ಚಂದ್ರಶೇಖರ ಪಾಟೀಲ (ಅಧ್ಯಕ್ಷರು). ಉಮಾ ಟೋಪಣ್ಣನವರ್, ಜಯಪ್ರಕಾಶ್ ಗೌಡ, ಶಿವಶರಣಪ್ಪ ವಾಲಿ, ಮಹಾದೇವ ಅಂಕಲಗಿ (ಸದಸ್ಯರು).
- **ಪಂಪ ಪ್ರಶಸ್ತಿ:** ಪ್ರೊ| ಜಿ.ಎಚ್.ನಾಯಕ್ (ಅಧ್ಯಕ್ಷರು). ಡಾ| ನರಹಳ್ಳಿ ಬಾಲಸುಬ್ರಹ್ಮಣ್ಯ, ಡಾ| ಮೀನಾಕ್ಷಿ ಬಾಳಿ, ನಾ.ಡಿಸೋಜ (ಸದಸ್ಯರು).
- **ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ:** ಡಾ| ಕೆ.ಆರ್.ಸಂಧ್ಯಾರೆಡ್ಡಿ (ಅಧ್ಯಕ್ಷರು). ಡಾ| ಎಚ್.ಎಸ್.ಮುಕ್ತಾಯಕ್ಕ, ಭಾನು ಮುಷ್ತಾಕ್, ಭುವನೇಶ್ವರಿ ಹೆಗಡೆ (ಸದಸ್ಯರು).
- **ಶಾಂತಲಾ ನಾಟ್ಯ ಪ್ರಶಸ್ತಿ:** ವೈಜಯಂತಿ ಕಾಶಿ (ಅಧ್ಯಕ್ಷರು). ಉಳ್ಳಾಲ್ ಮೋಹನ್ ಕುಮಾರ್, ನಾಗರತ್ನ ಹಡಗಲಿ, ಚೇತನ್ ರಾಧಾಕೃಷ್ಣ, ಜ್ಯೋತಿ ಪಟ್ಟಾಭಿರಾಮ್ (ಸದಸ್ಯರು).
- **ಜಕಣಾಚಾರಿ ಪ್ರಶಸ್ತಿ:** ಕನಕಮೂರ್ತಿ (ಅಧ್ಯಕ್ಷರು). ಈರಣ್ಣ ಪಿ. ಕಂಬಾರ, ಪಿ.ರಾಜಶೇಖರ ಆಚಾರ್ಯ, ಮಳೆಯಪ್ಪ ಬಡಿಗೇರ್, ಜ್ಞಾನೇಂದ್ರ (ಸದಸ್ಯರು).
- **ಟಿ. ಚೌಡಯ್ಯ ಪ್ರಶಸ್ತಿ:** ವೆಂಕಟೇಶ್ ಗೋಡ್ಖಿಂಡಿ (ಅಧ್ಯಕ್ಷರು). ವೆಂಕಟೇಶ್ ಕುಮಾರ್, ಎಚ್.ಎಸ್.ನಾಗರಾಜ್, ಛೋಟೆ ರೆಹ್ಮತ್ ಖಾನ್, ಇಂದೂಧರ್ ನಿರೋಡಿ (ಸದಸ್ಯರು).
- **ಬಸವ ಪುರಸ್ಕಾರ ರಾಷ್ಟ್ರೀಯ ಪ್ರಶಸ್ತಿ:** ಡಾ| ಚಂದ್ರಶೇಖರ್ ಕಂಬಾರ (ಅಧ್ಯಕ್ಷರು). ಪ್ರೊ| ಓ.ಎಲ್.ನಾಗಭೂಷಣ್ ಸ್ವಾಮಿ, ಡಾ| ಆರ್.ಪೂರ್ಣಿಮಾ, ಡಾ| ರೆಹಮತ್ ತರೀಕೆರೆ, ಡಾ| ಬಿ.ವಿ.ಶಿರೂರ (ಸದಸ್ಯರು).
- **ನಿಜಗುಣ ಪುರಂಧರ ಪ್ರಶಸ್ತಿ:** ಶ್ಯಾಮಲಾ ಜಿ. ಭಾವೆ (ಅಧ್ಯಕ್ಷರು). ಬಿ.ಕೆ.ಚಂದ್ರಮೌಳಿ, ರಾಜಲಕ್ಷ್ಮಿ ಶ್ರೀಧರ್, ಆರ್.ಎಚ್. ಮೋರೆ, ಗುರುಸ್ವಾಮಿ ಕಲ್ಕೇರಿ (ಸದಸ್ಯರು).
- **ಸಂತ ಶಿಶುನಾಳ ಷರೀಫ್ ಪ್ರಶಸ್ತಿ:** ಯಶವಂತ ಹಳಿಬಂಡಿ (ಅಧ್ಯಕ್ಷರು). ರಮಾ ಅರವಿಂದ್, ಸಿ.ವಿಶ್ವನಾಥ್ ಶೇಷಗಿರಿದಾಸ್, ಶಬ್ಬೀರ್ ಅಹ್ಮದ್ (ಸದಸ್ಯರು).

- **ಕುಮಾರವ್ಯಾಸ ಪ್ರಶಸ್ತಿ:** ಡಾ| ಲಕ್ಷ್ಮಣದಾಸ್ (ಅಧ್ಯಕ್ಷರು). ಶಾಂತಾ ಕೌತಾಳ, ಡಿ.ಆರ್.ಪಾಂಡುರಂಗ, ಡಾ| ಎಂ.ಕಿರಣಕುಮಾರ್, ಬೇಲೂರು ವಸಂತಲಕ್ಷ್ಮೀ (ಸದಸ್ಯರು).
- **ಜಾನಪದ ಶ್ರೀ ಪ್ರಶಸ್ತಿ:** ಡಾ| ಶಾಂತಿ ನಾಯಕ್ (ಅಧ್ಯಕ್ಷರು). ಡಾ| ಹಿ.ಶಿ.ರಾಮಚಂದ್ರಗೌಡ, ಸಣ್ಣಿಂಗಪ್ಪ ಸತ್ಯಪ್ಪ ಮುಶೆನಗೋಳ, ಡಾ| ವೀರಣ್ಣ ದಂಡೆ (ಸದಸ್ಯರು).
- **ವರ್ಣಶಿಲ್ಪಿ ವೆಂಕಟಪ್ಪ ಪ್ರಶಸಿ:** ಪ್ರೊ| ವಿ.ಜಿ.ಅಂದಾನಿ (ಅಧ್ಯಕ್ಷರು). ನಿರ್ಮಲಾ ಕುಮಾರಿ, ಡಿ.ಎಂ.ಬಡಿಗೇರ, ಪರುಷೋತ್ತಮ ಅಡವೆ, ಶಿವಕುಮಾರ್ ಕೆಸರಮಡು (ಸದಸ್ಯರು).
- **ಡಾ| ಗುಬ್ಬಿ ವೀರಣ್ಣ ಪ್ರಶಸಿ:** ಚಿಂದೋಡಿ ಬಂಗಾರೇಶ್ (ಅಧ್ಯಕ್ಷರು). ಗುಡಿಹಳ್ಳಿ ನಾಗರಾಜ್, ಸಿ.ಕೆ.ಗುಂಡಣ್ಣ, ಪುಷ್ಪಮಾಲಾ ಅಣ್ಣಿಗೇರಿ, ಶ್ರೀಧರ್ ಹೆಗಡೆ (ಸದಸ್ಯರು).

**ಅಲಮಟ್ಟಿ ಅಣೆಕಟ್ಟೆ ಎತ್ತರವನ್ನು 524.256 ಮೀಟರ್‌ಗೆ ಎತ್ತರಿಸಲು ಕೃಷ್ಣಾ ನ್ಯಾಯಮಂಡಳಿ ತೀರ್ಪು**

ಆಲಮಟ್ಟಿ ಅಣೆಕಟ್ಟೆ ಎತ್ತರವನ್ನು 519.6 ಮೀಟರ್‌ನಿಂದ 524.256 ಮೀಟರ್‌ಗೆ ಎತ್ತರಿಸಲು ಕೃಷ್ಣಾ ನ್ಯಾಯಮಂಡಳಿ ಹಸಿರು ನಿಶಾನೆ ತೋರಿದೆ. ಇದರಿಂದ ರಾಜ್ಯದ ಕಾನೂನು ಹೋರಾಟಕ್ಕೆ ಐತಿಹಾಸಿಕ ಗೆಲುವು ಸಿಕ್ಕಂತಾಗಿದೆ. ಅಣೆಕಟ್ಟೆ ಎತ್ತರವನ್ನು ಪ್ರಶ್ನಿಸಿದ್ದ ಆಂಧ್ರಪ್ರದೇಶಕ್ಕೆ ಹಿನ್ನಡೆಯಾದಂತಾಗಿದೆ. ಮಹಾರಾಷ್ಟ್ರ, ಕರ್ನಾಟಕ ಹಾಗೂ ಮತ್ತು ಆಂಧ್ರಪ್ರದೇಶ ನಡುವಣ ಕೃಷ್ಣಾ ನದಿ ನೀರಿನ ವಿವಾದ ಇತ್ಯರ್ಥಪಡಿಸಲು ನೇಮಕಗೊಂಡಿರುವ ನ್ಯಾ. ಬ್ರಿಜೇಶ್ ಕುಮಾರ್ ನೇತೃತ್ವದ ನ್ಯಾಯಮಂಡಳಿ ಆಲಮಟ್ಟಿ ಅಣೆಕಟ್ಟೆ ಎತ್ತರವನ್ನು 519.6 ಮೀಟರ್‌ಗೆ ನಿಗದಿಪಡಿಸಬೇಕೆಂದು ಮನವಿ ಮಾಡಿ ಆಂಧ್ರ ಸಲ್ಲಿಸಿದ್ದ ಅರ್ಜಿಯನ್ನು ವಜಾ ಮಾಡಿತು. ಎಲ್ಲ ಅರ್ಜಿಗಳ ಸುದೀರ್ಘ ವಿಚಾರಣೆ ನಡೆಸಿದ ನ್ಯಾಯಮಂಡಳಿ ಆಲಮಟ್ಟಿ ಅಣೆಕಟ್ಟೆ ಎತ್ತರವನ್ನು 524. 256 ಮೀಟರ್ ಗೆ ಎತ್ತರಿಸಬಹುದು ಎಂದು 2010ರಲ್ಲಿ ನೀಡಿರುವ ತೀರ್ಪನ್ನು ಎತ್ತಿ ಹಿಡಿಯಿತು.

**ಐತಿಹಾಸಿ ತೀರ್ಪು:**

ಕರ್ನಾಟಕ ಅಗತ್ಯಕ್ಕಿಂತ ದೊಡ್ಡ ಗಾತ್ರದ ಅಣೆಕಟ್ಟೆ ಕಟ್ಟುತ್ತಿದೆ. ಇದಕ್ಕೆ ಅವಕಾಶ ಕೊಟ್ಟರೆ ಆಂಧ್ರದ ಜನರ ಹಿತಾಸಕ್ತಿಗೆ ಧಕ್ಕೆ ಆಗಲಿದೆ. ಅಲ್ಲದೆ, ನ್ಯಾಯಮಂಡಳಿ ಶೇ 75ರಷ್ಟು ಅವಲಂಬನೆ ಆಧಾರದಲ್ಲಿ ಕೈಗೊಳ್ಳಬಹುದೆಂದು ಹೇಳಿರುವ ಯೋಜನೆಗಳಿಗೆ ಧಕ್ಕೆ ಆಗಲಿದೆ ಎಂಬ ವಾದವನ್ನು ನ್ಯಾಯಮಂಡಳಿ ತಳ್ಳಿ ಹಾಕಿದೆ. ಅಣೆಕಟ್ಟೆ ಎತ್ತರವನ್ನು 524.256 ಮೀಟರ್ ಗೆ ಎತ್ತರಿಸಲು ಅನುಮತಿ ನೀಡಿದರೆ ಆಂಧ್ರಕ್ಕೆ ಹರಿದು ಬರುವ ನೀರಿಗೆ ತೊಂದರೆ ಆಗುತ್ತದೆ ಎಂಬ ವಾದವನ್ನು ನ್ಯಾಯಮಂಡಳಿ ಒಪ್ಪಿಲ್ಲ. ಆಲಮಟ್ಟಿ ಅಣೆಕಟ್ಟೆ ಎತ್ತರಿಸಬೇಕೆಂಬ ಕರ್ನಾಟಕ ವಾದಕ್ಕೆ ಕೃಷ್ಣಾ ನ್ಯಾಯಮಂಡಳಿ ಕಿವಿಗೊಟ್ಟಿರುವು ದರಿಂದ ಹೊಸದಾಗಿ ಎಂಟು ಯೋಜನೆಗಳನ್ನು ಕೈಗೆತ್ತಿಕೊಳ್ಳಲು ದಾರಿಯಾದಂತಾಗಿದೆ.

**ತೀರ್ಪು ಏನು?**

- ಕೃಷ್ಣಾ ನ್ಯಾಯಮಂಡಳಿ ಐ ತೀರ್ಪಿನಲ್ಲಿ ಮೂರು ರಾಜ್ಯಗಳಿಗೂ ಹಂಚಿಕೆ ಮಾಡಿ ಉಳಿದ ಹೆಚ್ಚುವರಿ ನೀರಿನ ಮೇಲೆ ಆಂಧ್ರ ಪ್ರದೇಶಕ್ಕೆ ಯಾವುದೇ ಹಕ್ಕೂ ಇಲ್ಲ ಎಂದು ನ್ಯಾಯಮಂಡಳಿ ಹೇಳಿದೆ.
- ಮೂರು ರಾಜ್ಯಗಳಿಗೂ ಐತೀರ್ಪಿನಲ್ಲಿ ಮಹಾರಾಷ್ಟ್ರ, ಕರ್ನಾಟಕ ಹಾಗೂ ಆಂಧ್ರಕ್ಕೆ 2578 ಟಿಎಂಸಿ ಅಡಿ ನೀರು ಹಂಚಿಕೆ ಮಾಡಿದ ಮೇಲೂ 513 ಟಿಎಂಸಿ ಅಡಿ ನೀರು ಹೆಚ್ಚುವರಿಯಾಗಿ ಸಿಗುತ್ತಿದೆ.
- ಮೂರೂ ರಾಜ್ಯಗಳೂ ಹೆಚ್ಚುವರಿ ನೀರಿನ ಮೇಲೆ ಸೂಕ್ತ ವೇದಿಕೆ ಮುಂದೆ ತಮ್ಮ ಹಕ್ಕು ಪ್ರತಿಪಾದಿಸಬಹುದು ಎಂದು ನ್ಯಾಯಮಂಡಳಿ ಹೇಳಿದೆ.

**ಕೃಷ್ಣಾ ನ್ಯಾಯಮಂಡಳಿಯ ಐತೀರ್ಪು:**

ಕರ್ನಾಟಕಕ್ಕೆ 907, ಮಹಾರಾಷ್ಟ್ರಕ್ಕೆ 666 ಮತ್ತು ಆಂಧ್ರಕ್ಕೆ 1005 ಅಡಿ ನೀರನ್ನು ಹಂಚಿಕೆ ಮಾಡಿದೆ. ಈಗ ಹೆಚ್ಚುವರಿ ನೀರನ್ನು ನದಿ ಕೆಳಗಿನ ಕೊನೆಯ ರಾಜ್ಯವಾದ ಆಂಧ್ರ ಬಳಸುತ್ತಿದೆ. ಆದರೆ, ಈ ನೀರಿನ ಮೇಲೆ ಅದಕ್ಕೆ ಯಾವುದೇ ಹಕ್ಕಿಲ್ಲ. ಹೆಚ್ಚುವರಿ ನೀರಿನ ಹಂಚಿಕೆ ಕುರಿತು ಸೂಕ್ತ ವೇದಿಕೆ ತೀರ್ಮಾನ ಮಾಡು ವವರೆಗೂ ಆಂಧ್ರ ಈ ನೀರನ್ನು ಬಳಕೆ ಮಾಡಬಹುದು ಎಂದು ನ್ಯಾಯಮಂಡಳಿ ತಿಳಿಸಿದೆ.

## ಏಡ್ಸ್ ಮತ್ತು ಕುಷ್ಠರೋಗ ಪೀಡಿತರ ಮಕ್ಕಳಿಗೆ ಉಚಿತ ಉನ್ನತ ಶಿಕ್ಷಣ ಮತ್ತು ವಿದ್ಯಾರ್ಥಿ ವೇತನ

ಏಡ್ಸ್ ದಿನಾಚರಣೆ ಪ್ರಯುಕ್ತ ಏಡ್ಸ್ ಮತ್ತು ಕುಷ್ಠರೋಗ ಪೀಡಿತರಿಗೊಂದು ಸಿಹಿ ಸುದ್ದಿ. ಎಚ್ಐವಿ ಅಥವಾ ಕುಷ್ಠರೋಗಗಳಿಂದ ಬಳಲುತ್ತಿರುವ ಮಕ್ಕಳಿಗೆ ಉಚಿತ ಉನ್ನತ ಶಿಕ್ಷಣ ಮತ್ತು ವಿದ್ಯಾರ್ಥಿ ವೇತನ ನೀಡುವ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಉನ್ನತ ಶಿಕ್ಷಣ ಇಲಾಖೆ ಕೆಲವು ಮಾರ್ಗಸೂಚಿಗಳನ್ನು ಸಿದ್ಧಪಡಿಸಿದೆ. ಈ ಮೂಲಕ ಏಡ್ಸ್ ಅಥವಾ ಕುಷ್ಠರೋಗದಿಂದ ಬಳಲುತ್ತಿರುವ ವಿದ್ಯಾರ್ಥಿಗಳು ಅಥವಾ ಏಡ್ಸ್ ಅಥವಾ ಕುಷ್ಠರೋಗಕ್ಕೆ ತುತ್ತಾಗಿರುವ ಪಾಲಕರ ಮಕ್ಕಳು ಸರ್ಕಾರಿ ಹಾಗೂ ಅನುದಾನಿತ ಸಂಸ್ಥೆಗಳಲ್ಲಿ ಸರ್ಟಿಫಿಕೇಟ್ ಕೋರ್ಸ್, ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿಯನ್ನು ಉಚಿತವಾಗಿ ಪಡೆದುಕೊಳ್ಳುವಂತೆ ಮಾಡಲು ಕಾಲೇಜು ಮತ್ತು ಕಾಲೇಜು ಶಿಕ್ಷಣ ಇಲಾಖೆ ಕೆಲವು ಮಾರ್ಗಸೂಚಿಗಳನ್ನು ಅನುಸರಿಸಬೇಕಾಗುತ್ತದೆ. ಈ ಯೋಜನೆಯಲ್ಲಿ ಬರುವ ಫಲಾನುಭವಿಗಳಿಗೆ 2014ರ ಫೆಬ್ರವರಿ ಅಂತ್ಯದೊಳಗೆ ವಿದ್ಯಾರ್ಥಿಗಳ ಖಾತೆಗೆ ವಾರ್ಷಿಕ 5000 ಹಣ ಸೇರಲಿದೆ.

**ಏನಿದು ಯೋಜನೆ?**

- 2013- 14ನೇ ಸಾಲಿನ ಬಜೆಟ್ನಲ್ಲಿ ಈ ಯೋಜನೆ ಪ್ರಕಟಿಸಲಾಗಿದೆ. ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿರುವ 362 ಸರ್ಕಾರಿ ಕಾಲೇಜುಗಳು ಮತ್ತು 314 ಖಾಸಗಿ ಅನುದಾನಿತ ಕಾಲೇಜುಗಳ ಪೈಕಿ ಜಿಲ್ಲಾವಾರು, ಪ್ರತಿ ಜಿಲ್ಲೆಗೆ ಅಂದಾಜು 10 ವಿದ್ಯಾರ್ಥಿಗಳನ್ನು ಈ ಯೋಜನೆಯ ವಿದ್ಯಾರ್ಥಿ ವೇತನಕ್ಕೆ ಪರಿಗಣಿಸಬೇಕು.
- ಆ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣದೊಂದಿಗೆ ವಾರ್ಷಿಕವಾಗಿ ಅಂದಾಜು 500 ವಿದ್ಯಾರ್ಥಿ ವೇತನ ಮಂಜೂರು ಮಾಡಲು ತಿಳಿಸಲಾಗಿತ್ತು.
- ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರುಗಳು ಎಚ್ಐವಿ ಮತ್ತು ಕುಷ್ಠರೋಗಗಳಿಂದ ಬಳಲುತ್ತಿರುವ ವಿದ್ಯಾರ್ಥಿಗಳನ್ನು ಕೋರ್ಸ್ವಾರು, ಸಂಸ್ಥೆವಾರು, ಲಿಂಗವಾರು ಮತ್ತು ಪಂಗಡವಾರು ಫಲಾನುಭವಿಗಳನ್ನು ಗುರುತಿಸಿ ಅವರ ಪಟ್ಟಿ ಸಿದ್ಧಪಡಿಸಬೇಕು.
- ಆ ಪಟ್ಟಿಯನ್ನು ಡಿಸೆಂಬರ್ 31ರೊಳಗೆ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರ ಕಚೇರಿಗೆ ಕಳುಹಿಸಬೇಕು.

**ಅನುದಾನ:**

ಅರ್ಹ ವಿದ್ಯಾರ್ಥಿಗಳಿಗೆ 2014 ಫೆಬ್ರವರಿಯಲ್ಲಿ ಅರ್ಹ ಶುಲ್ಕ ಮರುಪಾವತಿ ಮಾಡುವುದು ಹಾಗೂ ನಿಗದಿಪಡಿಸಿರುವ ವಿದ್ಯಾರ್ಥಿ ವೇತನವನ್ನು ಸರ್ಕಾರ ಬಿಡುಗಡೆ ಮಾಡಬೇಕಾಗಿರುತ್ತದೆ. ಪ್ರಮುಖ ಮಾರ್ಗಸೂಚಿಗಳು ಈ ಯೋಜನೆಯ ಫಲಾನುಭವಿಗಳು ಬೇರೆ ಯೋಜನೆ ಪಡೆಯುತ್ತಿದ್ದಾರೆಯೇ ಪರಿಶೀಲಿಸುವುದು ಫಲಾನುಭವಿಗಳ ಅರ್ಹತೆ ಮತ್ತು ಆರೋಗ್ಯ ಸ್ಥಿತಿಯನ್ನು ವೈದ್ಯರಿಂದ ದೃಢೀಕರಿಸುವುದು ವಿದ್ಯಾರ್ಥಿ ವೇತನ ಹಾಗೂ ಶುಲ್ಕ ಮರುಪಾವತಿ ಮೊತ್ತವನ್ನು ಸೂಕ್ತ ದಾಖಲೆಗಳೊಂದಿಗೆ ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡುವುದು ಕೆಟಿಪಿಪಿ ನಿಯಮಗಳನ್ನು ಹಾಗೂ ಪ್ರಚಲಿತ ನಿಯಮಗಳನ್ನು ಚಾಚೂ ತಪ್ಪದೇ ಪಾಲಿಸುವುದು

**ಬೆಂಗಳೂರು ಅಂತಾರಾಷ್ಟ್ರೀಯ ಸಿನಿಮೋತ್ಸವ 2013 ಕ್ಕೆ ಸರ್ಕಾರದ ಸಿದ್ಧತೆ**

ಬೆಂಗಳೂರು ಅಂತಾರಾಷ್ಟ್ರೀಯ ಸಿನಿಮೋತ್ಸವವು ಡಿಸೆಂಬರ್ 26 ರಿಂದ 8 ದಿನಗಳ ಕಾಲ ನಡೆಯಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಚಲನಚಿತ್ರೋತ್ಸವದಲ್ಲಿ 150 ಕ್ಕೂ ಅಧಿಕ ಚಿತ್ರಗಳು ಪ್ರದರ್ಶನಗೊಳ್ಳುತ್ತಿದ್ದು, ರಾಜ್ಯ ಸರ್ಕಾರ 2 ಕೋಟಿ ಸಹಾಯಧನ ನೀಡಿದೆ.

**45 ದೇಶಗಳ 150 ಚಿತ್ರ:**

ಬೆಂಗಳೂರು ಅಂತಾರಾಷ್ಟ್ರೀಯ ಸಿನಿಮೋತ್ಸವದ ಆರನೇ ಆವೃತ್ತಿಯು ಡಿಸೆಂಬರ್ 26 ಕ್ಕೆ ಉದ್ಘಾಟನೆಗೊಳ್ಳಲಿದ್ದು, ಡಿಸೆಂಬರ್ 27 ರಿಂದ ಜನವರಿ 2 ರವರೆಗೆ ನಿಯಮಿತ ಪ್ರದರ್ಶನಗಳು ನಡೆಯಲಿವೆ. ಪ್ರಸಕ್ತ ಸಾಲಿನ ಚಿತ್ರೋತ್ಸವದಲ್ಲಿ 45 ದೇಶಗಳ 150 ಚಿತ್ರಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಆಸ್ಕರ್ ಪ್ರಶಸ್ತಿಯ ಪೈಪೋಟಿಯಲ್ಲಿರುವ 14 ಚಿತ್ರಗಳು ಇಲ್ಲಿ ಪ್ರದರ್ಶನವಾಗುತ್ತಿರುವುದು ಉತ್ಸವದ ವಿಶೇಷ ರಂಗಾಗಿದೆ. ಬರ್ಲಿನ್, ಕಾನ್, ಕಾರ್ಲೋವಿವಾರಿ, ಮಾಸ್ಕೋ, ವೆನಿಸ್, ಟೊರೊಂಟೊ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಪ್ರಶಸ್ತಿ ಪಡೆದ ಚಿತ್ರಗಳು ಕೂಡ ಇಲ್ಲಿ ಪ್ರದರ್ಶನಗೊಳ್ಳುತ್ತಿವೆ.

**ಯಾವ ಯಾವ ಚಿತ್ರಗಳು?**

ಕರ್ನಾಟಕದ ಉಪಭಾಷೆಗಳಾದ ತುಳು ಹಾಗೂ ಬಂಜಾರದ ಚಿತ್ರಗಳು ಸೇರಿದಂತೆ ವಿಶ್ವವಿಖ್ಯಾತ ನಿರ್ದೇಶಕರಾದ ಆಂದ್ರೆ ವಜಡ, ಅಸ್ಗರ್ ಫರಾದಿ, ಇಸ್ತ್ವಾನ್ ಜಾಬೋ, ಫ್ರಾನ್ಸ್ವಾ ಓಜೋನ್, ಸುಸಾನ್ ಬ್ಲೈರ್, ಗೊರಾನ್ ಪಾಸ್ಕಯವಿಚ್, ಮೈಕ್ ಲೈ, ಡೆನ್ನಿಸ್ ಕ್ಲೇಯರ್ ಅವರ ಚಿತ್ರಗಳು ಪ್ರದರ್ಶನಗೊಳ್ಳುತ್ತಿವೆ. ಜಪಾನ್, ಚೀನ, ಕೊರಿಯಾ, ಪಿಲಿಪಿನ್ಸ್, ಕಜಗಿಸ್ತಾನ್, ಬಾಂಗ್ಲಾದೇಶ, ಶ್ರೀಲಂಕ, ಇಂಡೋನೇಷಿಯಾ ಹಾಗೂ ಐರೋಪ್ಯ ದೇಶಗಳ ನಿರ್ದೇಶಕರ ಚಿತ್ರ ಸೇರಿದಂತೆ ಸೇರಿದಂತೆ 45 ದೇಶಗಳ ಚಿತ್ರಗಳು ಪ್ರದರ್ಶನಗೊಳ್ಳಲಿವೆ. ಈ ಬಾರಿ 45 ದೇಶಗಳ 150 ಚಿತ್ರಗಳು ಪ್ರದರ್ಶನಕ್ಕೆ ಆಯ್ಕೆ ಚಿತ್ರೋತ್ಸವದ ವಿವರ - ಜಾಗತಿಕ ಚಿತ್ರ 50 - ಏಷ್ಯನ್ ಚಿತ್ರ 10 - ಭಾರತೀಯ ಚಿತ್ರ 10 - ಕನ್ನಡ ಚಿತ್ರ 10 - ಕರ್ನಾಟಕದ ಉಪಭಾಷೆ ಚಿತ್ರ 2 - ವಿಶೇಷ ವಿಭಾಗ- ಗೊರಾನ್ ಪಾಸ್ಕಯವಿಚ್, ಮೈಕ್ ಲೈ, ಡೆನ್ನಿಸ್ ಕ್ಲೇಯರ್, ಮಾಲಿನಿ ಫೋನ್ಸೇಕ ಅವರ ಚಿತ್ರಗಳು - ತೈವಾನ್-ಜರ್ಮನಿಯ 10 ಚಿತ್ರ - ಭಾರತೀಯ ಚಿತ್ರ ವಿಶೇಷ ವಿಭಾಗ- ಡಾ.ರಾಜ್‌ಕುಮಾರ್ ಅವರ 5 ಚಿತ್ರ, ಬಿಮಲ್ ರಾಯ್ ಅವರ 5 ಚಿತ್ರ - ದಕ್ಷಿಣ ಅಮೆರಿಕ ಚಿತ್ರ 7 - ರೈಲು ಚಿತ್ರ 5 - ವಿಮರ್ಶಕರ ಆಯ್ಕೆಯ ಚಿತ್ರ 5 - ಏಷ್ಯನ್ ಸ್ಪರ್ಧಾ ವಿಜೇತ ಚಿತ್ರ 5 - ಜಪಾನ್ ಸಮುರಾಯ್ ಚಿತ್ರ 4 - ಇಟಾಲಿಯನ್ ನವವಾಸ್ತವವಾದಿ ಚಿತ್ರ 4 - ರಿತುಪರ್ಣ ಘೋಷ್ ಶ್ರದ್ಧಾಂಜಲಿ ಚಿತ್ರ

**<u>ಆತ್ಮಹತ್ಯೆ ಪ್ರಮಾಣದಲ್ಲಿ ದೇಶದಲ್ಲೇ ಎರಡನೇ ನಗರ ಎಂಬ ಅಪಖ್ಯಾತಿಗೆ ಬೆಂಗಳೂರು</u>**

ಐಟಿಬಿಟಿ, ಉದ್ಯಾನನಗರಿ ಎಂದೇ ಪ್ರಸಿದ್ಧಿಯಾಗಿರುವ ಬೆಂಗಳೂರು, ಇದೀಗ ಆತ್ಮಹತ್ಯೆ ಪ್ರಮಾಣದಲ್ಲೂ ದೇಶದಲ್ಲೇ ಎರಡನೇ ನಗರ ಎಂಬ ಅಪಖ್ಯಾತಿಗೆ ತುತ್ತಾಗಿದೆ. ಬೆಂಗಳೂರಿನಲ್ಲಿ ಪ್ರತಿ ವರ್ಷ, ಲಕ್ಷಕ್ಕೆ 24 ಜನರಂತೆ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಇನ್ನು ನಂ.1 ಸ್ಥಾನದಲ್ಲಿರುವ ಚೆನ್ನೈನಲ್ಲಿ ಪ್ರತಿ ಲಕ್ಷಕ್ಕೆ 29 ಜನ ಸಾವನ್ನಪ್ಪುತ್ತಿದ್ದಾರೆ. ಆದರೆ ಮತ್ತೊಂದು ಮಹಾನಗರಿ ಕೋಲ್ಕತಾದಲ್ಲಿ ಈ ಪ್ರಮಾಣ ಕೇವಲ 2.6ರಷ್ಟಿದೆ ಎಂದು ರಾಷ್ಟ್ರೀಯ ಅಪರಾಧ ಬ್ಯೂರೋ ತನ್ನ ಇತ್ತೀಚಿನ ವರದಿಯಲ್ಲಿ ಹೇಳಿದೆ.

**ಕಾರಣ ಏನು?**

ಮಹಾನಗರಗಳಿಗೆ ಉದ್ಯೋಗ ಅರಸಿ ಬರುವವರ ಸಂಖ್ಯೆ ಹೆಚ್ಚು. ಹೀಗೆ ಬರುವವರಲ್ಲಿ ಹೆಚ್ಚಿನವರು ಉನ್ನತ ಶಿಕ್ಷಣ ಪಡೆದು ಬಂದಿರುತ್ತಾರೆ. ಹೆಚ್ಚೆಚ್ಚು ಪದವಿ ಹೊಂದಿದ್ದಂತೆ ಆಕಾಂಕ್ಷೆಗಳೂ ಹೆಚ್ಚಾಗಿರುತ್ತವೆ. ಇದು ಹೆಚ್ಚಿನ ನಿರಾಶೆ ಮತ್ತು ಒತ್ತಡಕ್ಕೆ ಕಾರಣವಾಗುತ್ತದೆ. ಇಂತಹ ಒತ್ತಡವನ್ನು ತಾಳಲಾರದೆ ಆತ್ಮಹತ್ಯೆಯ ಪ್ರಕರಣಗಳು ಹೆಚ್ಚುತ್ತಿವೆ. ಮೆಟ್ರೋ ನಗರಗಳಲ್ಲಿ ಬಹುಬೇಗನೆ ಬದಲಾಗುವ ಆರ್ಥಿಕ ಪರಿಸ್ಥಿತಿ ಮತ್ತು ಕೆಲಸದ ಒತ್ತಡಗಳಿಗೆ ಹೊಂದಿಕೊಳ್ಳಲು ಜನ ಕಷ್ಟ ಪಡುತ್ತಿದ್ದಾರೆ. ಇದು ಆತ್ಮಹತ್ಯೆಯ ಸಂಖ್ಯೆ ಹೆಚ್ಚಾಗಲು ಕಾರಣ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ)ಯ ಮನೋವೈದ್ಯರು ತಿಳಿಸಿದ್ದಾರೆ.

**ಕೊಲ್ಕತಾ ಉತ್ತಮ:**

ಉಳಿದ ಮೆಟ್ರೋ ನಗರಗಳಿಗೆ ಹೋಲಿಸಿದರೆ ಕೊಲ್ಕತಾದಲ್ಲಿ ಇನ್ನು ಸಂಸ್ಕೃತಿ ಬೇರೆ ನಗರಗಳಷ್ಟು ಬದಲಾಗಿಲ್ಲ. ಹೀಗಾಗಿ ಸ್ಥಳೀಯ ಜನರಿಗೆ ಒಂದು ಮನೋಸ್ಥಿತಿಯಿಂದ ಮತ್ತೊಂದು ಮನೋಸ್ಥಿತಿಗೆ ಬದಲಾಗಲು ಕಾಲಾವಕಾಶ ಸಿಕ್ಕಿದೆ. ಇದು ಜನರಿಗೆ ಒತ್ತಡವನ್ನು ಎದುರಿಸುವ ಸಾಮರ್ಥ್ಯವನ್ನು ದಕ್ಕಿಸಿಕೊಟ್ಟಿದೆ. ಹೀಗಾಗಿ ಕೊಲ್ಕತಾದಲ್ಲಿ ಆತ್ಮಹತ್ಯೆ ಪ್ರಮಾಣ ಕಡಿಮೆ ಇದೆ ಎಂದು ಅವರು ತಿಳಿಸಿದ್ದಾರೆ.

**ಕೆಲಸದ ಕಿರಿಕಿರಿ:**

ಉದ್ಯೋಗ ಸಮಸ್ಯೆಯಿಂದಾಗಿ 2011ರಲ್ಲಿ ಬೆಂಗಳೂರಿನಲ್ಲಿ 47 ಜನ ಆತ್ಮಹತ್ಯೆಗೆ ಶರಣಾಗಿದ್ದರೆ, 2012ರಲ್ಲಿ ಈ ಸಂಖ್ಯೆ 89ಕ್ಕೆ ಏರಿದೆ. ಇನ್ನು ಇಡೀ ಕರ್ನಾಟಕದಲ್ಲಿ ಉದ್ಯೋಗ ಸಂಬಂಧಿ ಕಾರಣಗಳಿಗಾಗಿ 2012ರಲ್ಲಿ 166 ಜನ ಸಾವನ್ನಪ್ಪಿದ್ದು, ಈ ಪೈಕಿ ಶೇ.50ರಷ್ಟು ಬೆಂಗಳೂರಿನದ್ದೇ ಆಗಿದೆ.

# ರಾಷ್ಟ್ರೀಯ

**"ಸಿಬಿಐ ಸಂವಿಧಾನ ಬಾಹಿರ" ಎಂದು ವಿವಾದಾತ್ಮಕ ತೀರ್ಪು ನೀಡಿದ ಗುವಹಾಟಿ ಹೈಕೋರ್ಟ್**

'ಸಿಬಿಐ ಸಂವಿಧಾನಬಾಹಿರ' ಎಂದು ಗುವಾಹಟಿ ಹೈಕೋರ್ಟ್ ನೀಡಿದ್ದ ವಿವಾದಾತ್ಮಕ ತೀರ್ಪು ಇದೀಗ ಹೊಸ ಬಿಕ್ಕಟ್ಟಿಗೆ ಕಾರಣವಾಗಿದೆ. ಕೇಂದ್ರ ಸರ್ಕಾರವು ಗುವಾಹಟಿ ಹೈಕೋರ್ಟ್‌ನ ತೀರ್ಪನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಮುಂದಾಗಿದೆ.

**1963 ರ ಠರಾವು ರದ್ದು:**

ಸಿಬಿಐ ಸ್ಥಾಪನೆಗೆ ಸಂಬಂಧಿಸಿದಂತೆ 1963 ರ ಏಪ್ರಿಲ್ 1 ರಂದು ಗೃಹ ಸಚಿವಾಲಯ ಹೊರಡಿಸಿದ್ದ ಠರಾವನ್ನು ಕೋರ್ಟ್ ರದ್ದು ಪಡಿಸಿದೆ. ಸಿಬಿಐ ಒಂದು ಸಂಸ್ಥೆಯೂ ಅಲ್ಲ, ದೆಹಲಿ ವಿಶೇಷ ಪೊಲೀಸ್ ಸ್ಥಾಪನೆ ( ಡಿಎಸ್‌ಪಿಇ) ಕಾಯ್ದೆಯ ಭಾಗವೂ ಅಲ್ಲ. ಹೀಗಾಗಿ ಈ ಸಂಸ್ಥೆಯನ್ನು 'ಪೊಲೀಸ್ ಪಡೆ' ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ನ್ಯಾಯಮೂರ್ತಿಗಳಾದ ಐ.ಎ.ಅನ್ಸಾರಿ ಹಾಗೂ ಇಂದಿರಾ ಷಾ ಅವರಿದ್ದ ವಿಭಾಗೀಯ ಪೀಠ ಹೇಳಿದೆ. ಠರಾವಿನ ಮೂಲಕ ಸಿಬಿಐ ಸ್ಥಾಪನೆ ಕುರಿತು 2007ರಲ್ಲಿ ಹೈಕೋರ್ಟ್ ಏಕಸದಸ್ಯ ಪೀಠ ನೀಡಿದ್ದ ಆದೇಶವನ್ನು ಪ್ರಶ್ನಿಸಿ, ನವೇಂದ್ರ ಕುಮಾರ್ ಎಂಬುವವರು ಮೇಲ್ಮನವಿ ಸಲ್ಲಿಸಿದ್ದರು.

**ಠರಾವಿನ ಹಿನ್ನೆಲೆ:**

1946 ರ ಡಿಎಸ್‌ಪಿಇ ಕಾಯ್ದೆ ಅಡಿಯಲ್ಲಿ ಸಿಬಿಐ ಸ್ಥಾಪನೆಗೊಂಡಿದೆ. 'ಸಿಬಿಐ ಸ್ಥಾಪನೆಗೆ ಸಂಬಂಧಿಸಿ ಗೃಹ ಸಚಿವಾಲಯ ಹೊರಡಿಸಿದ್ದ ಠರಾವು ಕೇಂದ್ರ ಸಂಪುಟದಲ್ಲಿ ತೆಗೆದುಕೊಂಡ ನಿರ್ಧಾರವಾಗಿರಲಿಲ್ಲ. ಅಲ್ಲದೇ ಇದಕ್ಕೆ ರಾಷ್ಟ್ರಪತಿ ಅಂಕಿತ ಕೂಡ ಬಿದ್ದಿರಲಿಲ್ಲ. ಹಾಗಾಗಿ ಈ ಠರಾವನ್ನು ''ಕಾಯ್ದೆ'' ಎಂದು ಪರಿಗಣಿಸಲು ಆಗದು' ಎಂದು ತೀರ್ಪಿನಲ್ಲಿ ಹೇಳಲಾಗಿದೆ. ಕುಮಾರ್ ವಿರುದ್ಧ ಸಿಬಿಐ ಸಲ್ಲಿಸಿದ್ದ ಆರೋಪಪಟ್ಟಿಯನ್ನು ಕೂಡ ಕೋರ್ಟ್ ವಜಾ ಮಾಡಿದೆ. 'ಪ್ರಕರಣ ದಾಖಲಿಸುವುದು, ಬಂಧಿಸುವುದು, ಶೋಧ ನಡೆಸುವುದು, ಜಪ್ತಿ ಮಾಡುವುದು, ಆರೋಪಿಯ ವಿರುದ್ಧ ಕಾನೂನು ಕ್ರಮ ಜರುಗಿಸುವುದು ಮತ್ತಿತರ ಸಿಬಿಐ ಕ್ರಮಗಳು ಅಸಾಂವಿಧಾನಿಕ' ಎಂದೂ ಪೀಠ ಹೇಳಿದೆ. 'ಡಿಎಸ್‌ಪಿಇ ಕಾಯ್ದೆ ಅಡಿಯಲ್ಲಿ ಸ್ಥಾಪನೆಯಾದ ದೆಹಲಿ ವಿಶೇಷ ಪೊಲೀಸ್ ವ್ಯವಸ್ಥೆಯನ್ನು ಮಾತ್ರ ಶಾಸನ ಬದ್ಧ ಸಂಸ್ಥೆ ಎಂದು ಪರಿಗಣಿಸಬಹುದು. ಆದರೆ, ಸಿಬಿಐ ಶಾಸನ ಬದ್ಧ ಸಂಸ್ಥೆಯೇ ಅಲ್ಲ' ಎಂದೂ ಅದು ಸ್ಪಷ್ಟವಾಗಿ ತಿಳಿಸಿದೆ.

**1941 ರ ವಿಶೇಷ ಪೊಲೀಸ್ ವ್ಯವಸ್ಥೆ (ಎಸ್‌ಪಿಇ):**

1941ರಲ್ಲಿ ಸ್ಥಾಪನೆಯಾದ ವಿಶೇಷ ಪೊಲೀಸ್ ವ್ಯವಸ್ಥೆ (ಎಸ್‌ಪಿಇ) ಮುಂದೆ ಸಿಬಿಐ ಎಂದು ಮಾರ್ಪಾಟುಗೊಂಡಿತು. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಭಾರತ ಸರ್ಕಾರದ ಯುದ್ಧ ಮತ್ತು ಸರಬರಾಜು ವಿಭಾಗದಲ್ಲಿ ಲಂಚ ಮತ್ತು ಭ್ರಷ್ಟಾಚಾರ ಪ್ರಕರಣಗಳನ್ನು ತನಿಖೆ ಮಾಡುವುದು 'ಎಸ್‌ಪಿಇ' ಕೆಲಸವಾಗಿತ್ತು. ಯುದ್ಧದ ನಂತರವೂ ಕೇಂದ್ರ ಸರ್ಕಾರಿ ನೌಕರರ ಭ್ರಷ್ಟಾಚಾರ ಪ್ರಕರಣಗಳನ್ನು ತನಿಖೆ ಮಾಡುವ ಅನಿವಾರ್ಯತೆ ಮನಗಂಡ ಸರ್ಕಾರ, 1946ರಲ್ಲಿ ದೆಹಲಿ ವಿಶೇಷ ಪೊಲೀಸ್ ವ್ಯವಸ್ಥೆ

ಕಾಯ್ದೆಯನ್ನು (ಡಿಎಸ್‌ಪಿಇ) ಜಾರಿಗೆ ತಂದಿತು. ಈ ಕಾಯ್ದೆಯಿಂದಾಗಿ 'ಎಸ್‌ಪಿಇ'ಯ ಮೇಲ್ವಿಚಾರಣೆ ಗೃಹ ಸಚಿವಾಲಯದ ಸುರ್ಪದಿಗೆ ಬಂತು. ಎಲ್ಲ ಕೇಂದ್ರಾಡಳಿತ ಪ್ರದೇಶದ ಸರ್ಕಾರಿ ನೌಕರರು 'ಡಿಎಸ್‌ಪಿಇ' ವ್ಯಾಪ್ತಿಗೆ ಬಂದರು. ಆಯಾ ರಾಜ್ಯ ಸರ್ಕಾರಗಳ ಅನುಮತಿಯಿಂದ ಇದನ್ನು ರಾಜ್ಯಗಳಿಗೂ ವಿಸ್ತರಿಸಬಹುದು ಎಂದು ಹೇಳಲಾಗಿತ್ತು. 1963ರ ಏಪ್ರಿಲ್ 1ರಂದು ಗೃಹ ಸಚಿವಾಲಯದಲ್ಲಿ ತೆಗೆದುಕೊಂಡ ಠರಾವಿನಂತೆ 'ಡಿಎಸ್‌ಪಿಇ'ಗೆ ಸಿಬಿಐ ಎಂದು ಮರುನಾಮಕರಣ ಮಾಡಲಾಯಿತು.

## ತೈಲೋತ್ಪನ್ನಗಳ ಮೇಲಿನ ಸಹಾಯಧನ ಕಡಿತಗೊಳಿಸಲು ಕಿರೀಟ್ ಪಾರಖ್ ಸಮಿತಿಯ ಶಿಫಾರಸು

ದೇಶದಲ್ಲಿ ಸಬ್ಸಿಡಿ ಅಂದರೆ ಸಹಾಯಧನ ಲಭ್ಯತೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿವೆ ಎಂಬ ಪ್ರಶ್ನೆಯನ್ನು ಕಾಡುತ್ತಿದೆ. ರಾಜ್ಯ ಅಥವಾ ಕೇಂದ್ರ ಸರ್ಕಾರದ ಇತರ ಮತಗಳನ್ನು ತಂದುಕೊಡುವ ಯೋಜನೆಗಳಿಗೆ ಇದು ಅನ್ವಯವಾಗದಿದ್ದರೂ, ತೈಲೋಲ್ಪನ್ನಗಳ ದರ ವಿಚಾರದಲ್ಲಿ ಈ ಮಾತನ್ನು ಹೇಳಲೇಬೇಕಾಗುತ್ತದೆ.

**ಕಿರೀಟ್ ಪಾರಖ್ ಸಮಿತಿ ಶಿಫಾರಸುಗಳು:**

- ಈ ವಾದಕ್ಕೆ ಪೂರಕವಾದದ್ದು ಕಿರೀಟ್ ಪಾರಖ್ ಸಮಿತಿಯ ಶಿಫಾರಸುಗಳು. ಇತ್ತೀಚೆಗಷ್ಟೇ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವ ಶಿಫಾರಸಿನ ವರದಿಯ ಪ್ರಕಾರ ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲ ಸಿಲಿಂಡರ್ ದರ ತಕ್ಷಣ ಹೆಚ್ಚಿಸಬೇಕು.
- ಸದ್ಯ ಡೀಸೆಲ್ ಮೇಲಿನ ಸರ್ಕಾರಿ ನಿಯಂತ್ರಣವನ್ನು ವರ್ಷದ ಒಳಗಾಗಿ ಮುಕ್ತಗೊಳಿಸಬೇಕು.
- ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆ ಏರಿಳಿಕೆಯಾಗುತ್ತದೆಯೋ ಅದೇ ರೀತಿ ನಮ್ಮ ದೇಶದಲ್ಲೂ ದರ ಪರಿಷ್ಕರಣೆಯಾಗಬೇಕು ಎನ್ನುವುದು ಸಮಿತಿ ಮಾಡಿದ ಉಲ್ಲೇಖಗಳು.
- ಇದುವರೆಗೆ ಸರ್ಕಾರಿ ಸ್ವಾಮ್ಯದ ತೈಲಕಂಪನಿಗಳು ಪೆಟ್ರೋಲ್ ಬೆಲೆಯನ್ನು ರೂ.2-5 ರ ನಡುವೆ ಪರಿಷ್ಕರಣೆ ಮಾಡುತ್ತಿದ್ದರೆ, ಡೀಸೆಲ್ ದರವನ್ನು 50 ಪೈಸೆಯಷ್ಟು ಹೆಚ್ಚಿಸುತ್ತಿದ್ದವು. ಆದರೆ ಇನ್ನು ಮುಂದೆ ಹಾಗೆ ಇರುವುದಿಲ್ಲ. ಪ್ರತಿ ತಿಂಗಳೂ ರೂ.1 ದರ ಹೆಚ್ಚಳವಾಗುವ ಸಾಧ್ಯತೆ ಅಧಿಕ.
- ತೈಲೋತ್ಪನ್ನಗಳಿಗೆ ನೀಡಲಾಗುತ್ತಿರುವ ಸಬ್ಸಿಡಿಯನ್ನು ನಿಧಾನವಾಗಿ ಹಿಂಪಡೆಯುವ ಇರಾದೆ ಸರ್ಕಾರದ್ದು. ಹೀಗಾಗಿ, ಕನಿಷ್ಠವೆಂದರೆ ಹದಿನೈದು ವರ್ಷಗಳಲ್ಲಿ ತೈಲೋತ್ಪನ್ನಗಳಿಗೆ ಸಬ್ಸಿಡಿ ನೀಡುವ ವಿಚಾರ ಕಥೆಯಾದರೂ ಅಚ್ಚರಿ ಏನಿಲ್ಲ.

**ಯಾರು ಕಿರೀಟ್ ಪಾರಖ್?**

ಸದ್ಯ ಅವರು ಪ್ರಧಾನಮಂತ್ರಿಗಳ ಆರ್ಥಿಕ ಸಲಹಾ ಮಂಡಳಿ (ಇಎಸಿ) ಸದಸ್ಯ. ವಿ.ಪಿ.ಸಿಂಗ್, ರಾಜೀವ್ ಗಾಂಧಿ, ಚಂದ್ರಶೇಖರ್, ಪಿ.ವಿ.ನರಸಿಂಹ ರಾವ್, ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿಯಾಗಿದ್ದ ಸಂದರ್ಭದಲ್ಲೂ ಅವರು ಸಲಹಾ ಮಂಡಳಿ ಸದಸ್ಯರಾಗಿದ್ದರು. 1997 ರಿಂದ 1998 ರ ವರೆಗೆ ವಿಶ್ವಸಂಸ್ಥೆ ಅಭಿವೃದ್ಧಿ ಕಾರ್ಯಕ್ರಮದ ಹಿರಿಯ ಹಣಕಾಸು ಸಲಹೆಗಾರರಾಗಿದ್ದರು.

ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಬಿ.ಇ, ಅಮೆರಿಕದ ಮೆಸಾಚ್ಯುಸೆಟ್ಸ್ ತಾಂತ್ರಿಕ ಸಂಸ್ಥೆಯಿಂದ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. 15 ಪುಸ್ತಕಗಳನ್ನು ಬರೆದಿದ್ದಾರೆ.

**ಪಾರಿಖ್ ಸಮಿತಿ ಹೇಳಿದ್ದೇನು?**

ಪ್ರತಿ ಮನೆಗೆ 9 ರಿಯಾಯಿತಿ ಅಡುಗೆ ಅನಿಲ ಸಿಲಿಂಡರ್ ಬದಲು 6 ಸಾಕು. ಡೀಸೆಲ್ ಸಬ್ಸಿಡಿ ಮಿತಿಯನ್ನು 6ಕ್ಕೆ ಮಿತಿಗೊಳಿಸಿ. ಇನ್ನೊಂದು ವರ್ಷದಲ್ಲಿ ಡೀಸೆಲ್ ಸಬ್ಸಿಡಿ ಮುಕ್ತಾಯಗೊಳಿಸಿ. ಈ ಮೂಲಕ ಬೊಕ್ಕಸಕ್ಕೆ 72,000 ಕೋಟಿ ಉಳಿಕೆ ಸಾಧ್ಯ. ತನ್ನ ಮೇಲಾಗುತ್ತಿರುವ ಡೀಸೆಲ್ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು.

**ಭಾರತದ ಮೊದಲ 'ಭಾರತೀಯ ಮಹಿಳಾ ಬ್ಯಾಂಕ್' ಶಾಖೆಗಳು ದೇಶದ 7 ಕಡೆ ಕಾರ್ಯಾರಂಭ**

ಸಂಪೂರ್ಣವಾಗಿ ಮಹಿಳೆಯರೇ ನಡೆಸುವ ದೇಶದ ಮೊದಲ 'ಭಾರತೀಯ ಮಹಿಳಾ ಬ್ಯಾಂಕ್' ಅನ್ನು ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಜನ್ಮದಿನದಂದು ಪ್ರಧಾನಿ ಮನಮೋಹನ ಸಿಂಗ್ ಅವರು ಲೋಕಾರ್ಪಣೆ ಮಾಡಿದರು. 1000 ಕೋಟಿ ರೂ. ಬಂಡವಾಳದೊಂದಿಗೆ ಆರಂಭವಾಗಿರುವ ಈ ಬ್ಯಾಂಕ್ ಬೆಂಗಳೂರು, ಮುಂಬೈ ಸೇರಿದಂತೆ 7 ಕಡೆ ಕಾರ್ಯಾರಂಭ ಮಾಡಿದ್ದು, ಎಲ್ಲ ಕೇಂದ್ರಗಳಿಗೂ ಪ್ರಧಾನಿ ಮುಂಬೈನಲ್ಲೇ ಚಾಲನೆ ನೀಡಿದರು. ಈ ವೇಳೆ ಪ್ರಥಮ ಖಾತೆದಾರ ಮಹಿಳೆಯರಿಗೆ ಪಾಸ್‌ಬುಕ್ ವಿತರಿಸಲಾಯಿತು.

**ಇನ್ನೂ 25 ಶಾಖೆಗಳು :**

- ಮಹಿಳೆಯರ ಸಬಲೀಕರಣ ಉದ್ದೇಶವನ್ನಿಟ್ಟುಕೊಂಡು ಆರಂಭವಾಗಿರುವ ಈ ಬ್ಯಾಂಕ್‌ಗಳ ಶಾಖೆ ಸಂಖ್ಯೆ ಮಾರ್ಚ್ ಅಂತ್ಯದ ವೇಳೆಗೆ 25 ಕ್ಕೆ ಏರಿಕೆಯಾಗಲಿದೆ.
- ಈ ಬ್ಯಾಂಕ್ ಸ್ಥಾಪನೆ ಕುರಿತು ಕಳೆದ ಫೆಬ್ರವರಿಯಲ್ಲಿ ಹಣಕಾಸು ಸಚಿವ ಪಿ. ಚಿದಂಬರಂ ಅವರು ಘೋಷಣೆ ಮಾಡಿದ್ದರು. ಘೋಷಣೆಯಾದ ಕೇವಲ 9 ತಿಂಗಳಲ್ಲಿ ಈ ಬ್ಯಾಂಕ್ ಕಾರ್ಯಾರಂಭ ಮಾಡಿರುವುದು ವಿಶೇಷ.
- ಸ್ತ್ರೀಯರಿಗೆ ಎಲ್ಲೆಡೆ ತಾರತಮ್ಯ: ಮಹಿಳೆಯರು ಹಲವು ಉನ್ನತ ಹುದ್ದೆ ಅಲಂಕರಿಸಿದ್ದರೂ ಮಹಿಳೆಯರು ಮನೆ, ಶಾಲೆ, ಕೆಲಸದ ಸ್ಥಳ ಹಾಗೂ ಸಾರ್ವಜನಿಕ ಪ್ರದೇಶಗಳಲ್ಲಿ ತಾರತಮ್ಯಕ್ಕೆ ಒಳಗಾಗುತ್ತಿದ್ದಾರೆ. ಮಹಿಳೆಯರನ್ನು ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಇದೊಂದು ಸಣ್ಣ ಹೆಜ್ಜೆ ಎಂದು ಎಂದು ಬ್ಯಾಂಕ್ ಉದ್ಘಾಟನೆ ಬಳಿಕ ಪ್ರಧಾನಿ ತಿಳಿಸಿದರು.
- ಬ್ಯಾಂಕಿನ ನಿರ್ದೇಶಕ ಮಂಡಳಿಗೆ 8 ಮಹಿಳೆಯರನ್ನು ನೇಮಿಸಲಾಗಿದೆ. ಸಂಪೂರ್ಣ ಮಹಿಳಾ ನಿರ್ದೇಶಕರನ್ನೇ ಹೊಂದಿರುವ ದೇಶದ ಮೊದಲ ಸರ್ಕಾರಿ ಬ್ಯಾಂಕ್ ಇದಾಗಿದೆ ಎಂದು ಚಿದಂಬರಂ ಹೇಳಿದರು.

## ಅದ್ದೂರಿಯಾಗಿ ನೆರವೇರಿದ 18 ನೇ ಅಂತರರಾಷ್ಟ್ರೀಯ ಮಕ್ಕಳ ಚಲನಚಿತ್ರೋತ್ಸವ

18ನೇ ಅಂತರರಾಷ್ಟ್ರೀಯ ಮಕ್ಕಳ ಚಲನಚಿತ್ರೋತ್ಸವವನ್ನು ಮುತ್ತಿನ ನಗರಿ ಹೈದ್ರಾಬಾದ್ ನಲ್ಲಿ ಆಯೋಜಿಸಲಾಗಿತ್ತು. ಒಂದು ವಾರಗಳ ಕಾಲ ನಡೆಯುವ ಈ ಸಮಾರಂಭಕ್ಕೆ ಹೈದ್ರಾಬಾದ್ ನ ಲಲಿತ ಕಲಾ ತೋರಣಂ ಅನ್ನು ವರ್ಣರಂಜಿತವಾಗಿ ಸಜ್ಜುಗೊಳಿಸಲಾಗಿತ್ತು. 1995 ರಿಂದ ಎರಡು ವರ್ಷಗಳಿಗೊಮ್ಮೆ ಈ ಸಮಾರಂಭವನ್ನು ಹೈದ್ರಾಬಾದ್ ನ ಲಲಿತ ಕಲಾ ತೋರಣಂನಲ್ಲಿ ಆಯೋಜಿಸಲಾಗುತ್ತಿದೆ.

**ಮುಖ್ಯಾಂಶಗಳು:**

- ಚಿಲ್ಡ್ರನ್ ಫಿಲಂ ಸೊಸೈಟಿ ಆಫ್ ಇಂಡಿಯಾ ಮತ್ತು ಆಂಧ್ರಪ್ರದೇಶ ಸರ್ಕಾರ ಜಂಟಿಯಾಗಿ ಈ ಚಲನಚಿತ್ರೋತ್ಸವವನ್ನು ಆಯೋಜಿಸುತ್ತಿವೆ.
- ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಮನೀಶ್ ತಿವಾರಿ, ಆಂಧ್ರಪ್ರದೇಶ ಮುಖ್ಯಮಂತ್ರಿ ಕಿರಣ್ ಕುಮಾರ್ ರೆಡ್ಡಿಯವರು ಸಮಾರಂಭಕ್ಕೆ ಚಾಲನೆ ನೀಡಿದರು.
- ಬಾಲಿವುಡ್ ನಟ ರಣಬೀರ್ ಕಪೂರ್ ಹಾಗೂ ತಾರೆ ಜಮೀನ್ ಪರ ಚಿತ್ರದ ಬಾಲನಟ ಖ್ಯಾತಿ ದರ್ಶಿಲ್ ಸಫಾರಿ ಅವರು ಚಲನಚಿತ್ರೋತ್ಸವದಲ್ಲಿ ಭಾಗವಹಿಸಿ ಆಕರ್ಷಣಯ ಬಿಂದು ಎನಿಸಿದರು.
- ಸುಮಾರು 1.5 ಲಕ್ಷ ಮಕ್ಕಳು ಭಾಗವಹಿಸಿದ್ದ ಈ ಚಿತ್ರೋತ್ಸವದಲ್ಲಿ 40 ದೇಶಗಳ 200 ಕ್ಕೂ ಹೆಚ್ಚು ಚಿತ್ರಗಳು ಈ ಸಮಾರಂಭದಲ್ಲಿ ಪ್ರದರ್ಶಿಸಲಾಯಿತು.
- ಇದೇ ಮೊದಲ ಬಾರಿಗೆ ದಕ್ಷಿಣ ಅಮೆರಿಕಾದ 26 ಚಿತ್ರಗಳನ್ನು ಪ್ರದರ್ಶಿಸಲಾಯಿತು.

**ಪ್ರಶಸ್ತಿ ಗೆದ್ದ ಚಿತ್ರಗಳು:**

- ಅಂತರರಾಷ್ಟ್ರೀಯ ಮಕ್ಕಳ ಚಲನಚಿತ್ರೋತ್ಸವದಲ್ಲಿ ಪ್ರದರ್ಶಿಸಲಾದ ಚಿತ್ರಗಳ ಪೈಕಿ ನಾಲ್ಕು ವಿಭಾಗದಲ್ಲಿ ಅತ್ಯುತ್ತಮ ಚಿತ್ರಗಳನ್ನು "ಗೋಲ್ಡನ್ ಎಲಿಫಂಟ್" ಪ್ರಶಸ್ತಿಯನ್ನು ವಿತರಿಸಲಾಯಿತು. ಪ್ರಶಸ್ತಿ ಪಡೆದ ಚಿತ್ರಗಳ ವಿವರ ಇಲ್ಲಿದೆ.
- **ಕೌಬಾಯ್** (Kauwboy): ಡಚ್ ಸಿನಿಮಾ "ಕೌಬಾಯ್" ಗೋಲ್ಡನ್ ಎಲಿಫಂಟ್ ಪ್ರಶಸ್ತಿಗೆ ಭಾಜನವಾಯಿತು. ಇಂಟರ್ ನ್ಯಾಷನಲ್ ಲೈವ್ ಆಕ್ಷನ್ ವಿಭಾಗದಲ್ಲಿ ಈ ಚಿತ್ರ ಪ್ರಶಸ್ತಿಗೆ ಭಾಜನವಾಯಿತು.
- ಇದೇ ವಿಭಾಗದಲ್ಲಿ "ಬಟುಲ್ ಮುಕ್ತಿಯಾರ್" ಅವರು ತಮ್ಮ "ಕಪಾಲ್" ಚಿತ್ರಕ್ಕೆ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿಗೆ ಭಾಜನರಾದರು.
- ಅತ್ಯುತ್ತಮ ಸ್ಕ್ರೀನ್ ಪ್ಲೇ ವಿಭಾಗದಲ್ಲಿ: ನಾನೋ-ದಿ ಝಿಗ್ ಜಾಗ್ ಕಿಡ್ ಚಿತ್ರ ಭಾಜನವಾಯಿತು.

**ಈ ವರ್ಷದ ಮೆಗಾ ಲೋಕ್ ಅದಾಲತ್ ನಲ್ಲಿ 92,192 ಪ್ರಕರಣಗಳ ಇತ್ಯರ್ಥ**

ಸುಪ್ರೀಂಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ರಾಜ್ಯದ ನಾನಾ ನ್ಯಾಯಾಲಯಗಳಲ್ಲಿ ಮೂರು ತಿಂಗಳಿಂದ ನಡೆಯುತ್ತಿರುವ ಮೆಗಾ ಲೋಕ್ ಅದಾಲತ್‌ನಲ್ಲಿ 92,192 ಪ್ರಕರಣಗಳನ್ನು ರಾಜಿ ಪಂಚಾಯ್ತಿ ಮೂಲಕ ಇತ್ಯರ್ಥಗೊಳಿಸಲಾಗಿದೆ ಎಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ಎಚ್.ವಘೇಲ ತಿಳಿಸಿದ್ದಾರೆ.

**ಲೋಕ್ ಅದಾಲತ್ ಮಾಹಿತಿ:**

ಹೈಕೋರ್ಟ್ ಸೇರಿ ಪ್ರತಿ ಜಿಲ್ಲಾ ನ್ಯಾಯಾಲಯಗಳಲ್ಲಿ ಆಗಸ್ಟ್ 23ರಿಂದ ನವೆಂಬರ್ 23ರವರೆಗೆ ರಾಷ್ಟ್ರೀಯ ಮಟ್ಟದ ಮೆಗಾ ಲೋಕ್ ಅದಾಲತ್ ಹಮ್ಮಿಕೊಳ್ಳಲಾಗಿತ್ತು. ಇದರಿಂದ ಸಾವಿರಾರು ಕಕ್ಷಿದಾರರ ಜೊತೆಗೆ ನ್ಯಾಯಾಂಗ ಇಲಾಖೆಗೂ ನಿರಾಳತೆ ದೊರೆತಿದೆ. ಅಲ್ಲದೆ, ನ್ಯಾಯಾಲಯದಿಂದ ಹೊರಗೆ ಅತ್ಯಂತ ಶೀಘ್ರ ನ್ಯಾಯ ಪಡೆಯುವ ಪರ್ಯಾಯ ವ್ಯವಸ್ಥೆ ಇದೆ ಎಂಬುದರ ಕುರಿತು ರಾಜ್ಯದ ಜನತೆಗೆ ಸಂದೇಶ ದೊರೆತಂತಾಗಿದೆ.

**ಪ್ರಕರಣಗಳು:**

- ಮೆಗಾ ಲೋಕ್ ಅದಾಲತ್‌ನಲ್ಲಿ 4,580 ಮೋಟಾರ್ ವೆಹಿಕಲ್ ಅಪಘಾತ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದ್ದು 48.53 ಕೋಟಿ ಮೊತ್ತದ ಪರಿಹಾರ ವಿತರಿಸಲಾಗಿದೆ.
- 9,169 ವ್ಯಾಜ್ಯಪೂರ್ವ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ.
- 202 ವೈವಾಹಿಕ ಪ್ರಕರಣಗಳು, 1,755 ನಿರ್ವಹಣಾ ವೆಚ್ಚದ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ.

**ರಾಜಿ ಮನಸ್ಸು ಮುಖ್ಯ:**

ನ್ಯಾಯಾಲಯದ ಮೆಟ್ಟಿಲೇರುವ ವ್ಯಾಜ್ಯಗಳು ರಾಜಿ ಪಂಚಾಯ್ತಿಯಲ್ಲಿ ಇತ್ಯರ್ಥಗೊಂಡರೆ ಎಲ್ಲರಿಗೂ ಒಳ್ಳೆಯದು. ಇದಕ್ಕೆ ಕಕ್ಷಿದಾರರ ನ್ಯಾಯಯುತ ಬೇಡಿಕೆ ಹಾಗೂ ಅವರು ಬೇಡಿಕೆಗಳನ್ನು ಮುಂದಿಡುವ ರೀತಿ ಮುಖ್ಯವಾಗುತ್ತದೆ. ಕಕ್ಷಿದಾರರು ರಾಜಿಗೆ ಮನಸ್ಸು ಮಾಡದಿದ್ದಲ್ಲಿ ಇದರಿಂದ ಯಾವುದೇ ಪ್ರಯೋಜನವಿಲ್ಲ. ವರ್ಷಾನುಗಟ್ಟಲೇ ಎಳೆದಾಡುವ ಪ್ರಕರಣಗಳನ್ನು ಕೆಲ ಗಂಟೆಗಳ ಸಂಧಾನದಲ್ಲಿ ಬಗೆಹರಿಸಲು ಸಾಧ್ಯ ಎಂಬುದನ್ನು ಜನರು ಅರಿಯಬೇಕು ಎಂದು ಅವರು ಕರೆ ನೀಡಿದರು.

**ಮುಖ್ಯ ಮಾಹಿತಿ:**

- ಬೆಂಗಳೂರು ಹೈಕೋರ್ಟ್‌ನಲ್ಲಿ 19, ಧಾರವಾಡ ಪೀಠದಲ್ಲಿ 3 ಹಾಗೂ ಗುಲ್ಬರ್ಗ ಪೀಠದಲ್ಲಿ 3 ಲೋಕ ಅದಾಲತ್ ಪೀಠ ಸ್ಥಾಪಿಸಲಾಗಿತ್ತು.
- ಈ ಮೂರು ಪೀಠಗಳು 1,385 ಪ್ರಕರಣಗಳನ್ನು ಇತ್ಯರ್ಥಗೊಳಿಸಿವೆ. ಇದರಿಂದ ನ್ಯಾಯಾಲಯಗಳ ಸಾಕಷ್ಟು ಸಮಯ ಉಳಿತಾಯವಾಗಿದೆ.

- ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ 2013ರ ಜುಲೈ 1ರಿಂದ 11.83 ಲಕ್ಷ ಪ್ರಕರಣಗಳು ವಿಚಾರಣೆಗೆ ಬಾಕಿ ಉಳಿದಿದ್ದು, ಇದರಲ್ಲಿ 82,714 ಪ್ರಕರಣಗಳನ್ನು ಲೋಕ ಅದಾಲತ್ ವಿಚಾರಣೆಗೆ ಆಯ್ಕೆ ಮಾಡಲಾಗಿತ್ತು. ರಾಜ್ಯ ಹೈಕೋರ್ಟ್‌ನಲ್ಲಿ ಬಾಕಿ ಇರುವ 1,70,312 ಪ್ರಕರಣಗಳ ಪೈಕಿ 5 ಸಾವಿರ ಪ್ರಕರಣಗಳನ್ನು ರಾಜಿ ಸಂಧಾನಕ್ಕೆ ಆಯ್ಕೆ ಮಾಡಲಾಗಿತ್ತು.

**ಇತ್ಯರ್ಥವಾಗಿರುವ ಪ್ರಕರಣಗಳು:**

ಬೆಂಗಳೂರು ನಗರ-ಸಿಎಂಎಂ ನ್ಯಾಯಾಲಯ-5,798, ಸಣ್ಣ ವ್ಯಾಜ್ಯಗಳ ನ್ಯಾಯಾಲಯ-7,592, ಸಿವಿಲ್ ನ್ಯಾಯಾಲಯ-1,500, ಬೆಂಗಳೂರು ಗ್ರಾಮಾಂತರ-4,647, ರಾಮನಗರ-1,685, ಬಳ್ಳಾರಿ-2,105, ಬೆಳಗಾವಿ-4,666, ಬೀದರ್-4,939, ಬಿಜಾಪುರ-2,361, ಬಾಗಲಕೋಟೆ-2,373, ಚಿಕ್ಕಮಗಳೂರು-1,776, ಚಿತ್ರದುರ್ಗ-1,814, ದಾರವಾಡ-3,388, ಹಾವೇರಿ-1,222, ದಾವಣಗೆರೆ-2,749, ಗದಗ-800, ಗುಲ್ಬರ್ಗಾ-2,849, ಹಾಸನ-6,176, ಕಾರವಾರ-2,108, ಕೊಪ್ಪಳ-1,182, ಕೊಡಗು-547, ಕೋಲಾರ-5,681, ಚಿಕ್ಕಬಳ್ಳಾಪುರ-1,240, ಮಂಗಳೂರು-1,663, ಉಡುಪಿ-1,626, ಮಂಡ್ಯ-1,295, ಮೈಸೂರು-4,830, ಚಾಮರಾಜನಗರ-1,597, ರಾಯಚೂರು-3,465, ಶಿವಮೊಗ್ಗ-2,797, ತುಮಕೂರು-3,705, ಯಾದಗಿರಿ-573, ಬೆಂಗಳೂರು ಹೈಕೋರ್ಟ್-837, ಧಾರವಾಡ ಹೈಕೋರ್ಟ್-270, ಗುಲ್ಬರ್ಗ ಹೈಕೋರ್ಟ್-278, ಕೌಟುಂಬಿಕ ನ್ಯಾಯಾಲಯ-17, ಕಾರ್ಮಿಕ ನ್ಯಾಯಾಲಯ-41.

**ಏಷ್ಯಾದ ಅತಿ ದೊಡ್ಡ "ದನ ಜಾತ್ರೆ" ಬಿಹಾರದ ಸೋನೆಪುರ ದನ ಜಾತ್ರೆಗೆ ಚಾಲನೆ**

ಏಷ್ಯಾದಲ್ಲೇ ಅತಿ ದೊಡ್ಡ ದನ ಜಾತ್ರೆ ಎಂದು ಪ್ರಸಿದ್ಧಿಯಾಗಿರುವ "ಸೋನೆಪುರ ದನಜಾತ್ರೆ"ಗೆ ಬಿಹಾರದಲ್ಲಿ ಚಾಲನೆ ನೀಡಲಾಯಿತು. ಇತಿಹಾಸ ಪ್ರಸಿದ್ಧಿ ಹೊಂದಿರುವ ಈ ಜಾತ್ರೆಯಲ್ಲಿ ಏಷ್ಯಾದ ವಿವಿಧ ರಾಷ್ಟ್ರಗಳಿಂದ ಜನರು ಭಾಗಿಯಾಗುವುದು ವಿಶೇಷ. ಮೆಲಗಾಂ ಮೇಳ ಎಂತಲೂ ಕರೆಯುವ ಈ ಜಾತ್ರೆಯನ್ನು ಕಾರ್ತಿಕ ಪೂರ್ಣಿಮ ದಿನದಂದು ಚಾಲನೆ ನೀಡಲಾಗುವುದು. ಪ್ರಸ್ತುಕ ಸಾಲಿನ ಈ ಮೇಳಕ್ಕೆ ನವೆಂಬರ್ 16 ರಂದು ಚಾಲನೆ ನೀಡಲಾಗಿದ್ದು, ಡಿಸೆಂಬರ್ 15 ರ ತನಕ ಒಂದು ತಿಂಗಳ ಕಾಲ ನಡೆಯಲಿದೆ.

- ಸೋನೆಪುರ ಪ್ರದೇಶವು ಗಂಗಾ ಮತ್ತು ಗಂಡಕ್ ನದಿಗಳ ಸಂಗಮದಲ್ಲಿ ನೆಲೆಗೊಂಡಿರುವ ಪ್ರದೇಶ. ಇತಿಹಾಸ ಪುರಾಣ ಪ್ರಸಿದ್ಧಿ ಹೊಂದಿರುವ ಈ ದನಗಳ ಜಾತ್ರೆ ಒಂದು ತಿಂಗಳ ಕಾಲ ನಡೆಯುವ ಏಷ್ಯಾದ ಅತಿ ದೊಡ್ಡ ದನಗಳ ಜಾತ್ರೆ.
- ಇತಿಹಾಸದ ಪ್ರಕಾರ ಮೌರ್ಯರ ರಾಜ ಚಂದ್ರಗುಪ್ತನ ಕಾಲದಲ್ಲಿ ಈ ಭಾಗದಲ್ಲಿ ಕುದುರೆ ಮತ್ತು ಆನೆಗಳ ವ್ಯಾಪಾರ ವಿನಿಮಯ ನಡೆಯುತ್ತಿತ್ತು ಎನ್ನಲಾಗಿದೆ.
- ಕೇವಲ ದನಗಳಲ್ಲದೇ ಆನೆ, ವಿವಿಧ ಶ್ವಾನ ತಳಿ, ಎಮ್ಮೆ, ಕತ್ತೆ, ಪರ್ಷಿಯಾದ ಕುದುರೆಗಳು, ಮೊಲ, ಮೇಕೆ ಮುಂತಾದ ಸಾಕು ಪ್ರಾಣಿಗಳ ವ್ಯಾಪಾರ ಇಲ್ಲಿ ನಡೆಯಲಿದೆ.

**ರಾಜಸ್ತಾನದಲ್ಲಿ ವಿಶ್ವದ ಅತಿ ದೊಡ್ಡ ಕೇಂದ್ರೀಕೃತ ಸೌರ ವಿದ್ಯುತ್ ಘಟಕ ಆರಂಭಿಸಲಿರುವ ರಿಲಯನ್ಸ್ ಪವರ್**

ಅಂಬಾನಿ ಒಡೆತನದ ರಿಲಯನ್ಸ್ ಪವರ್ ಸಂಸ್ಥೆ ರಾಜಸ್ತಾನದಲ್ಲಿ 100 ಮೆಗಾ ವ್ಯಾಟ್ ಸಾಮರ್ಥ್ಯದ ವಿದ್ಯುತ್ ಘಟಕವನ್ನು ಆರಂಭಿಸುವುದಾಗಿ ಹೇಳಿದೆ. ರಾಜಸ್ತಾನದ ಜೈಸಲ್ಮೆರ್ ಜಿಲ್ಲೆಯಲ್ಲಿ ಈ ಘಟಕದ ಕಾಮಗಾರಿ ಮಾರ್ಚ್ ನಲ್ಲಿ ಆರಂಭಗೊಳ್ಳಲಿದೆ.

- ಸಂಸ್ಥೆಯ ಪ್ರಕಾರ ಈ ಘಟಕ ವಿಶ್ವದ ಅತಿ ದೊಡ್ಡ ಕೇಂದ್ರೀಕೃತ ಸೌರ ವಿದ್ಯುತ್ (Concentrated Solar Power) ಘಟಕ ಇದಾಗಲಿದೆ.
- ಸುಮಾರು 2,100 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಘಟಕವು ರಿಲಯನ್ಸ್ ಪವರ್ ಕಳೆದ ವರ್ಷದ ನಿರ್ಮಿಸಿರುವ 40 ಮೆಗಾ ವ್ಯಾಟ್ ಘಟಕದ ಪಕ್ಕದಲ್ಲಿ ತಲೆಯತ್ತಲಿದೆ.
- ಕೇಂದ್ರೀಕೃತ ಸೌರ ಘಟಕ ತಂತ್ರಜ್ಞಾನದೊಂದಿಗೆ ಖಾಸಗಿ ಒಡೆತನದಲ್ಲಿ ಭಾರತದಲ್ಲಿ ನಿರ್ಮಾಣಗೊಳ್ಳುತ್ತಿರುವ ಅತಿ ದೊಡ್ಡ ಸೌರ ಘಟಕ ಇದಾಗಿದ್ದು, ಏಷ್ಯಾನ್ ಡೆವೆಲಪ್ ಮೆಂಟ್ ಬ್ಯಾಂಕ್ ಸೇರಿದಂತೆ ವಿಶ್ವದ ಪ್ರಮುಖ ಹಣಕಾಸು ಸಂಸ್ಥೆಗಳ ಸಾಲದ ನೆರವನ್ನು ನೀಡಿವೆ.

**ಗೋವಾದಲ್ಲಿ ನಡೆದ 44ನೇ ಭಾರತೀಯ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ತೆರೆ**

ಗೋವಾದಲ್ಲಿ ನಡೆದ 44ನೇ ಭಾರತೀಯ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ (ಐಎಫ್‌ಎಫ್ಐ)ಕ್ಕೆ ವರ್ಣರಂಜಿತ ತೆರೆ ಬಿದ್ದಿತು.

**ಪ್ರಶಸ್ತಿಗಳು:**

- ಬೆಟಿ ರೇಸ್ ಮತ್ತು ಲ್ಯೂಗಿ ಅಕ್ವಿಸ್ಟೊ ನಿರ್ದೇಶನದ ಪೋರ್ಚುಗೀಸ್ ಸಾಕ್ಷ್ಯಚಿತ್ರ 'ಬೀಟ್ರಿಜಸ್ ವಾರ್' ಪ್ರತಿಷ್ಠಿತ 'ಸ್ವರ್ಣ ಮಯೂರ' ಫಲಕ ಮತ್ತು 40 ಲಕ್ಷ ರೂಪಾಯಿ ನಗದು ಪುರಸ್ಕಾರಕ್ಕೆ ಪಾತ್ರವಾಯಿತು. ಆಸ್ಟ್ರೇಲಿಯಾ ಮತ್ತು ಪೂರ್ವ ತಿಮೋರ್ ಸಹಯೋಗದಲ್ಲಿ ಈ ಸಾಕ್ಷ್ಯ ಚಿತ್ರ ನಿರ್ಮಾಣಗೊಂಡಿದೆ. ಅಂತಿಮ ಸುತ್ತಿನಲ್ಲಿ ತೀರ್ಪುಗಾರರು ಈ ಚಿತ್ರವನ್ನು ಅವಿರೋಧವಾಗಿ ಪ್ರಶಸ್ತಿಗೆ ಆಯ್ಕೆ ಮಾಡಿದರು.
- ಕಮಲೇಶ್ವರ್ ಮುಖರ್ಜಿ ನಿರ್ದೇಶನದ ಬಂಗಾಳಿ ಚಿತ್ರ 'ಮೇಘೆ ಢಾಕಾ ತಾರಾ' ರಜತ ಮಯೂರ ಮತ್ತು 15 ಲಕ್ಷ ರೂಪಾಯಿ ನಗದು ತನ್ನದಾಗಿಸಿ ಕೊಂಡಿತು.
- ಬಂಗಾಳಿ ಚಿತ್ರ 'ಅಪುರ್ ಪಾಂಚಾಲಿ' ನಿರ್ದೇಶಕ ಕೌಶಿಕ್ ಗಂಗೂಲಿ ಅವರು 'ಉತ್ತಮ ನಿರ್ದೇಶಕ' (ರಜತ ಮಯೂರ ಮತ್ತು 15 ಲಕ್ಷ ರೂಪಾಯಿ ನಗದು) ಪ್ರಶಸ್ತಿ ಪಡೆದರು.
- ಇಸ್ರೇಲ್ ನಟ ಅಲೋನ್ ಮೋನಿ ಅಬೌಟ್‌ಬೌಲ್ ಅವರು 'ಪ್ಲೇಸ್ ಇನ್ ಹೆವೆನ್' ಚಿತ್ರಕ್ಕಾಗಿ 'ಉತ್ತಮ ನಟ' (ರಜತ ಪದಕ ಮತ್ತು 10 ಲಕ್ಷ ರೂಪಾಯಿ ನಗದು)
- ಪೋಲೆಂಡಿನ ' ಇನ್ ಹೈಡಿಂಗ್ ' ಚಿತ್ರದ ನಟನೆಗಾಗಿ ಮಗ್ಡಾಲೇನಾ ಬೋಕ್ಸಾ ರ್ಸಕಾ 'ಉತ್ತಮ ನಟಿ' (ಬೆಳ್ಳಿ ಪದಕ ಮತ್ತು 10 ಲಕ್ಷ ರೂಪಾಯಿ ನಗದು) ಪ್ರಶಸ್ತಿ ಪಡೆದರು.

- ತುರ್ಕಿ ಭಾಷೆಯ ಚಿತ್ರ 'ದೌ ಗಿಲ್ಡ್ಸ್ ದ ಈವನ್' ಮತ್ತು ಅದರ ನಿರ್ದೇಶಕ ಓನೂರ್ ಉನ್ಲು ತೀರ್ಪುಗಾರರ ವಿಶೇಷ ಮೆಚ್ಚುಗೆ ಪಡೆದ ಪ್ರಶಸ್ತಿ (ರಜತ ಪದಕ ಮತ್ತು 15 ಲಕ್ಷ ರೂಪಾಯಿ) ಗಿಟ್ಟಿಸಿಕೊಂಡರು.

**ದೇಶದಲ್ಲೇ ಪ್ರಥಮ ಬಾರಿಗೆ ಪ್ಲಾಸ್ಟಿಕ್ ಗುರುತಿನ ಚೀಟಿ ವಿತರಿಸಿದ ತ್ರಿಪುರ**

ತ್ರಿಪುರ ರಾಜ್ಯದಲ್ಲಿ ಲ್ಯಾಮಿನೇಟ್ ಮಾಡಿದ ಕಾಗದದ ಗುರುತಿನ ಚೀಟಿ ಬದಲಿಗೆ ಮತದಾರರಿಗೆ ಪ್ಲಾಸ್ಟಿಕ್ ಗುರುತಿನ ಚೀಟಿ ವಿತರಿಸುವ ಕಾರ್ಯ ಆರಂಭಗೊಂಡಿದೆ. ದೇಶದಲ್ಲೇ ಮೊದಲ ಬಾರಿಗೆ ಮತದಾರರಿಗೆ ಪ್ಲಾಸ್ಟಿಕ್ ಗುರುತಿನ ಚೀಟಿ ವಿತರಿಸಿದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ತ್ರಿಪುರ ಪಾತ್ರವಾಗಿದೆ.

**ಚುನಾವಣಾ ಆಯೋಗದ ಸೂಚನೆ:**

'ಚುನಾವಣಾ ಆಯೋಗದ ಸೂಚನೆಗಳಿಗೆ ಅನುಗುಣವಾಗಿ ರಾಜ್ಯದಲ್ಲಿ ಪಿವಿಸಿ (ಪ್ಲಾಸ್ಟಿಕ್)- ಎಪಿಕ್‌ಗಳನ್ನು ವಿತರಿಸಲಾಗಿದೆ. ಇದು ದೇಶದಲ್ಲೇ ಮೊದಲು' ಎಂದು ತ್ರಿಪುರ ಮುಖ್ಯ ಕಾರ್ಯದರ್ಶಿ ಸಂಜೋಯ್ ಕುಮಾರ್ ಪಾಂಡಾ ತಿಳಿಸಿದ್ದಾರೆ. ಮತದಾರರ ಗುರುತಿನ ಚೀಟಿಯನ್ನು ತಿರುಚುವುದನ್ನು ತಪ್ಪಿಸುವ ಸಲುವಾಗಿ ಎಲ್ಲ ಮತದಾರರಿಗೆ ಪಿವಿಸಿ ಗುರುತಿನ ಚೀಟಿಗಳನ್ನು ವಿತರಿಸಬೇಕು ಎಂದು ಚುನಾವಣಾ ಆಯೋಗ ಈ ಹಿಂದೆ ನಿರ್ದೇಶನ ನೀಡಿತ್ತು. ಮುಂದೆ ಮಿಜೋರಂನಲ್ಲಿಯೂ ಸಹ ಇಂತಹ ಕಾರ್ಡುಗಳನ್ನು ವಿತರಿಸಲಾಗುತ್ತದೆ. ನಂತರ ಉತ್ತರಪ್ರದೇಶದಲ್ಲಿ ಹಂಚಲಾಗುತ್ತದೆ.

**ವಿಶೇಷತೆ ಏನು?**

ಈ ಗುರುತಿನ ಚೀಟಿಗಳನ್ನು ನಕಲು ಮಾಡಲು ಅಥವಾ ತಿರುಚಲು ಬರುವುದಿಲ್ಲ. ಏಕೆಂದರೆ, ಪ್ಲಾಸ್ಟಿಕ್ ಗುರುತಿನ ಚೀಟಿಗಳಲ್ಲಿ ಮತದಾರರ ಮಾಹಿತಿಯನ್ನು ಕೋಡ್ ಮಾಡಿ ಅಳವಡಿಸಿರಲಾಗುತ್ತದೆ. ಆ ಮಾಹಿತಿ ಹಾಗೂ ಸರ್ಕಾರದ ಲಾಂಛನ ಅಲ್ಟ್ರಾವಯಲೆಟ್ ಬೆಳಕು ಹರಿಸಿದಾಗ ಮಾತ್ರ ಕಂಡುಬರುತ್ತದೆ.

# ಅಂತರರಾಷ್ಟ್ರೀಯ

## ಶ್ರೀಲಂಕಾದಲ್ಲಿ ಆರಂಭಗೊಳ್ಳಲಿರುವ ಕಾಮನ್ವೆಲ್ತ್ ರಾಷ್ಟ್ರಗಳ ಸರ್ಕಾರಿ ಮುಖ್ಯಸ್ಥರ ಸಭೆ(ಚೋಗಂ)

ಚೋಗಂ ನವೆಂಬರ್ 15 ರಿಂದ ಶ್ರೀಲಂಕಾದಲ್ಲಿ ಆರಂಭವಾಗಲಿರುವ ಕಾಮನ್ವೆಲ್ತ್ ರಾಷ್ಟ್ರಗಳ ಸರ್ಕಾರಿ ಮುಖ್ಯಸ್ಥರ ಸಭೆ(ಚೋಗಂ) ಈಗಾಗಲೇ ಸುದ್ದಿಯಲ್ಲಿದೆ. ಸಭೆಯನ್ನು ಪ್ರಧಾನಿ ಸಿಂಗ್ ಬಹಿಷ್ಕರಿಸಬೇಕು ಎಂಬ ಒತ್ತಾಯ ಕೇಳಿಬಂದಿರುವುದೇ ಇದಕ್ಕೆ ಕಾರಣ. ಪ್ರಧಾನಿ ಸಭೆಯಲ್ಲಿ ಪಾಲ್ಗೊಳ್ಳುವುದಿಲ್ಲ ಎಂಬ ನಿರ್ಧಾರವೂ ಹೊರಬಿದ್ದಿದೆ. ಈ ಚೋಗಂ ಎಂದರೇನು ಎಂಬ ಬಗ್ಗೆ ಒಂದಿಷ್ಟು ಮಾಹಿತಿ ಇಲ್ಲಿದೆ.

**ಏನಿದು ಚೋಗಂ?**

ಚೋಗಂ(ಸಿಎಚ್‌ಓಜಿಎಂ) ಅಂದರೆ ಕಾಮನ್ವೆಲ್ತ್ ರಾಷ್ಟ್ರಗಳ ಸರ್ಕಾರಿ ಮುಖ್ಯಸ್ಥರ ಸಭೆ. ಈ ಸಭೆಯು ಪ್ರತಿ 2 ವರ್ಷಗಳಿಗೊಮ್ಮೆ ನಡೆಯುತ್ತದೆ. ಕಾಮನ್ವೆಲ್ತ್ ರಾಷ್ಟ್ರಗಳ ಮುಖ್ಯಸ್ಥರು ಒಂದೆಡೆ ಸೇರಿ, ಜಾಗತಿಕ ಮತ್ತು ಕಾಮನ್ವೆಲ್ತ್ ವಿಚಾರಗಳ ಬಗ್ಗೆ ಚರ್ಚಿಸಿ, ಕೊನೆಗೆ ಸಮಗ್ರ ನೀತಿಗಳು ಹಾಗೂ ಯೋಜನೆಗಳ ಬಗ್ಗೆ ನಿರ್ಧಾರ ಕೈಗೊಳ್ಳುವುದೇ ಈ ಸಭೆಯ ಉದ್ದೇಶವಾಗಿದೆ.

**ಈ ಬಾರಿ ಎಲ್ಲಿ?**

ಈ ಬಾರಿ ಕಾಮನ್ವೆಲ್ತ್ ರಾಷ್ಟ್ರಗಳ ಸರ್ಕಾರಿ ಮುಖ್ಯಸ್ಥರ ಸಭೆಯು ಶ್ರೀಲಂಕಾದಲ್ಲಿ ನಡೆಯಲಿದೆ. ಕಳೆದ 24 ವರ್ಷಗಳಲ್ಲಿ ಆಸಿಯಾನ್ ರಾಷ್ಟ್ರವೊಂದು ಈ ಶೃಂಗವನ್ನು ನಡೆಸುತ್ತಿರುವುದು ಇದೇ ಮೊದಲು. ಅತಿಥೇಯ ರಾಷ್ಟ್ರ ಹಾಗೂ ಕಾಮನ್ವೆಲ್ತ್ ಕಾರ್ಯಾಲಯವು ಜಂಟಿಯಾಗಿ ಚೋಗಂ ಅನ್ನು ಏರ್ಪಡಿಸುತ್ತದೆ.

**ಹೆಸರು ಬಂದಿದ್ದು ಹೇಗೆ?**

ಕಾಮನ್ವೆಲ್ತ್ ನಾಯಕರು ಒಂದೆಡೆ ಸೇರಿ ಚರ್ಚೆಯಲ್ಲಿ ತೊಡಗುವ ಕ್ರಮ 1949 ರಿಂದಲೂ ಇತ್ತು. ಆದರೆ ಇದಕ್ಕೆ 'ಕಾಮನ್ವೆಲ್ತ್ ಹೆಡ್ಸ್ ಆಫ್ ಗವರ್ನಮೆಂಟ್ ಮೀಟಿಂಗ್' ಎಂಬ ಹೆಸರು ಬಂದಿದ್ದು 1971 ರಲ್ಲಿ ಸಿಂಗಾಪುರದಲ್ಲಿ ನಡೆದ ಸೆಷನ್‌ನಲ್ಲಿ. ಈ ಸಭೆಯಲ್ಲಿ ವಿವಿಧ ರಾಷ್ಟ್ರಗಳ ಪ್ರಧಾನಮಂತ್ರಿ ಹಾಗೂ ರಾಷ್ಟ್ರಪತಿ ಇಬ್ಬರೂ ಭಾಗವಹಿಸುವ ಅವಕಾಶ ಇರುವ ಕಾರಣ ಇದಕ್ಕೆ ಈ ಹೆಸರು ನೀಡಲಾಯಿತು. ಈ ಸಭೆಯ ವಿಶೇಷತೆಯೆಂದರೆ, ಸಭೆಯ ಉದ್ಘಾಟನಾ ಸಮಾರಂಭ ಹಾಗೂ ಔಪಚಾರಿಕ ಎಕ್ಸಿಕ್ಯೂಟಿವ್ ಸೆಷನ್ ನ ಬಳಿಕ ನಾಯಕರೆಲ್ಲರೂ ಖಾಸಗಿಯಾಗಿ ಭೇಟಿಯಾಗಿ ಚರ್ಚಿಸುವ 'ರಿಟ್ರೀಟ್' ಎಂಬ ಕಾರ್ಯಕ್ರಮ ನಡೆಯುತ್ತದೆ. ಇಲ್ಲಿ ಯಾವುದೇ ವಿಚಾರದ ಬಗ್ಗೆಯೂ ನಾಯಕರು ಮುಕ್ತವಾಗಿ ಚರ್ಚಿಸಬಹುದು.

**ಏನೇನು ಚರ್ಚೆ?**

ಈ ಹಿಂದಿನ ಚೋಗಂ ಸಭೆಯಲ್ಲಿ ಅಂತಾರಾಷ್ಟ್ರೀಯ ಶಾಂತಿ ಮತ್ತು ಭದ್ರತೆ, ಪ್ರಜಾಪ್ರಭುತ್ವ, ಹವಾಮಾನ ಬದಲಾವಣೆ, ಬಹುಪಕ್ಷೀಯ ವ್ಯಾಪಾರ ವಿಚಾರ, ಉತ್ತಮ ಆಡಳಿತ, ಸುಸ್ಥಿರ ಅಭಿವೃದ್ಧಿ, ಸಾಲ ನಿರ್ವಹಣೆ, ಶಿಕ್ಷಣ, ಪರಿಸರ, ಲಿಂಗ ಸಮಾನತೆ, ಆರೋಗ್ಯ, ಮಾನವ ಹಕ್ಕುಗಳು, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಮತ್ತಿತರ ಜಾಗತಿಕ ವಿಚಾರಗಳ ಬಗ್ಗೆ ಚರ್ಚಿಸಲಾಗಿದೆ.

**ಈ ಬಾರಿ ವಿರೋಧ ಏಕೆ?**

ಶ್ರೀಲಂಕಾ ಸರ್ಕಾರ ಅಲ್ಲಿನ ತಮಿಳರ ಮೇಲೆ ನಿರಂತರವಾಗಿ ದೌರ್ಜನ್ಯ ನಡೆಸುತ್ತಾ ಬಂದಿದೆ. ಹೀಗಿರುವಾಗ ನಮ್ಮ ಪ್ರಧಾನಿ ಲಂಕೆಗೆ ಹೋಗಿ ಸಭೆಯಲ್ಲಿ ಭಾಗವಹಿಸುವುದು ತರವಲ್ಲ. ಹಾಗಾಗಿ ಚೋಗಂ ಅನ್ನು ಭಾರತ ಬಹಿಷ್ಕರಿಸಬೇಕು ಎಂಬುದು ಅನೇಕ ರಾಜಕೀಯ ಪಕ್ಷಗಳ, ಸಂಘಸಂಸ್ಥೆಗಳ ಆಗ್ರಹವಾಗಿತ್ತು. ಈ ಹಿನ್ನೆಲೆಯಲ್ಲಿ ಪ್ರಧಾನಿ ಸಿಂಗ್ ಅವರು ಶ್ರೀಲಂಕಾ ಭೇಟಿಯನ್ನು ಸ್ಥಗಿತಗೊಳಿಸಿದ್ದಾರೆ. ಆದರೆ, ಸಂಪೂರ್ಣವಾಗಿ ಸಭೆಯನ್ನು ಬಹಿಷ್ಕರಿಸಲು ಮನಸ್ಸಿಲ್ಲದ ಕಾರಣ ವಿದೇಶಾಂಗ ಸಚಿವ ಸಲ್ಮಾನ್ ಖುರ್ಷಿದ್‌ರನ್ನು ಚೋಗಂ ಸಭೆಗೆ ಕಳುಹಿಸಲು ನಿರ್ಧರಿಸಲಾಗಿದೆ.

**ಅಮೆರಿಕಾದಲ್ಲಿ ನೂತನ ವಿಶ್ವ ವಾಣಿಜ್ಯ ಕೇಂದ್ರದ ಗೋಪುರದ ಲೋಕಾರ್ಪಣೆ**

ಭಯೋತ್ಪಾದಕರ ದಾಳಿಯಲ್ಲಿ 2001ರ ಸೆಪ್ಟೆಂಬರ್ 11ರಂದು ಧ್ವಂಸಗೊಂಡ ವಿಶ್ವ ವಾಣಿಜ್ಯ ಕೇಂದ್ರದ ಅವಳಿ ಗೋಪುರದ ಸ್ಥಳದಲ್ಲಿಯೇ ನೂತನವಾಗಿ ಪುನರ್ ನಿರ್ಮಿಸಲಾಗಿರುವ ವಿಶ್ವ ವಾಣಿಜ್ಯ ಕೇಂದ್ರದ ಗೋಪುರದ ಲೋಕಾರ್ಪಣೆ ಕಾರ್ಯಕ್ರಮ ಜರುಗಿತು. ಉಗ್ರಗಾಮಿಗಳು ವೈಮಾನಿಕ ದಾಳಿ ನಡೆಸಿ ಧರೆಗುರುಳಿಸಿದ್ದ ಹಳೆಯ ಅವಳಿ ಗೋಪುರದಲ್ಲಿ 2,700 ಜನರು ಬಲಿಯಾಗಿದ್ದರು. ಮೂಲ ಕಟ್ಟಡ ಇದ್ದ 16 ಎಕರೆ ಜಾಗದಲ್ಲಿಯೇ ಪುನರ್ ನಿರ್ಮಿಸಲಾಗಿರುವ 72 ಅಂತಸ್ತಿನ ಈ ನೂತನ ಗಗನಚುಂಬಿ ಗೋಪುರದಲ್ಲಿ ನಾಲ್ಕು ವಿಶ್ವ ವಾಣಿಜ್ಯ ಕೇಂದ್ರಗಳಿವೆ.

**ನಾಲ್ಕು ವಿಶ್ವ ವಾಣಿಜ್ಯ ಕೇಂದ್ರ:**

ಸಮಾರಂಭದಲ್ಲಿ ಗಾಜಿನ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ನ್ಯೂಯಾರ್ಕ್ ಮೇಯರ್ ಮೈಕೆಲ್ ಬ್ಲೂಮ್ಬರ್ಗ್ `ನ್ಯೂಯಾರ್ಕ್ ಜನರ ಶಕ್ತಿ ಮತ್ತು ಚೇತರಿಕೆಯ ದ್ಯೋತಕವಾಗಿ ಮೂಲ ಕಟ್ಟಡ ಇದ್ದ ಜಾಗದಲ್ಲಿಯೇ ನಾಲ್ಕು ವಿಶ್ವ ವಾಣಿಜ್ಯ ಕೇಂದ್ರಗಳು ತಲೆ ಎತ್ತಿವೆ' ಎಂದು ಹೇಳಿದರು. ಸಮಾರಂಭದಲ್ಲಿ ಪಾಲ್ಗೊಂಡಿದ್ದ ಮ್ಯಾನ್ ಹಟ್ಟನ್ ಪ್ರಾಂತ್ಯದ ಪ್ರೆಸಿಡೆಂಟ್ ಸ್ಕಾಟ್ ಎಂ. ಸ್ಟ್ರಿಂಗರ್ ಮಾತನಾಡಿ `ನ್ಯೂಯಾರ್ಕಿಗರಿಗೆ ಈ ನಾಲ್ಕು ವಿಶ್ವ ವಾಣಿಜ್ಯ ಕೇಂದ್ರಗಳು ಬರೀ ಗಗನಚುಂಬಿ ಕಟ್ಟಡಗಳಲ್ಲಿಯೇ ವಿಶೇಷವಾದ್ದವುಗಳಲ್ಲ. ಬದಲು ಇವು ನಮ್ಮ ಚೇತರಿಕೆ ಮತ್ತು ಸಂಕಲ್ಪ ಶಕ್ತಿಯ ಪುರಾವೆಯ ಸಂಕೇತವಾಗಿವೆ' ಎಂದರು. ಚಿಕ್ಕ ನಾಲ್ಕು ಕಟ್ಟಡಗಳ ನಡುವೆ ತಲೆಎತ್ತಿರುವ 298 ಮೀಟರ್ ಎತ್ತರದ ಈ ನೂತನ ಗೋಪುರದ ವಿನ್ಯಾಸವನ್ನು ಪ್ರಿಟ್ಜ್ಕರ್ ಪ್ರಶಸ್ತಿ ವಿಜೇತ ಜಪಾನ್ ವಾಸ್ತುಶಿಲ್ಪಿ ಪುಮಿಹಿಕೊ ಮಾಕಿ ಅವರು ಮಾಡಿದ್ದಾರೆ.

**ವಿವಾದಾತ್ಮಕ 'ಒಂದೇ ಮಗು' ನೀತಿಯನ್ನು ಸಡಿಲಿಸಿಲು ಚೀನಾ ಸರ್ಕಾರ ನಿರ್ಧಾರ**

ಮೂವತ್ತು ವರ್ಷಗಳ ಬಳಿಕ ತನ್ನ ವಿವಾದಾತ್ಮಕ 'ಒಂದೇ ಮಗು' ನೀತಿಯನ್ನು ಸಡಿಲಿಸಲು ಚೀನಾ ನಿರ್ಧರಿಸಿದೆ. ಈಗಾಗಲೇ ಒಂದೇ ಮಗುವನ್ನು ಹೊಂದಿರುವ ಕುಟುಂಬಕ್ಕೆ ಇನ್ನೊಂದು ಮಗುವನ್ನು ಹೊಂದಲು ಸರ್ಕಾರ ಅವಕಾಶ ಮಾಡಿಕೊಡಲಿದೆ. ಒಂದೇ ಮಗು ಯೋಜನೆಯಿಂದ ಸಮಾಜದಲ್ಲಿ ಉಂಟಾಗಿರುವ ಅಸಮತೋಲನ ಮತ್ತು ಅನಾಥಾಶ್ರಮಕ್ಕೆ ಸೇರುತ್ತಿರುವ ವಯಸ್ಕರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಕುಟುಂಬ ಯೋಜನೆಯನ್ನು ಹಿಂಪಡೆಯುವ ನಿರ್ಧಾರಕ್ಕೆ ಬರಲಾಗಿದೆ. ಜತೆಗೆ ಚೀನಾದ ಕಮ್ಯುನಿಸ್ಟ್ ಪಕ್ಷ ಇತ್ತೀಚೆಗೆ ಸಾಮಾಜಿಕ ಸುಧಾರಣೆಯ ದೃಷ್ಟಿಯಿಂದ ಜಾರಿಗೊಳಿಸಿದ ನೂತನ ಯೋಜನೆಯಲ್ಲಿ ಭೀಕರ ಬಂದೀಖಾನೆ ವ್ಯವವಸ್ಥೆಯನ್ನು ನಿರ್ಮೂಲನೆ ಮಾಡುವುದೂ ಸೇರಿದೆ.

**'ಒಂದೇ ಮಗು' ನೀತಿ:**

ವಿಶ್ವದಲ್ಲೇ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಚೀನಾವು 1970ರ ದಶಕದಲ್ಲಿ ಜನಸಂಖ್ಯೆ ನಿಯಂತ್ರಣಕ್ಕಾಗಿ ಒಂದೇ ಮಗು ನೀತಿ ಅನುಷ್ಠಾನಕ್ಕೆ ತಂದಿತ್ತು. ಆದರೆ, ದೀರ್ಘಾವಧಿಯಲ್ಲಿ ದೇಶದ ಅರ್ಥವ್ಯವಸ್ಥೆ ಮೇಲೆ ಬೀರುವ ಪರಿಣಾಮವನ್ನು ಪರಿಗಣಿಸಿ ಚೀನಾದ ಕಮ್ಯುನಿಷ್ಟ್ ಪಕ್ಷದ ಪ್ರಮುಖ ಮುಖಂಡರ ಸಭೆಯಲ್ಲಿ ಈ ನೀತಿಯನ್ನು ಸಡಿಲಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ. ಅದರಂತೆ ದಂಪತಿಯಲ್ಲಿ ಒಬ್ಬರು ಒಂದೇ ಮಗು ನೀತಿಯಂತೆ ಜನಿಸಿದ್ದರೆ ಅವರು ಎರಡನೇ ಮಗುವನ್ನು ಹೊಂದುವ ಅವಕಾಶ ಪಡೆಯಲಿದ್ದಾರೆ.

**ದೊಡ್ಡ ಮೊತ್ತದ ದಂಡ:**

ಒಂದು ಮಗು ನೀತಿಯನ್ನು ಉಲ್ಲಂಘಿಸಿದ ದಂಪತಿ ದೊಡ್ಡ ಮೊತ್ತದ ದಂಡ ಪಾವತಿಸಬೇಕಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಕೆಲವರಷ್ಟೇ ಈ ಕಾನೂನು ಉಲ್ಲಂಘಿಸುವ ಸಾಹಸಕ್ಕೆ ಕೈಹಾಕುತ್ತಿದ್ದರು. ಈ ಒಂದು ಮಗು ನೀತಿಯಿಂದಾಗಿ 1980ರಿಂದ ಈವರೆಗೆ 400 ದಶಲಕ್ಷದಷ್ಟು ಮಕ್ಕಳ ಜನನವನ್ನು ನಿಯಂತ್ರಿಸಿದಂತಾಗಿದೆಯಂತೆ.

**ಸಮಸ್ಯೆ ಏನು?**

ಚೀನಾದ ಒಂದೇ ಮಗು ನೀತಿ ದೇಶದಲ್ಲಿ ಅನೇಕ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಸಮಸ್ಯೆಗಳನ್ನು ಹುಟ್ಟುಹಾಕಿತ್ತು. ಇದು ಜನರ ವಿರೋಧಕ್ಕೂ ಕಾರಣವಾಗಿತ್ತು. ಇದರಿಂದಾಗಿ ಗ್ರಾಮೀಣ 1980ರ ಅವಧಿಯಲ್ಲಿ ಸರ್ಕಾರ ಗ್ರಾಮೀಣ ಪ್ರದೇಶದಲ್ಲಿ ಮೊದಲ ಮಗು ಹೆಣ್ಣಾಗಿದ್ದರೆ ದಂಪತಿಗೆ ಇನ್ನೊಂದು ಮಗು ಹೊಂದುವ ಅವಕಾಶ ಮಾಡಿಕೊಟ್ಟಿತ್ತು.

**ಹಿಂದೆ ಏನಿತ್ತು?**

ನಗರದಲ್ಲಿ ವಾಸಿಸುವ ದಂಪತಿಗೆ ಒಂದೇ ಮಗು ನೀತಿ ಕಡ್ಡಾಯ - ಮೊದಲ ಮಗು ಹೆಣ್ಣಾಗಿದ್ದರೆ ಗ್ರಾಮೀಣದವರು ಎರಡನೇ ಮಗು ಹೊಂದಬಹುದಿತ್ತು.

**ನೀತಿಯ ಪರಿಣಾಮಗಳು:**

- ಒಂದೇ ಮಗು ನೀತಿಯಿಂದಾಗಿ ಚೀನಾದಲ್ಲೀಗ ವೃದ್ಧರ ಸಂಖ್ಯೆ ಹೆಚ್ಚುತ್ತಿದೆ. ಕಳೆದ ವರ್ಷದ ವರದಿ ಪ್ರಕಾರ ಚೀನಾದಲ್ಲಿ 185 ದಶಲಕ್ಷ ಮಂದಿ(ದೇಶದ ಶೇ. 13.7ರಷ್ಟು) 60ಕ್ಕಿಂತ ಮೇಲ್ಪಟ್ಟ ವಯೋವಾನದವರು. 2015ರ ವೇಳೆಗೆ ಈ ಪ್ರಮಾಣ 221 ದಶಲಕ್ಷ ತಲುಪಲಿದೆ. ಇದರ ಒಟ್ಟಾರೆ ಪರಿಣಾಮ ದೇಶದಲ್ಲಿ ದುಡಿಯುವ ಕೈಗಳ ಸಂಖ್ಯೆ ಕಡಿಮೆಯಾಗಲಿದೆ.
- ಒಂದೇ ಮಗು ನೀತಿಯಿಂದಾಗಿ ಸದ್ಯ 930 ದಶಲಕ್ಷ ಇರುವ ಚೀನಾದ ಕಾರ್ಮಿಕರ ಸಂಖ್ಯೆ 2025 ರ ವೇಳೆಗೆ ತೀವ್ರ ಪ್ರಮಾಣದಲ್ಲಿ ಇಳಿಮುಖವಾಗಲು ಆರಂಭಿಸುತ್ತದೆ. ಪ್ರತಿ ವರ್ಷ 10 ದಶಲಕ್ಷ ಕಾರ್ಮಿಕರ ಕೊರತೆಯನ್ನು ದೇಶ ಎದುರಿಸುತ್ತದೆ. 2030ರ ವೇಳೆಗೆ ದೇಶದ ಹಿರಿಯರ ಸಂಖ್ಯೆ 360 ದಶಲಕ್ಷದಷ್ಟಾಗಲಿದೆ.

**ಸಮುದ್ರದ ಮೇಲೆ "ವಾಯು ರಕ್ಷಣಾ ಗುರುತಿನ ವಲಯ (Air Defence Identificatoin Region)" ರಚಿಸಲಿರುವ ಚೀನಾ**

ಚೀನಾ ಸಮುದ್ರದ ಮೇಲೆ ತನ್ನ ಒಡೆತನವನ್ನು ಸಾಧಿಸಲು ಚೀನಾ ಮತ್ತು ಜಪಾನ್ ಸೆಣಸುತ್ತಿರುವಾಗಲೇ ಚೀನಾ ಈಗ ಹೊಸ ಬಾಂಬ್ ಸಿಡಿಸಿದೆ. ಪೂರ್ವ ಚೀನಾ ಸಮುದ್ರದಲ್ಲಿ ಜಪಾನ್ ಒಡೆತನದಲ್ಲಿರುವ ಪ್ರಾಂತ್ಯದ ಮೇಲೆ ಚೀನಾ "ವಾಯು ರಕ್ಷಣಾ ಗುರುತಿನ ವಲಯ" ವನ್ನು ರಚಿಸುವುದಾಗಿ ಚೀನಾ ತಿಳಿಸಿದೆ. ಚೀನಾದ ಈ ನಿರ್ಧಾರ ಜಪಾನ್ ಮತ್ತು ತೈವಾನ್ ದೇಶಗಳನ್ನು ಕೆರಳಿಸಲಿದೆ ಎನ್ನಲಾಗಿದೆ.

- ಇದಲ್ಲದೇ ಈ ಭಾಗದಲ್ಲಿ ಹಾರಾಡುವ ವಿಮಾನಗಳನ್ನು ಗುರುತಿಸಲು ಹೊಸ ನೀತಿ ನಿಯಮಗಳನ್ನು ಸಹ ಜಾರಿಗೆ ತರಲಾಗುವುದು. ಒಂದು ವೇಳೆ ಈ ನೀತಿ ನಿಯಮಗಳನ್ನು ಉಲ್ಲಂಘಿಸಿದರೆ ಶಿಕ್ಷೆಗೆ ಗುರಿಪಡಿಸಲಾಗುವುದು ಎಂದು ಚೀನಾ ಹೇಳಿದೆ, ಹೊಸ ನೀತಿಯ ಪ್ರಕಾರ ಈ ಭಾಗದಲ್ಲಿ ಹಾರಾಡುವ ವಿಮಾನಗಳು ತಮ್ಮ ರಾಷ್ಟ್ರದ ಬಗ್ಗೆ, ಈ ಭಾಗದಲ್ಲಿ ಹಾರಾಡಲು ಕಾರಣವನ್ನು ಸ್ಪಷ್ಟವಾಗಿ ತಿಳಿಸಬೇಕು ಎಂದು ಚೀನಾ ಉತ್ತರಿಸಿದೆ.
- ಚೀನಾ ಈಗ ಗುರುತಿಸಿರುವ ಪ್ರದೇಶದ ವ್ಯಾಪ್ತಿ ಎಷ್ಟಿದೆಯೆಂದರೆ ಜಪಾನ್ ಅಕ್ರಮಿತ ದ್ವೀಪ ಪ್ರದೇಶ "ಸೆನಾಕಕು" ಸಹ ಇದರಲ್ಲಿ ಸೇರಿದೆ.
- ಇತ್ತೀಚೆಗಷ್ಟೆ ಸೆನಾಕಕು ಪ್ರದೇಶಕ್ಕೆ ನುಸುಳುವ ವಿದೇಶಿ ನೌಕೆಯನ್ನು ಹೊಡೆದು ಉರುಳಿಸುವುದಾಗಿ ಜಪಾನ್ ಹೇಳಿದ ಹಿನ್ನೆಲೆಯಲ್ಲಿ ಚೀನಾ ಈ ಹೊಸ ತಂತ್ರವನ್ನು ರೂಪಿಸಿದೆ.
- ಸೆನಾಕಕು ದ್ವೀಪ ಪ್ರದೇಶಗಳ ಮೇಲೆ ಒಡೆತನ ಸಾಧಿಸುವ ವಿಷಯದಲ್ಲಿ ಚೀನಾ ಮತ್ತು ಜಪಾನ್ ರಾಷ್ಟ್ರಗಳು ಅನೇಕ ವರ್ಷಗಳಿಂದ ಸೆಣಸುತ್ತಲಿವೆ.

## ಪಾಕಿಸ್ತಾನ ಮತ್ತು ಭಾರತ ನಡುವೆ ತಲೆ ಎತ್ತಲಿದೆ ತಡೆ ಗೋಡೆ

ಪಾಕಿಸ್ತಾನದಿಂದ ಒಳನುಸುಳುವ ದಾಳಿಕೋರರನ್ನು ತಡೆಯುವ ಸಲುವಾಗಿ ಭಾರತದ ಜಮ್ಮು ಮತ್ತು ಕಾಶ್ಮೀರದ ಗಡಿ ಭಾಗದಲ್ಲಿ ಬೃಹತ್ ಆದ ರಕ್ಷಣಾ ಗೋಡೆಯನ್ನು ನಿರ್ಮಿಸಲು ಭಾರತ ಸಿದ್ಧತೆ ನಡೆಸಿದೆ. ಭಯೋತ್ಪಾದಕರು, ಕಳ್ಳ ಸಾಗಣಿಕೆ ಮಾಡುವವರನ್ನು ತಡೆಯಲು ಈ ಗೋಡೆ ಅತ್ಯಂತ ಪ್ರಮುಖ ಪಾತ್ರವಹಿಸಲಿದೆ ಎನ್ನಲಾಗಿದೆ. ಶೀತಲ ಸಮರದ ವೇಳೆ ಜರ್ಮನಿಯಲ್ಲಿ ರಚಿಸಲಾಗಿರುವ "ಬರ್ಲಿನ್ ಗೋಡೆ" ಮಾದರಿಯಂತೆಯೇ ಇದು ಸಹ ತಲೆ ಎತ್ತಲಿದೆ.

**ರಕ್ಷಣಾ ಗೋಡೆಯ ಬಗ್ಗೆ:**

- ಪ್ರಸ್ತಾಪಿತ ಈ ತಡೆ ಗೋಡೆ 198 ಕಿ,ಮೀ ಉದ್ದವಿರಲಿದ್ದು, 10 ಮೀ ಎತ್ತರವಿರಲಿದೆ. ಜಮ್ಮು ಮತ್ತು ಪಾಕಿಸ್ತಾನ ಗಡಿ ಭಾಗದಲ್ಲಿ ಈ ಗೋಡೆ ತಲೆ ಎತ್ತಲಿದೆ.
- ಸುಮಾರು 135 ಮೀ ಅಗಲವಿರಲಿರುವ ಈ ಗೋಡೆ ಜಮ್ಮು, ಕಥು ಹಾಗೂ ಸಂಬಾ ಜಿಲ್ಲೆಯ 118 ಹಳ್ಳಿಗಳ ಮೂಲಕ ಹಾದು ಹೋಗಲಿದೆ.
- ಸದ್ಯ ಈ ಯೋಜನೆಯ ಬಂಡವಾಳ ಎಷ್ಟು ಎಂಬುದರ ಬಗ್ಗೆ ನಿಖರ ಮಾಹಿತಿ ಇಲ್ಲ. ಆದರೆ ಗೃಹ ಸಚಿವಾಲಯ ಇದಕ್ಕೆ ತಗಲುವ ವೆಚ್ಚವನ್ನು ಭರಿಸಲಿದೆ ಎನ್ನಲಾಗಿದೆ. ಗಡಿ ಭದ್ರತಾ ಪಡೆ ಇದರ ನಿರ್ವಹಣೆಯನ್ನು ವಹಿಸಿಕೊಳ್ಳಲಿದೆ.

## ಇರಾನ್ ಪರಮಾಣು ಅಸ್ತ್ರ ಹೊಂದುವುದನ್ನು ತಡೆಯುವುದಕ್ಕೆ ವಿಶ್ವದ ಪ್ರಮುಖ ರಾಷ್ಟ್ರಗಳೊಂದಿಗೆ ಒಪ್ಪಂದ

ಪರಮಾಣು ಕಾರ್ಯಕ್ರಮಗಳನ್ನು ತಗ್ಗಿಸುವ ದಿಸೆಯಲ್ಲಿ ವಿಶ್ವದ ಪ್ರಮುಖ ರಾಷ್ಟ್ರಗಳೊಂದಿಗೆ ಇರಾನ್ ಕೊನೆಗೂ ಒಪ್ಪಂದ ಮಾಡಿಕೊಂಡಿದ್ದು, ಈ ಬೆಳವಣಿಗೆಯನ್ನು ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮ ಅವರು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. 'ಇರಾನ್ ದೇಶವು ಪರಮಾಣು ಅಸ್ತ್ರ ಹೊಂದುವುದನ್ನು ತಡೆಯುವುದಕ್ಕೆ ಇದು ಮಹತ್ವದ ಮೊದಲ ಹೆಜ್ಜೆ' ಎಂದು ಬಣ್ಣಿಸಿದ್ದಾರೆ.

**ಸಂಧಾನ ಮಾತುಕತೆ:**

ಅಮೆರಿಕ, ಬ್ರಿಟನ್, ರಷ್ಯಾ, ಚೀನಾ, ಫ್ರಾನ್ಸ್ ಹಾಗೂ ಜರ್ಮನಿ ದೇಶಗಳ ಪ್ರತಿನಿಧಿಗಳು ಸತತ ನಾಲ್ಕು ದಿನಗಳ ಸಂಧಾನದ ಮೂಲಕ ಇರಾನ್ ಜತೆಗೆ ಈ ಒಪ್ಪಂದಕ್ಕೆ ಬರಲು ಯಶಸ್ವಿಯಾದರು. ಐರೋಪ್ಯ ಒಕ್ಕೂಟದ ವಿದೇಶಿ ನೀತಿ ಅಧ್ಯಕ್ಷರಾದ ಕ್ಯಾಥರಿನ್ ಆಸ್ಟನ್ ಅವರು ಅಧಿಕೃತವಾಗಿ ಈ ಒಪ್ಪಂದವನ್ನು ಘೋಷಿಸಿದರು.

**ಒಪ್ಪಂದವೇನು?**

- ಪರಮಾಣು ಕಾರ್ಯಕ್ರಮದ ವಿಷಯದಲ್ಲಿ ಇನ್ನು ಆರು ತಿಂಗಳವರೆಗೆ ಇರಾನ್ ಮೇಲೆ ಆರ್ಥಿಕ ನಿರ್ಬಂಧ ಇರುವುದಿಲ್ಲ.

- ಒಪ್ಪಂದದ ಪ್ರಕಾರ ಇರಾನ್ ದೇಶವು ಶೇ.5 ರಷ್ಟು ಯುರೇನಿಯಂ ಸಂಸ್ಕರಣ ಕಾರ್ಯಕ್ರಮಗಳನ್ನು ನಿಲ್ಲಿಸಲು ಒಪ್ಪಿಕೊಂಡಿದೆ.
- 'ಪರಮಾಣು ಅಸ್ತ್ರ ಹೊಂದುವ ಹಕ್ಕು ನಮಗೆ ಈಗಲೂ ಇದೆ' ಎಂದು ಇರಾನ್ ಸಂಧಾನಕಾರರು ಹೇಳಿದ್ದಾರೆ.
- ಇಷ್ಟು ದಿನಗಳವರೆಗೆ ನಿರ್ಬಂಧಕ್ಕೆ ಒಳಗಾಗಿದ್ದಕ್ಕೆ ಇರಾನ್, ಸುಮಾರು ರೂ. 43 ಸಾವಿರ ಕೋಟಿ (700 ಕೋಟಿ ಡಾಲರ್) ಪರಿಹಾರ ಪಡೆದುಕೊಳ್ಳಲಿದೆ.
- 'ಪರಮಾಣು ಕಾರ್ಯಕ್ರಮಗಳ ಹಿಂದೆ ಯಾವುದೇ ದುರುದ್ದೇಶವಿಲ್ಲ ಎನ್ನುವುದನ್ನು ಸಾಬೀತು ಮಾಡುವ ಹೊಣೆಗಾರಿಕೆ ಇರಾನ್ ಮೇಲೆ ಇದೆ. ಒಂದು ವೇಳೆ ಈ ಅವಕಾಶವನ್ನು ಇರಾನ್ ಬಳಸಿಕೊಂಡಲ್ಲಿ ಅಂತರರಾಷ್ಟ್ರೀಯ ಸಮುದಾಯದಿಂದ ಮತ್ತೆ ನೆರವು ಪಡೆಯುವುದಕ್ಕೆ ಸಾಧ್ಯವಾಗುತ್ತದೆ.

## ಇಸ್ಲಾಂ ಧರ್ಮ ಹಾಗೂ ಮುಸಲ್ಮಾನರಿಗೆ ನಿಷೇಧ ಹೇರಿದ ಅಂಗೋಲಾ ದೇಶ

ಆಫ್ರಿಕಾ ಖಂಡದಲ್ಲಿರುವ ಅಂಗೋಲಾ ಎಂಬ ಪುಟ್ಟ ರಾಷ್ಟ್ರ, ಇಸ್ಲಾಂ ಧರ್ಮ ಹಾಗೂ ಮುಸಲ್ಮಾನರಿಗೆ ನಿಷೇಧ ಹೇರಿದೆ. ಇದರ ಬೆನ್ನಲ್ಲೇ ದೇಶಾದ್ಯಂತ ಇರುವ ಮಸೀದಿಗಳನ್ನು ಒಡೆಯಲು ಆದೇಶಿಸಿದೆ. ತನ್ಮೂಲಕ ಇಂತಹ ತೀರ್ಮಾನ ಕೈಗೊಂಡ ವಿಶ್ವದ ಮೊದಲ ದೇಶ ಎನಿಸಿಕೊಂಡಿದೆ.

**ಪ್ರಥಮ ರಾಷ್ಟ್ರ:**

'ನ್ಯಾಯ ಹಾಗೂ ಮಾನವ ಹಕ್ಕುಗಳ ಸಚಿವಾಲಯ ಇಸ್ಲಾಂ ಧರ್ಮವನ್ನು ಕಾನೂನುಬದ್ಧಗೊಳಿಸುವ ಪ್ರಕ್ರಿಯೆಗೆ ಅನುಮತಿ ನೀಡಿಲ್ಲ. ಹೀಗಾಗಿ ಹೊಸದಾಗಿ ಆದೇಶ ನೀಡುವವರೆಗೂ ಮಸೀದಿಗಳನ್ನು ಮುಚ್ಚಲಾಗುತ್ತದೆ' ಎಂದು ಅಂಗೋಲಾದ ಸಂಸ್ಕೃತಿ ಸಚಿವೆ ರೋಸಾ ಕ್ರೂಜ್ ಎ ಸಿಲ್ವಾ ಅವರು ತಿಳಿಸಿದ್ದಾರೆ ಎಂದು ಹಲವಾರು ಸುದ್ದಿ ಸಂಸ್ಥೆಗಳು ಹಾಗೂ ಅಂಗೋಲಾದ ದಿನಪತ್ರಿಕೆಗಳು ವರದಿ ಮಾಡಿವೆ. ದೇಶದಲ್ಲಿರುವ ಅಕ್ರಮ ಧಾರ್ಮಿಕ ಪಂಗಡಗಳನ್ನು ನಿಷೇಧಿಸುವ ಒಂದು ಭಾಗವಾಗಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಕಳೆದ ವಾರ ನಡೆದ ರಾಷ್ಟ್ರೀಯ ವಿಧಾನಸಭೆಯ ಆರನೇ ಆಯೋಗದಲ್ಲಿ ತಿಳಿಸಿದ್ದಾರೆ.

**ನಿಷೇಧದ ಕಾರಣ:**

ಜನರು ಜಮಾವಣೆಗೊಂಡು ಆರಾಧನೆಯಲ್ಲಿ ತೊಡಗುವುದು ಅಂಗೋಲಾ ಸಂಸ್ಕೃತಿ, ಸಂಪ್ರದಾಯಕ್ಕೆ ವಿರುದ್ಧವಾದುದು. ಆದರೂ ಜನರ ಜಮಾವಣೆ ಸಂಪ್ರದಾಯ ಉದಯಿಸಿದ ಹಿನ್ನೆಲೆಯಲ್ಲಿ ಅದನ್ನು ಎದುರಿಸುವ ಸಲುವಾಗಿ ಇಂತಹ ಕ್ರಮದ ಅಗತ್ಯ ಸೃಷ್ಟಿಯಾಯಿತು ಎಂದು ಸಮರ್ಥಿಸಿಕೊಂಡಿದ್ದಾರೆ. ಇಸ್ಲಾಂ ಒಂದೇ ಅಲ್ಲ, ಹಲವಾರು ಧರ್ಮಗಳನ್ನು ಅಕ್ರಮ ಎಂದು ಘೋಷಿಸಲಾಗಿದೆ. ಹೀಗಾಗಿ ಅವುಗಳ ಧಾರ್ಮಿಕ ಕೇಂದ್ರಗಳೂ ಮುಚ್ಚಲಿವೆ. ಕಾನೂನುಬದ್ಧಗೊಳಿಸುವಂತೆ ಕೋರಿ ವಿವಿಧ ಧರ್ಮಗಳಿಂದ ಸಾವಿರಾರು ಅರ್ಜಿಗಳು ಸರ್ಕಾರಕ್ಕೆ ಬಂದಿವೆ ಎಂದು ಅವರು ಹೇಳಿದ್ದಾರೆ. ಈ ಕುರಿತು ಪ್ರತಿಕ್ರಿಯಿಸಿರುವ

ಅಂಗೋಲಾದ ಅಧ್ಯಕ್ಷ ಜೋಸ್ ಎಜುವಾಡೋ ಡೊಸ್ ಸ್ಯಾಂಟೋಸ್ ಅವರು, ದೇಶದ ಮೇಲಿನ ಇಸ್ಲಾಮಿಕ್ ಪ್ರಭಾವಕ್ಕೆ ಇದು ಅಂತಿಮ ಅಂತ್ಯ ಎಂದು ಹೇಳಿದ್ದಾರೆ.

**ಎಲ್ಲಿದೆ ಅಂಗೋಲಾ?**

ಪೋರ್ಚುಗಲ್‌ನ ವಸಾಹತು ರಾಷ್ಟ್ರವಾಗಿದ್ದ ಅಂಗೋಲಾ ಮಧ್ಯ ಆಫ್ರಿಕಾದಲ್ಲಿದೆ. ನಮೀಬಿಯಾ, ಕಾಂಗೋ, ಜಾಂಬಿಯಾದ ಜತೆ ಗಡಿ ಹಂಚಿಕೊಂಡಿದೆ. ಅಟ್ಲಾಂಟಿಕ್ ಕರಾವಳಿ ತೀರವನ್ನೂ ಹೊಂದಿದೆ. 1975ರ ನವೆಂಬರ್ 11 ರಂದು ಪೋರ್ಚುಗಲ್‌ನಿಂದ ಸ್ವಾತಂತ್ರ್ಯ ಪಡೆಯಿತು. ಈ ದೇಶದ ಒಟ್ಟು ಜನಸಂಖ್ಯೆ 1.8 ಕೋಟಿ.

**<u>ಯು.ಕೆ.ಗೆ ವಲಸೆ ಹೋಗುವ ವಿದೇಶಿಯರ ಸಂಖ್ಯೆಯಲ್ಲಿ ಭಾರತವನ್ನು ಹಿಂದಿಕ್ಕಿದ ಚೀನಾ</u>**

ಇತ್ತೀಚಿನ ಮಾಹಿತಿ ಪ್ರಕಾರ ಯು.ಕೆ ಗೆ ವಲಸೆ ಹೋಗುವ ವಿದೇಶಿಯರ ಸಂಖ್ಯೆಯಲ್ಲಿ ಚೀನಾ ಅಗ್ರಸ್ಥಾನವನ್ನು ಪಡೆದುಕೊಂಡಿದೆ. ಆಫೀಸ್ ಫಾರ್ ನ್ಯಾಷನಲ್ ಸ್ಟಾಟಿಸ್ಟಿಕ್ಸ್ ಅಂಕಿ ಅಂಶಗಳ ಪ್ರಕಾರ ಕಳೆದ ವರ್ಷ 40,000 ಕ್ಕೂ ಹೆಚ್ಚು ಚೀನಿಯರು ಯು.ಕೆ ಗೆ ವಲಸೆ ಹೋಗಿರುವುದಾಗಿ ತಿಳಿದುಬಂದಿದೆ.

- ಇದೇ ವರ್ಷದಲ್ಲಿ 37,000 ಭಾರತೀಯರು ಬ್ರಿಟನ್ ಗೆ ವಲಸೆ ಹೋಗಿದ್ದು, ಬ್ರಿಟನ್ ಗೆ ವಲಸೆ ಹೋಗುವ ವಿದೇಶಿಯರ ಪಟ್ಟಿಯಲ್ಲಿ ಭಾರತ ಎರಡನೇ ಸ್ಥಾನವನ್ನು ಪಡೆದುಕೊಂಡಿದೆ.
- 2009 ರಿಂದ ಸತತ ಮೂರು ವರ್ಷಗಳ ಕಾಲ ಭಾರತ ಪ್ರಥಮ ಸ್ಥಾನವನ್ನು ಕಾಯ್ದುಕೊಂಡು ಬಂದಿತ್ತು. 2011 ರಲ್ಲಿ 61,000 ಭಾರತೀಯರು ವಲಸೆ ಕೈಗೊಂಡಿದ್ದರೆ, 2012 ರಲ್ಲಿ 37,000ಕ್ಕೂ ಹೆಚ್ಚು ಭಾರತೀಯರು ಬ್ರಿಟನ್ ಗೆ ವಲಸೆ ಹೋಗಿದ್ದಾರೆ.
- ಚೀನಾದಿಂದ ಬ್ರಿಟನ್ ಗೆ ವಲಸೆ ಹೋಗುವವರ ಸಂಖ್ಯೆ ಹೆಚ್ಚಲು ಪ್ರಮುಖ ಕಾರಣವೆಂದರೆ ಬ್ರಿಟನ್ ಗೆ ಚೀನಾದ ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ತೆರಳುತ್ತಿರುವುದು.

**<u>ಭಾರತ ಮತ್ತು ಚೀನಾ ನಡುವ ಗಡಿ ಮಾತುಕತೆ : ಹೊಸ ಆಯಾಮ</u>**

ದಶಕಗಳಿಂದ ನೆರೆಯ ಚೀನಾದೊಂದಿಗೆ ಇರುವ ಗಡಿ ವಿವಾದವನ್ನು ಚೌಕಾಸಿ ಮಾತುಕತೆ ಮೂಲಕ ಬಗೆಹರಿಸಿಕೊಳ್ಳಲು ಮುಂದಾಗಿರುವ ಕೇಂದ್ರ ಸರ್ಕಾರ, ಜಮ್ಮು- ಕಾಶ್ಮೀರದ ಅಕ್ಸಾಯ್ ಚಿನ್ ಭಾಗವನ್ನು ಚೀನಾದ ವಶಕ್ಕೆ ಒಪ್ಪಿಸಿ, ಅರುಣಾಚಲಪ್ರದೇಶವನ್ನು ಭಾರತದಲ್ಲೇ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನ ಆರಂಭಿಸಿದೆ.

**ಯಾವುದರ ಬಗ್ಗೆ ಮಾತುಕತೆ?**

- ಅರುಣಾಚಲ ಪ್ರದೇಶದ ಭೂಭಾಗಕ್ಕೆ ಸಾರ್ವಭೌಮತ್ವ ನೀಡಬೇಕು ಎಂದು ಚೀನಾ ಬಹಿರಂಗವಾಗಿ ಒತ್ತಾಯಿಸುತ್ತಿದೆ. ಇದನ್ನು ಬಹಿರಂಗವಾಗಿಯೇ ಭಾರತ ತಿರಸ್ಕರಿಸುತ್ತಲೂ ಬಂದಿದೆ. ಆದರೆ ಉಭಯ ರಾಷ್ಟ್ರಗಳ ನಡುವಿನ ಮಾತುಕತೆ ವೇಳೆ ಇಂತಹದ್ದೊಂದು ಚೌಕಾಸಿ ನಡೆಯುತ್ತಿದೆ ಎಂದು ತಿಳಿಸಿದೆ.
- ಅರುಣಾಚಲಪ್ರದೇಶದ ೯೦ ಸಾವಿರ ಚದರ ಕಿ.ಮೀ. ಭಾಗ ತನಗೆ ಸೇರಬೇಕು ಎಂದು ಹೇಳುತ್ತಿರುವ ಚೀನಾ ಆ ಹಕ್ಕನ್ನು ಕೈಬಿಟ್ಟರೆ, ಜಮ್ಮು- ಕಾಶ್ಮೀರದಲ್ಲಿರುವ 38000 ಚದರ ಕಿ.ಮೀ. ಅಕ್ಸಾಯ್ ಚಿನ್ ಭಾಗವನ್ನು ಬಿಟ್ಟುಕೊಡುವುದಾಗಿ ಭಾರತ ಸಿದ್ಧವಿರುವ ಸುಳಿವು ನೀಡಿದೆ ಎನ್ನಲಾಗುತ್ತಿದೆ
- ಆದರೆ ಇಂತಹ ಪ್ರಸ್ತಾವನೆ ಕಾರ್ಯರೂಪಕ್ಕೆ ಬರಲು ಮುಂದೆ ಅಧಿಕಾರಕ್ಕೆ ಬರುವ ಹೊಸ ಸರ್ಕಾರಕ್ಕೆ ರಾಜಕೀಯ ಇಚ್ಛಾಶಕ್ತಿ ಇರಬೇಕಾಗುತ್ತದೆ. ಏಕೆಂದರೆ ಚೀನಾ ಅತಿಕ್ರಮಿಸಿಕೊಂಡಿರುವ ಎಲ್ಲ ಭೂಭಾಗವನ್ನು ಮರಳಿ ವಶಕ್ಕೆ ಪಡೆಯಬೇಕು ಎಂದು 1962ರಲ್ಲಿ ಭಾರತೀಯ ಸಂಸತ್ತು ಸರ್ವಾನುಮತದ ನಿರ್ಣಯ ಅಂಗೀಕರಿಸಿದೆ

**ಏನಿದು ಚೌಕಾಸಿ?**

ಅರುಣಾಚಲಪ್ರದೇಶದ ೯೦,೦೦೦ ಚದರ ಕಿ.ಮೀ. ಭೂಭಾಗ ತನಗೆ ಸೇರಬೇಕೆಂದು ಚೀನಾ ವಾದಿಸುತ್ತಿದೆ. ಇದನ್ನು ಚೀನಾ ಕೈಬಿಡಬೇಕು. ಅದಕ್ಕೆ ಪ್ರತಿಯಾಗಿ ತನಗೆ ಸೇರಿರುವ, ಚೀನಾ ಹಕ್ಕು ಮಂಡಿಸುತ್ತಿರುವ ವಿವಾದಿತ ಪ್ರದೇಶ ಜಮ್ಮು- ಕಾಶ್ಮೀರದ ಅಕ್ಸಾಯ್ ಚಿನ್ ಭಾಗ 38000 ಚದರ ಕಿ.ಮೀ.ಯನ್ನು ಚೀನಾಕ್ಕೆ ಬಿಟ್ಟುಕೊಡಲು ರೆಡಿ: ಕೇಂದ್ರ ಸರ್ಕಾರದ ಇಂಗಿತ

**<u>ಇರಾನ್‌ನಿಂದ ಭಾರತಕ್ಕೆ ಕಚ್ಚಾ ತೈಲ ಆಮದು ವಿನಾಯಿತಿ ಅವಧಿಯನ್ನು ವಿಸ್ತರಿಸಿದ ಅಮೆರಿಕ</u>**

ಭಾರತ, ಚೀನಾ ಮತ್ತು ಇತರ ಕೆಲ ರಾಷ್ಟ್ರಗಳಿಗೆ ಇರಾನ್‌ನಿಂದ ಕಚ್ಚಾ ತೈಲ ಆಮದು ಸಂಬಂಧ ವಿನಾಯಿತಿ ಅವಧಿಯನ್ನು ಮತ್ತೆ 6 ತಿಂಗಳು ವಿಸ್ತರಿಸಿ ಅಮೆರಿಕ ಸರ್ಕಾರ ನಿರ್ಧಾರ ಕೈಗೊಂಡಿದೆ. ಈ ರಾಷ್ಟ್ರಗಳು ಇರಾನ್‌ನಿಂದ ಖರೀದಿಸುತ್ತಿರುವ ಕಚ್ಚಾತೈಲದ ಪ್ರಮಾಣದಲ್ಲಿ ಭಾರೀ ಕಡಿತ ಮಾಡಿರುವ ಹಿನ್ನೆಲೆಯಲ್ಲಿ ಕಠಿಣ ಆರ್ಥಿಕ ನಿರ್ಬಂಧಗಳಿಂದ ವಿನಾಯಿತಿ ನೀಡಲು ನಿರ್ಧರಿಸಲಾಗಿದೆ.

**ಹಿನ್ನೆಲೆ:**

ಇರಾನ್‌ನ ಪರಮಾಣು ಯೋಜನೆ ವಿರೋಧಿಸಿ ಅಮೆರಿಕ ಆ ದೇಶದ ವಿರುದ್ಧ ಹಲವಾರು ಆರ್ಥಿಕ ನಿರ್ಬಂಧ ಹೇರಿದ್ದು, ಇರಾನ್ ನಿಂದ ಭಾರೀ ಪ್ರಮಾಣದಲ್ಲಿ ಕಚ್ಚಾತೈಲ ಆಮದು ಮಾಡಿಕೊಳ್ಳುತ್ತಿರುವ ದೇಶಗಳಿಗೆ ತೈಲ ಆಮದು ಪ್ರಮಾಣ ಕಡಿತ ಮಾಡುವಂತೆ ಈ ಹಿಂದೆಯೇ ಸೂಚನೆ ನೀಡಿತ್ತು. ಈ ಹಿನ್ನೆಲೆಯಲ್ಲಿ ಭಾರತ, ಚೀನಾ, ಕೊರಿಯಾ, ಟರ್ಕಿ ಮತ್ತು ಥೈವಾನ್‌ಗಳು ಇರಾನ್‌ನಿಂದ ಆಮದು ಮಾಡಿಕೊಳ್ಳಲಾಗುತ್ತಿರುವ ಕಚ್ಚಾತೈಲದ ಪ್ರಮಾಣದಲ್ಲಿ ಭಾರೀ ಕಡಿತ ಮಾಡಿದ್ದವು.

**ಅವಧಿ ಪೂರ್ಣ:**

ಇದನ್ನು ಪರಿಗಣಿಸಿ ಅಮೆರಿಕ ಈ ದೇಶಗಳಿಗೆ ನಿರ್ಬಂಧದಿಂದ ವಿನಾಯಿತಿಯನ್ನು ನೀಡಿತ್ತು. ವಿನಾಯಿತಿಯ ಅವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ 2012ನೇ ಆರ್ಥಿಕ ಸಾಲಿಗಾಗಿನ ರಾಷ್ಟ್ರೀಯ ರಕ್ಷಣಾ ಅಧಿಕಾರ ಕಾಯಿದೆಯಡಿಯಲ್ಲಿ ಇದೀಗ ಮತ್ತೆ ವಿನಾಯಿತಿಯ ಅವಧಿಯನ್ನು ಆರು ತಿಂಗಳ ಕಾಲ ವಿಸ್ತರಿಸಲಾಗಿದೆ ಎಂದು ಅಮೆರಿಕದ ವಿದೇಶಾಂಗ ಖಾತೆಯ ಸಚಿವ ಜಾನ್ ಕೆರಿ ತಿಳಿಸಿದರು.

# ವ್ಯವಹಾರ

## ಜಾನ್ಸನ್ ಅಂಡ್ ಜಾನ್ಸನ್ ಸಂಸ್ಥೆಗೆ ಸಂಸ್ಥೆಗೆ 2.2 ಬಿಲಿಯನ್ ಡಾಲರ್ ದಂಡ

ಅಂತಾರಾಷ್ಟ್ರೀಯ ನ್ಯಾಯಾಂಗ ಇಲಾಖೆಯು ಪ್ರಮುಖ ಮಕ್ಕಳ ವೈದ್ಯಕೀಯ ಪರಿಕರಗಳ ತಯಾರಿಕಾ ಸಂಸ್ಥೆಗೆ 2.2 ಬಿಲಿಯನ್ ಡಾಲರ್ ದಂಡ ವಿಧಿಸಿದೆ. ವೈದ್ಯಕೀಯ ಪರಿಕರಗಳ ತಯಾರಿಕಾ ಸಂಸ್ಥೆ 'ಜಾನ್ಸನ್ ಅಂಡ್ ಜಾನ್ಸನ್', ಮಕ್ಕಳ ಮನೋ ವೈದ್ಯಕೀಯ ಔಷಧಿಗಳನ್ನು ಯಾವುದೇ ಅನುಮತಿ ಪಡೆಯದೇ ಮಾರಾಟ ಮಾಡಿದ್ದಕ್ಕಾಗಿ ಬರೋಬ್ಬರಿ 2.2 ಬಿಲಿಯನ್ ಡಾಲರ್ ಹಣವನ್ನು ದಂಡವಾಗಿ ತೆರಬೇಕಿದೆ.

**ಹಿನ್ನೆಲೆ:**

ಮಕ್ಕಳಿಗಾಗಿಯೇ ಉಪಯೋಗಿಸುವ ಕೆಲ ಅವಶ್ಯಕ ವೈದ್ಯಕೀಯ ಪರಿಕರಗಳ ಪ್ರಮುಖ ತಯಾರಕರಾಗಿರುವ ಜಾನ್ಸನ್ ಅಂಡ್ ಜಾನ್ಸನ್ ಸಂಸ್ಥೆ, ಈ ಹಿಂದೆ ಅಂತಾರಾಷ್ಟ್ರೀಯ ವೈದ್ಯಕೀಯ ಸಂಸ್ಥೆಯ ಅನುಮತಿ ಪಡೆಯದೇ ಮಕ್ಕಳ ಮನೋ ವೈದ್ಯಕೀಯ ಔಷಧಿಗಳನ್ನು ಮಾರಾಟ ಮಾಡಿರುವುದು ಬೆಳಕಿಗೆ ಬಂದಿದ್ದು, ಸಂಸ್ಥೆಯ ವಿರುದ್ಧ ಸಾಮಾನ್ಯ ಮತ್ತು ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದವು. ಅಲ್ಲದೆ ತನ್ನ ಈ ಔಷಧಿಯನ್ನು ಪ್ರಚಾರ ಮಾಡಲು ಜಾನ್ಸನ್ ಅಂಡ್ ಜಾನ್ಸನ್ ಸಂಸ್ಥೆ, ವೈದ್ಯರು ಮತ್ತು ಔಷಧಾಲಯಗಳಿಗೆ ಕಿಕ್‌ಬ್ಯಾಕ್ ನೀಡಿದ ಆರೋಪವನ್ನು ಕೂಡ ಎದುರಿಸುತ್ತಿದೆ.

**2.2 ಮಿಲಿಯನ್ ಡಾಲರ್ ದಂಡ:**

ಅಂತಾರಾಷ್ಟ್ರೀಯ ನ್ಯಾಯಾಂಗ ಇಲಾಖೆ ಜಾನ್ಸನ್ ಅಂಡ್ ಜಾನ್ಸನ್ ಸಂಸ್ಥೆಗೆ ಬರೊಬ್ಬರಿ 2.2 ಬಿಲಿಯನ್ ಡಾಲರ್ ದಂಡ ವಿಧಿಸಿದ್ದು, ಅಮೆರಿಕಕ್ಕೆ ಸಂಬಂಧಪಟ್ಟಂತೆ ಖಾಸಗಿ ಸಂಸ್ಥೆಯೊಂದು ಕಾನೂನು ಮುರಿದು ಭಾರಿ ದಂಡ ತೆತ್ತಿರುವ ಮೂರನೇ ಅತಿದೊಡ್ಡ ದಂಡ ಪ್ರಕರಣವಾಗಿದೆ. ಪ್ರಸ್ತುತ ಜಾನ್ಸನ್ ಅಂಡ್ ಜಾನ್ಸನ್ ಸಂಸ್ಥೆ ಕಾನೂನು ಇಲಾಖೆ ವಿಧಿಸಿರುವ ದಂಡವನ್ನು ತೆರಲು ಒಪ್ಪಿಗೆ ಸೂಚಿಸಿದ್ದು, ಈ ಪೈಕಿ ನಾಗರೀಕ ವಲಯದ ಪ್ರಕರಣಗಳ ಇತ್ಯರ್ಥಕ್ಕಾಗಿ ಫೆಡರಲ್ ಮತ್ತು ರಾಜ್ಯಸರ್ಕಾರಗಳಿಗೆ ಒಟ್ಟು 1.72 ಬಿಲಿಯನ್ ಡಾಲರ್ ಹಣವನ್ನು ಮತ್ತು 485 ಬಿಲಿಯನ್ ಡಾಲರ್‌ಗಳನ್ನು ತನ್ನ ಅಪರಾಧಕ್ಕಾಗಿ ದಂಡವಾಗಿ ಪಾವತಿಸಬೇಕಿದೆ. ಮಿತಿ ಮೀರಿರುವ ಮಾರುಕಟ್ಟೆ ಸ್ಪರ್ಧೆಯಿಂದಾಗಿ ವೈದ್ಯಕೀಯ ಪರಿಕರಗಳ ತಯಾರಿಕಾ ಸಂಸ್ಥೆಗಳು ಎಫ್ ಡಿಎ(Food and Drug Administration) ಮಾನ್ಯತೆ ಪಡೆಯದೆಯೇ ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಮೂಲಕ ಜನರ ಆರೋಗ್ಯದ ಮೇಲೆ ಚೆಲ್ಲಾಟವಾಡುತ್ತಿವೆ. ಅಮೆರಿಕದ ಅಂತಾರಾಷ್ಟ್ರೀಯ ನ್ಯಾಯಾಂಗ ಇಲಾಖೆ ಸಂಸ್ಥೆಗೆ ಭಾರಿ ಮೊತ್ತದ ದಂಡ ವಿಧಿಸುವ ಮೂಲಕ ಇತರೆ ಸಂಸ್ಥೆಗಳಿಗೆ ಎಚ್ಚರಿಕೆ ನೀಡಿದೆ.

## ಇಂಡಿಯನ್ ರೇಲ್ವೆ ಕ್ಯಾಟರಿಂಗ್ ಆ್ಯಂಡ್ ಟೂರಿಸಂ ಕಾರ್ಪೊರೇಷನ್ ನಿಂದ 'ಇ ವ್ಯಾಲೆಟ್' ಸೇವೆ

ಇಂಡಿಯನ್ ರೇಲ್ವೆ ಕ್ಯಾಟರಿಂಗ್ ಆ್ಯಂಡ್ ಟೂರಿಸಂ ಕಾರ್ಪೊರೇಷನ್ ಇ ವ್ಯಾಲೆಟ್ ಎಂಬ ನೂತನ ಸೌಲಭ್ಯವನ್ನು ಆರಂಭಿಸಿದೆ. ಈ ಮೂಲಕ ರೈಲು ಪ್ರಯಾಣಿಕರಿಗೆ ಅಡ್ಡಿ ಆತಂಕ ರಹಿತವಾಗಿ ಟಿಕೆಟ್ ಬುಕ್ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿದೆ.

**'ಇ-ವ್ಯಾಲೆಟ್':**

ಇದೊಂದು ರೀತಿ ಠೇವಣಿ ಯೋಜನೆ ಇದ್ದ ಹಾಗೆ, ಅಂದರೆ ಮೊದಲೇ ಪ್ರಯಾಣಿಕರು ಐಆರ್‌ಸಿಟಿಸಿ ಅಕೌಂಟ್‌ನಲ್ಲಿ ಹಣವನ್ನು ತುಂಬಿ, ಇದನ್ನು ಬಳಸಿಕೊಂಡು ಟಿಕೆಟ್ ಬುಕ್ ಮಾಡಬಹುದಾಗಿದೆ ಎಂದು ವೆಬ್‌ಸೈಟ್‌ಗೆ ಸಂಬಂಧಿಸಿದ ಅಧಿಕಾರಿಗಳು ಹೇಳಿದ್ದಾರೆ.

**ಬುಕಿಂಗ್ ಹೇಗೆ?**

- ಸದ್ಯ ಐಆರ್‌ಸಿಟಿಸಿಯಲ್ಲಿ ಪ್ರಯಾಣಿಕರು ನೆಟ್‌ಬ್ಯಾಂಕಿಂಗ್, ಡೆಬಿಟ್ ಕಾರ್ಡ್ ಅಥವಾ ಕ್ರೆಡಿಟ್ ಕಾರ್ಡ್ ಬಳಸಿ ಟಿಕೆಟ್ ಬುಕ್ ಮಾಡಬಹುದಾಗಿದೆ.
- ಇನ್ನು ಮುಂದೆ ಐಆರ್‌ಸಿಟಿಸಿ ಅಕೌಂಟ್‌ಗೆ ಮೊದಲೇ ಹಣ ತುಂಬಿ, ಈ ಮೂಲಕವೇ ಟಿಕೆಟ್ ಬುಕ್ ಮಾಡಿಸಿಕೊಳ್ಳಬೇಕು.
- ಎಷ್ಟೋ ಮಂದಿ ಪ್ರಯಾಣಿಕರು, ಟಿಕೆಟ್ ಬುಕ್ ಆಗದಿದ್ದರೂ ಬ್ಯಾಂಕ್‌ನಿಂದ ಹಣ ಕಟ್ ಆಗಿದೆ. ಅದು ವಾಪಸ್ ಬಂದಿಲ್ಲ ಎಂಬ ಆರೋಪ ಹೊರಿಸುತ್ತಿದ್ದರು. ಈ ಸಮಸ್ಯೆ ಹೋಗಲಾಡಿಸುವ ದೃಷ್ಟಿಯಿಂದ ಈ ಯೋಜನೆ ಆರಂಭಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.
- ಈ ಯೋಜನೆ ಆರಂಭವಾದ ಇಲ್ಲಿವರೆಗೆ 4000 ಮಂದಿ ನೋಂದಣಿ ಮಾಡಿಸಿಕೊಂಡಿದ್ದಾರೆ. ಇದಕ್ಕೆ ಪಾನ್ ಕಾರ್ಡ್ ಇರಲೇಬೇಕು. ಹಾಗೂ ಟಿಕೆಟ್ ಕ್ಯಾನ್ಸಲ್ ಮಾಡಿದ ಮರುದಿನವೇ ಅಕೌಂಟ್‌ಗೆ ಹಣ ಬಂದಿರುತ್ತದೆ.

**ಆರ್.ಬಿ.ಐ.ನಿಂದ 'ಬೇಸಿಕ್ ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್ ಅಕೌಂಟ್' ಎಂಬ ಹೊಸ ಯೋಜನೆ**

ದೇಶದಲ್ಲಿ ಪ್ರತಿ ಕುಟುಂಬವೂ ಬ್ಯಾಂಕ್ ಖಾತೆ ಹೊಂದಿರಬೇಕೆಂಬ ಧ್ಯೇಯದೊಂದಿಗೆ ಕೇಂದ್ರ ಸರ್ಕಾರ 'ವಿತ್ತೀಯ ಸೇರ್ಪಡೆ' ಎನ್ನುವ ಘೋಷಣೆ ಮಾಡಿದೆ. ಅದರ ಪ್ರಕಾರ 2005 ರ ನವೆಂಬರ್‌ನಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್, ಬ್ಯಾಂಕ್‌ಗಳಲ್ಲಿ 'ಝೀರೋ ಬ್ಯಾಲೆನ್ಸ್' ಅಥವಾ ಸಣ್ಣಮೊತ್ತದ ಠೇವಣಿಯೊಂದಿಗೆ ಖಾತೆ ಆರಂಭಿಸಲು ಸೂಚನೆ ನೀಡಿತ್ತು. ಈಗ ಅದರಲ್ಲೂ ಗೊಂದಲಗಳನ್ನು ನಿವಾರಿಸಲು ಆರ್‌ಬಿಐ ಮುಂದಾಗಿದೆ.ಈ ಹಿನ್ನೆಲೆಯಲ್ಲಿ ರಾಷ್ಟ್ರಾದ್ಯಂತ ಏಕರೂಪದ ಖಾತೆ ಆರಂಭಿಸಲು ಅನುವಾಗುವಂತೆ 2012ರ ಏಪ್ರಿಲ್‌ನಲ್ಲಿ 'ಬೇಸಿಕ್ ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್ ಅಕೌಂಟ್' ಎಂಬ ಹೊಸ ಯೋಜನೆಯನ್ನು ಜಾರಿಗೆ ತಂದಿದೆ. ಮಾತ್ರವಲ್ಲದೆ ಈಗ ಜಾರಿಯಲ್ಲಿರುವ ಸರಳ ಉಳಿತಾಯ ಯೋಜ ನೆಯೂ (ನೋ ಫ್ರಿಲ್ ಎಸ್‌ಬಿ ಖಾತೆ) ಹೊಸ ಯೋಜನೆಯ ಖಾತೆಯಾಗಿ ಬದಲಾವಣೆಯಾಗಲಿದೆ.

**ಲಾಭವೇನು?**

- ಈ ಖಾತೆಯನ್ನು ಹೊಂದಿದವರಿಗೆ ಉಳಿದ ಖಾತೆದಾರರಿಗೆ ಇರುವ ಸಾಮಾನ್ಯ ಬ್ಯಾಂಕಿಂಗ್ ಸೇವೆ ಲಭ್ಯ.
- ಈ ಖಾತೆಯಲ್ಲಿ ಇಂತಿಷ್ಟೇ ಶಿಲ್ಕು ಇರಬೇಕೆಂಬ ನಿಬಂಧನೆಯಿಲ್ಲ. ಖಾತೆ ಆರಂಭಿಸುವಾಗ ಹಣ ಜಮೆ ಮಾಡಬೇಕಾಗಿಲ್ಲ.

- ಉಳಿದ ಖಾತೆಗಳಿಗೆ ಇರುವಂತೆ ಇದಕ್ಕೂ ಸಹ ಹಣ ಜಮೆ ಮಾಡಬಹುದು ಹಾಗೂ ಹಿಂಪಡೆಯಬಹುದು.
- ಎಟಿಎಂ ಸೌಲಭ್ಯವನ್ನೂ ಹೊಂದಬಹುದು. ಚೆಕ್ ಕಲೆಕ್ಷನ್ ಮಾಡಿಸಿಕೊಳ್ಳಬಹುದು.
- ಈ ಖಾತೆಗೆ ತಿಂಗಳೊಂದಕ್ಕೆ ಎಷ್ಟು ಬಾರಿಯಾದರೂ ಹಣ ಜಮಾ ಮಾಡಬಹುದು. ಆದರೆ ತಿಂಗಳೊಂದಕ್ಕೆ ನಾಲ್ಕು ಬಾರಿ ಮಾತ್ರ ಈ ಖಾತೆಯಿಂದ ಹಣ ಹಿಂಪಡೆಯಬಹುದು.
- ಎಟಿಎಂ ಸೌಲಭ್ಯ ಹೊಂದಿರುವವರು ಮಾತ್ರ ಅದರಲ್ಲಿ ಹಣ ಹಿಂಪಡೆದರೂ ಎಲ್ಲವೂ ಸೇರಿ ನಾಲ್ಕು ಬಾರಿ ಮಾತ್ರ ಅವಕಾಶ.
- ಈ ಖಾತೆಯನ್ನು ಹೊಂದಿದವರು ಇದರ ಹೊರತಾಗಿ ಬ್ಯಾಂಕ್‌ನಲ್ಲಿ ಬೇರೊಂದು ಉಳಿತಾಯ ಖಾತೆ ಹೊಂದುವಂತಿಲ್ಲ. ಒಂದೊಮ್ಮೆ ಆ ರೀತಿ ಖಾತೆಯಿದ್ದರೆ 30 ದಿನಗಳ ಒಳಗೆ ಅದನ್ನು ರದ್ದುಪಡಿಸಿಕೊಳ್ಳಬೇಕು.
- ಈ ಉಳಿತಾಯ ಖಾತೆ ಹೊಂದಿರುವವರು ಇದರ ಹೊರತಾಗಿ ಫಿಕ್ಸೆಡ್ ಡೆಪಾಸಿಟ್, ಆರ್.ಡಿ.ಖಾತೆ ಮತ್ತು ಇತರ ಖಾತೆಗಳನ್ನು ತೆರೆಯಲು ಅವಕಾಶವಿದೆ.

**ಪ್ರಶ್ನೋತ್ತರಗಳು:**

- ಈಗಿರುವ ಜೀರೋ ಬ್ಯಾಲೆನ್ಸ್, ನೋ ಫ್ರಿಲ್ ಖಾತೆಗಳನ್ನು ಬೇಸಿಕ್ ಸೇವಿಂಗ್ಸ್ ಬ್ಯಾಂಕ್ ಡೆಪಾಸಿಟ್ ಅಕೌಂಟ್‌ಗಳಾಗಿ ಬ್ಯಾಂಕ್‌ಗಳು ಪರಿವರ್ತಿಸುತ್ತವೆ.
- ಒಬ್ಬ ವ್ಯಕ್ತಿ ಒಂದು ಬ್ಯಾಂಕ್‌ನಲ್ಲಿ ಒಂದಕ್ಕಿಂತ ಹೆಚ್ಚು ಬೇಸಿಕ್ ಸೇವಿಂಗ್ಸ್ ಬ್ಯಾಂಕ್ ಡೆಪಾಸಿಟ್ ಖಾತೆ ತೆರೆಯುವಂತಿಲ್ಲ.
- ಬೇಸಿಕ್ ಸೇವಿಂಗ್ಸ್ ಬ್ಯಾಂಕ್ ಡೆಪಾಸಿಟ್ ಅಕೌಂಟ್‌ಗಳನ್ನು ಆರ್ಥಿಕವಾಗಿ ಹಿಂದುಳಿದವರು, ದುರ್ಬಲರು ಮಾತ್ರ ತೆರೆಯಬಹುದು ಎಂಬ ಯಾವ ನಿಬಂಧನೆಯೂ ಇಲ್ಲ. ಹೀಗಾಗಿ ಯಾರು ಬೇಕಾದರೂ ಖಾತೆ ತೆರೆಯಬಹುದಾಗಿದೆ. ಉಳಿದ ಖಾತೆಗಳನ್ನು ತೆರೆಯುವಾಗ 'ನೋ ಯುವರ್ ಕಸ್ಟಮರ್' (ಕೆವೈಸಿ) ದಾಖಲೆಗಳನ್ನು ಕಡ್ಡಾಯವಾಗಿ ನೀಡಬೇಕಾಗುತ್ತದೆ.
- ಆದರೆ ಆ ರೀತಿ ದಾಖಲೆಗಳನ್ನು ನೀಡಲು ಅಸಮರ್ಥರಾದವರೂ ಸಹ, ಇದರಲ್ಲಿ ಸಣ್ಣ ಖಾತೆ ಆರಂಭಿಸಲು ಅವಕಾಶ ಉಂಟು. ಅದಕ್ಕೆ ನರೇಗ ಯೋಜನೆಗೆ ನೀಡುವ ಜಾಬ್ ಕಾರ್ಡ್ ಅಥವಾ ಆಧಾರ ಕಾರ್ಡ್ ನೀಡಿದರೆ ಸಾಕು.

**ನಿಬಂಧನೆಗಳು:**

- ಹಣಕಾಸು ವರ್ಷವೊಂದರಲ್ಲಿ ಖಾತೆಯಲ್ಲಿ 1 ಲಕ್ಷಕ್ಕಿಂತ ಹೆಚ್ಚು ಮೊತ್ತ ಜಮಾ ಮಾಡುವಂತಿಲ್ಲ.
- ಒಂದು ತಿಂಗಳಿಗೆ ಎಲ್ಲ ಬಗೆಯಿಂದ ಒಟ್ಟು 10 ಸಾವಿರಕ್ಕಿಂತ ಹೆಚ್ಚು ಹಣ ಹಿಂಪಡೆಯುವಂತಿಲ್ಲ.
- ಯಾವುದೇ ಸಮಯದಲ್ಲಿ ಈ ಖಾತೆಯಲ್ಲಿ ರು. 50 ಸಾವಿರಕ್ಕಿಂತ ಹೆಚ್ಚು ಹಣ ಇರಿಸುವಂತಿಲ್ಲ.
- ವಿದೇಶಗಳಿಂದ ಬಂದ ಹಣವನ್ನು ಈ ಖಾತೆಗೆ ನೇರವಾಗಿ ಜಮಾ ಮಾಡುವಂತಿಲ್ಲ.
- ಎಟಿಎಂ ಕಾರ್ಡ್‌ಗೆ ಬ್ಯಾಂಕ್ ವಾರ್ಷಿಕ ಶುಲ್ಕವನ್ನೂ ಸೇರಿ ಯಾವುದೇ ಶುಲ್ಕ ಪಡೆಯುವಂತಿಲ್ಲ.

- ಎಟಿಎಂ ಕಾರ್ಡ್ ಮೂಲಕ ಬ್ಯಾಲೆನ್ಸ್ ವಿವರಣೆ ಪಡೆಯಬಹುದು. ಅದು ನಾಲ್ಕು ಬಾರಿ ಹಣ ಹಿಂಪಡೆಯುವ ಅವಕಾಶದ ಪರಿಗಣನೆಗೆ ಸೇರುವುದಿಲ್ಲ.
- ಈ ಖಾತೆಗಳಿಗೆ ಚೆಕ್ ಪುಸ್ತಕದ ಸೌಲಭ್ಯವಿಲ್ಲ. ಬ್ಯಾಂಕ್ ಉಚಿತವಾಗಿ ಚೆಕ್ ಪುಸ್ತಕವನ್ನು ಈ ಖಾತೆಗಳಿಗೆ ನೀಡಬಹುದು. ಅದು ಕಡ್ಡಾಯವಲ್ಲ. ಅದಕ್ಕಾಗಿ ಶುಲ್ಕ ಪಡೆದರೆ ಆಗ ಆ ಬೇಸಿಕ್ ಸೇವಿಂಗ್ಸ್ ಬ್ಯಾಂಕ್ ಡೆಪಾಸಿಟ್ ಅಕೌಂಟ್ ಯೋಜನೆಯಿಂದ ಹೊರಬರುತ್ತದೆ.
- ಉಳಿದ ಉಳಿತಾಯ ಯೋಜನೆಗಳಿಗಿರುವಂತೆ ಇದಕ್ಕೂ ಅದೇ ದರದಲ್ಲಿ ಬಡ್ಡಿ ನೀಡಲಾಗುತ್ತದೆ.

## ಗೂಗಲ್ ಕಂಪನಿಯಿಂದ “ಗೂಗಲ್ ವ್ಯಾಲೆಟ್” ಎಂಬ ಪ್ರೀಪೇಡ್ ಡೆಬಿಟ್ ಕಾರ್ಡ್ ಬಿಡುಗಡೆ

ಅಂತರ್ಜಾಲ ಹುಡುಕಾಟ ಉದ್ಯಮದಲ್ಲಿ ಜಗತ್ತಿನ ನಂ.1 ಕಂಪನಿ ಗೂಗಲ್, ಇದೀಗ ತನ್ನದೇ ಆದ ಪ್ರೀಪೇಡ್ ಡೆಬಿಟ್ ಕಾರ್ಡ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಸದ್ಯ ಅಮೆರಿಕದಲ್ಲಿ ಮಾತ್ರ ಲಭ್ಯವಿರುವ ಈ ಕಾರ್ಡ್, ಇತರೆ ಯಾವುದೇ ಡೆಬಿಟ್ ಕಾರ್ಡ್‌ಗಳಂತೆ ಎಟಿಎಂನಲ್ಲಿ ಹಣ ತೆಗೆಯಲು, ಮಾರುಕಟ್ಟೆಯಲ್ಲಿ ವಸ್ತುಗಳನ್ನು ಖರೀದಿಸಲು, ಆನ್‌ಲೈನ್ ಖರೀದಿಗೆ ಬಳಸಬಹುದಾಗಿದೆ. ಆದರೆ ಬ್ಯಾಂಕ್‌ನ ಖಾತೆಯಲ್ಲಿದ್ದ ಹಣವನ್ನು ನೇರವಾಗಿ ಬಳಸುವುದು ಈ ಕಾರ್ಡ್‌ನಿಂದ ಸಾಧ್ಯವಿಲ್ಲ. ಅದರ ಬದಲಾಗಿ ಗೂಗಲ್ ವ್ಯಾಲೆಟ್ ಅಕೌಂಟ್‌ನಲ್ಲಿರುವ ಹಣವನ್ನು ಮಾತ್ರ ಈ ಕಾರ್ಡ್ ಮೂಲಕ ಬಳಸಬಹುದಾಗಿದೆ.

**ಗೂಗಲ್ ವ್ಯಾಲೆಟ್:**

ಗೂಗಲ್ ವ್ಯಾಲೆಟ್ ಎಂಬುದು, ಸ್ಮಾರ್ಟ್‌ಫೋನ್‌ಗಳಲ್ಲಿ ಲಭ್ಯವಿರುವ ಒಂದು ಅಪ್ಲಿಕೇಷನ್ ಆಗಿದ್ದು, ಇದನ್ನು ಬಳಸಿ ಗ್ರಾಹಕರು ಆನ್‌ಲೈನ್‌ನಲ್ಲೇ ಹಣ ವರ್ಗಾವಣೆ, ಆನ್‌ಲೈನ್‌ನಲ್ಲಿ ವಸ್ತುಗಳ ಖರೀದಿ ಮತ್ತು ಒಬ್ಬರಿಂದ ಇನ್ನೊಬ್ಬರಿಗೆ ಹಣ ವರ್ಗಾವಣೆ ಮಾಡಬಹುದಾಗಿದೆ.

**ಲಾಭ ಏನು?**

ಒಂದು ವೇಳೆ ಬ್ಯಾಂಕ್‌ನ ಡೆಬಿಟ್ ಕಾರ್ಡ್ ಕಳವಾದರೆ, ಅದರಲ್ಲಿನ ಅಷ್ಟೂ ಹಣವನ್ನು ದೋಚುವ ಸಾಧ್ಯತೆ ಇರುತ್ತದೆ. ಆದರೆ ಗೂಗಲ್ ವ್ಯಾಲೆಟ್ ಹೊಂದಿರುವ ಗ್ರಾಹಕರು, ತಮ್ಮ ಬ್ಯಾಂಕ್ ಖಾತೆಯಿಂದ ಎಷ್ಟು ಹಣ ಬೇಕೋ ಅಷ್ಟನ್ನು ಮಾತ್ರ ಗೂಗಲ್ ವ್ಯಾಲೆಟ್‌ಗೆ ವರ್ಗಾಯಿಸಿಕೊಳ್ಳಬಹುದು. ಆ ಬಳಿಕ ಗೂಗಲ್ ಡೆಬಿಟ್ ಅನ್ನು ಎಲ್ಲಿಗೆ ಬೇಕಾದರೂ ಕೊಂಡೊಯ್ದು ಅಷ್ಟು ಹಣವನ್ನು ಮಾತ್ರ ವೆಚ್ಚ ಮಾಡಬಹುದು. ಇದರಿಂದ ಹಣದ ದುರುಪಯೋಗ ಕಡಿಮೆ ಎನ್ನುವುದು ಗೂಗಲ್ ಕಂಪನಿಯ ವಾದ.

**ಗೂಗಲ್‌ಗೆ ಏನು ಲಾಭ?**

ಗ್ರಾಹಕರು ಗೂಗಲ್ ಡೆಬಿಟ್ ಕಾರ್ಡ್ ಬಳಸಿ ಏನೆಲ್ಲಾ ವಸ್ತುಗಳನ್ನು ಖರೀದಿಸಿದ್ದಾರೆ, ಎಷ್ಟು ಹಣ ವೆಚ್ಚ ಮಾಡಿದ್ದಾರೆ ಎಂಬ ದತ್ತಾಂಶವನ್ನು ಗೂಗಲ್ ಸಂಗ್ರಹಿಸಿ, ಅದನ್ನು ಜಾಹೀರಾತುದಾರರಿಗೆ ನೀಡುವ ಮೂಲಕ ಹಣ ಸಂಪಾದಿಸುತ್ತದೆ.

**ಬಂಡವಾಳ ಹೂಡಿಕೆ ಆಕರ್ಷಣೆಯಲ್ಲಿ ಚೀನಾ ಮತ್ತು ಅಮೆರಿಕಾವನ್ನು ಸರಿಗಟ್ಟಿದ ಭಾರತ: ಸಮೀಕ್ಷೆ**

ಬಂಡವಾಳ ಹೂಡಿಕೆಯನ್ನು ಉತ್ತೇಜಿಸುವ ಹಿನ್ನೆಲೆಯಿಂದಾಗಿ ವಿದೇಶಿ ನೇರ ಬಂಡವಾಳ (FDI) ನಿಯಮಗಳನ್ನು ಸಡಿಲಗೊಳಿಸಿಗೊಳಿಸಿದ ಕಾರಣ ಬಂಡವಾಳ ಹೂಡಿಕೆ ಆಕರ್ಷಣೆಯಲ್ಲಿ ಭಾರತವೂ ಚೀನಾ ಮತ್ತು ಅಮೆರಿಕಾವನ್ನು ಹಿಂದಿಕ್ಕಿದೆ ಎಂದು ಸಮೀಕ್ಷೆಯಿಂದ ತಿಳಿದು ಬಂದಿದೆ.

- ಜಾಗತಿಕ ಸಮೀಕ್ಷ ಸಂಸ್ಥೆ "ಆರ್ನೆಸ್ಟ್ ಅಂಡ್ ಯಂಗ್ (Earnst and Young)' ನಡೆಸಿರುವ ಸಮೀಕ್ಷೆಯಲ್ಲಿ ಬಂಡವಾಳ ಆಕರ್ಷಣೆಯಲ್ಲಿ ಚೀನಾ ಮತ್ತು ಅಮೆರಿಕಾವನ್ನು ಹಿಂದಿಕ್ಕಿ ಭಾರತ ಅಗ್ರಸ್ಥಾನವನ್ನು ಪಡೆದುಕೊಂಡಿದೆ.
- ಭಾರತದ ನಂತರದ ಸ್ಥಾನದಲ್ಲಿ ಚೀನಾ ಮತ್ತು ಬ್ರೆಜಿಲ್ ದೇಶಗಳು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನವನ್ನು ಪಡೆದುಕೊಂಡಿವೆ.
- ಪಟ್ಟಿಯಲ್ಲಿರುವ ಇತರೆ ಟಾಪ್ ಟೆನ್ ರಾಷ್ಟ್ರಗಳೆಂದರೆ ಕೆನಡಾ (4), ಅಮೆರಿಕಾ (5), ದಕ್ಷಿಣ ಆಫ್ರಿಕಾ (6), ವಿಯೆಟ್ನಾಂ (7), ಮಯನ್ಮಾರ್ (8), ಮೆಕ್ಸಿಕೊ (9) ಮತ್ತು ಇಂಡೊನೇಷಿಯಾ.
- ವಿವಿಧ ಕ್ಷೇತ್ರಗಳಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ಉತ್ತೇಜಿಸುವ ಸಲುವಾಗಿ ಭಾರತ ಅನೇಕ ಕ್ರಮಗಳನ್ನು ಕೈಗೊಂಡಿರುವ ಹಿನ್ನೆಲೆಯಲ್ಲಿ ಭಾರತ ಈ ಮಟ್ಟವನ್ನು ತಲುಪಲು ಸಾಧ್ಯವಾಗಿದೆ.

**ಆನ್‌ಲೈನ್ ಖರೀದಿ ಹಾಗೂ ಪಾವತಿಯಲ್ಲಿ ಜನಪ್ರಿಯಗೊಳ್ಳುತ್ತಿರುವ 'ಇ- ವ್ಯಾಲೆಟ್'**

ಆನ್‌ಲೈನ್ ಖರೀದಿ ಹಾಗೂ ಪಾವತಿಗಾಗಿ ಈಗ ಇ- ವ್ಯಾಲೆಟ್ ಹೆಚ್ಚು ಜನಪ್ರಿಯತೆ ಪಡೆಯುತ್ತಿದೆ. ಈ ಇ- ವ್ಯಾಲೇಟ್ ಅಂದ್ರೆ ಏನು, ಅದರ ಉಪಯೋಗ ಏನು ಎನ್ನುವ ಕುರಿತು ಇಲ್ಲಿದೆ ಒಂದಷ್ಟು ಮಾಹಿತಿ.

**ಇ- ವ್ಯಾಲೆಟ್?**

ಇದೊಂದು ಆನ್‌ಲೈನ್ ಪ್ರೀಪೇಡ್ ಅಕೌಂಟ್. ಈ ಅಕೌಂಟ್‌ನಲ್ಲಿ ಯಾರು ಬೇಕಾದರೂ ಹಣ ಹಾಕಿಡಬಹುದು. ಅಗತ್ಯ ಬಿದ್ದಾಗ ಬಳಸಬಹುದು. ಈ ವ್ಯಾಲೆಟ್ ಬಳಸಿಕೊಂಡು ಗ್ರಾಹಕರು ಆನ್‌ಲೈನ್ ಮೂಲಕ ಏರ್‌ಟಿಕೆಟ್‌ನಿಂದ ಹಿಡಿದು ಯಾವುದೇ ವಸ್ತುಗಳನ್ನು ಕ್ರೆಡಿಟ್ ಕಾರ್ಡ್ ಅಥವಾ ಡೆಬಿಟ್ ಕಾರ್ಡ್ ಸ್ವೈಪ್ ಮಾಡದೆ ಕೊಳ್ಳಬಹುದು.

**ಪಡೆಯುವುದು ಹೇಗೆ?**

ಟೆಲಿಕಾಂ ಸೇವೆಗಳು, ಆನ್‌ಲೈನ್ ದಿನವಹಿ ವಸ್ತುಗಳ ಸ್ಟೋರ್, ರೀಚಾರ್ಜ್ ಪೋರ್ಟಲ್‌ಗಳು ಮಾತ್ರವಲ್ಲದೆ ಫರ್ನಿಚರ್‌ಗಳನ್ನು ಮಾರಾಟ ಮಾಡುವ ಆದರೆ ಇ- ವ್ಯಾಲೆಟ್ ಅನ್ನು ಪರ್ಯಾಯ ಪಾವತಿ ಆಯ್ಕೆಯಾಗಿ ಬಳಸುವ ಸೈಟ್‌ಗಳಿಗೆ ಲಾಗ್ ಆನ್ ಆಗುವ ಮೂಲಕ ಈ ಸೇವೆಯ ಸದುಪಯೋಗ ಪಡೆದುಕೊಳ್ಳಬಹುದು.

**ಎಲ್ಲಿ ಬಳಸಬಹುದು?**

ಆನ್‌ಲೈನ್ ದಿನಸಿ ಸ್ಟೋರ್‌ಗಳಲ್ಲಿ, ರೇಲ್ವೆ ಪೋರ್ಟಲ್‌ನಲ್ಲಿ. ಬೆಂಗಳೂರಿನ ಬಿಗ್ ಬಾಸ್ಕೆಟ್. ಕಾಂ (ಒಂದು ಆನ್‌ಲೈನ್ ಆಹಾರ ಮತ್ತು ದಿನಸಿ ಸ್ಟೋರ್ ಆಗಿದೆ). ಇದು ಇ- ವ್ಯಾಲೆಟ್ ಸೌಲಭ್ಯವನ್ನು ಕಲ್ಪಿಸುತ್ತದೆ. ಈ ವೆಬ್‌ಸೈಟ್ ಇ- ವ್ಯಾಲೆಟ್‌ಗೆ 10 ರಿಂದ 10 ಸಾವಿರದ ವರೆಗೆ ಹಣ ಹಾಕಬಹುದು. ರೇಲ್ವೆ, ಐಆರ್‌ಟಿಸಿ ಕೂಡ ಇ-ವ್ಯಾಲೆಟ್ ಸೌಲಭ್ಯವನ್ನು ಆರಂಭಿಸಿದೆ. ಇದರ ಮೂಲಕ ನೀವು ರೇಲ್ವೆ ಟಿಕೆಟ್‌ಗಳನ್ನು ಬುಕ್ ಮಾಡಬಹುದಾಗಿದೆ.

**ಉಪಯೋಗ ಏನು?**

- ಪ್ರತಿ ಬಾರಿ ಆನ್‌ಲೈನ್‌ನಲ್ಲಿ ವ್ಯವಹರಿಸುವಾಗ ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್ ವಿವರಗಳನ್ನು ಟೈಪ್ ಮಾಡಬೇಕಿಲ್ಲ.
- ಕೆಲವು ಸೈಟ್‌ಗಳಲ್ಲಿ ಹಣ ಹಾಕಲು ಕನಿಷ್ಠ ಮಿತಿ ಏನೂ ಇಲ್ಲ. ನೀವು ಕನಿಷ್ಠ 10ನಷ್ಟು ಹಣವನ್ನೂ ಡಿಪಾಸಿಟ್ ಮಾಡಬಹುದು.
- ನಿಮ್ಮ ಇ- ವ್ಯಾಲೆಟ್‌ನ ಅನುಕೂಲವನ್ನು ಗೆಳೆಯರು ಮತ್ತು ಕುಟುಂಬ ಸದಸ್ಯರಿಗೂ ವರ್ಗಾವಣೆ ಮಾಡಬಹುದು.

**ತೊಂದರೆಗಳೇನು?**

ಪಾಸ್‌ವರ್ಡ್ ಬಹಿರಂಗವಾದರೆ ಕಳ್ಳತನಕ್ಕೆ ಅವಕಾಶವಾಗಬಹುದು. ಮರುಪಾವತಿ ಸೌಲಭ್ಯ ಇಲ್ಲ. ನೀವು ಇ- ವ್ಯಾಲೆಟ್‌ಗೆ ಹಾಕಿದ ಹಣದಿಂದ ಏನಾದರೂ ವಸ್ತುವನ್ನು ಕೊಳ್ಳಲೇಬೇಕು.

**ಬಳಸುವುದು ಹೇಗೆ?**

- ಇ- ವ್ಯಾಲೆಟ್ ಸೇವೆಗಾಗಿ, ನಿಮ್ಮ ಇ-ಮೇಲ್ ಐಡಿಯಿಂದ ಲಾಗಿನ್ ಆಗಿ. ಇ- ವ್ಯಾಲೆಟ್ ಆಯ್ಕೆ ಮಾಡಿಕೊಳ್ಳಿ.
- ನಿಮಗೋಸ್ಕರ ಪ್ರತ್ಯೇಕ ಇ- ವ್ಯಾಲೆಟ್ ನಿರ್ಮಿಸಿಕೊಳ್ಳಿ.
- ಸೈಟ್‌ನಿಂದ ಯಾವುದಾದರೂ ವಸ್ತುಕೊಳ್ಳಬೇಕೆಂದಿದ್ದರೆ ಅಷ್ಟು ಪ್ರಮಾಣದ ಹಣ ಇ- ವ್ಯಾಲೆಟ್‌ನಲ್ಲಿರುವಂತೆ ನೋಡಿಕೊಳ್ಳಿ.
- ಇ-ಖಾತೆ, ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್‌ನಿಂದ ಇ-ವ್ಯಾಲೆಟ್‌ಗೆ ಹಣ ವರ್ಗಾಯಿಸಿ.
- ಒಂದು ವೇಳೆ ನೀವು ಕೊಳ್ಳಬೇಕೆಂದಿರುವ ವಸ್ತುವಿನ ಬೆಲೆ ಇ- ವ್ಯಾಲೆಟ್‌ನಲ್ಲಿರುವ ಹಣಕ್ಕಿಂತ ಹೆಚ್ಚಿದ್ದರೆ ಉಳಿದ ಹಣವನ್ನು ಸಾಂಪ್ರದಾಯಿಕ ವಿಧಾನದ ಮೂಲಕ ಪಾವತಿಸಬಹುದಾಗಿದೆ.

**2020 ರ "ವಿಶ್ವ ಎಕ್ಸ್ಪೋ ವ್ಯಾಪಾರ ಸಮ್ಮೇಳನ (World Expo Trade Convention)" ದ ಅತಿಥ್ಯವಹಿಸಲಿರುವ ದುಬೈ**

2020 ರಲ್ಲಿ ನಡೆಯಲಿರುವ ವಿಶ್ವ ಎಕ್ಸ್ಪೋ ವ್ಯಾಪಾರ ಸಮ್ಮೇಳನದ ಅತಿಥ್ಯವನ್ನು ದುಬೈಗೆ ದಕ್ಕಿದೆ. ರಷ್ಯಾ, ಬ್ರೆಜಿಲ್ ಮತ್ತು ಟರ್ಕಿ ಅಂತಹ ಬಲಾಢ್ಯ ದೇಶಗಳ ಪೈಪೋಟಿಯನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿ ದುಬೈ ಅತಿಥ್ಯವನ್ನು ತನ್ನದಾಗಿಸಿಕೊಂಡಿದೆ.

- ದುಬೈ ಈ ಸಮ್ಮೇಳನದ ಅತಿಥ್ಯವಹಿಸುವ ಮೂಲಕ ಇದೇ ಮೊದಲ ಬಾರಿಗೆ ಮಧ್ಯಪ್ರಾಚ್ಯ ದೇಶಗಳ ನಗರವೊಂದರಲ್ಲಿ ವಿಶ್ವ ಎಕ್ಸ್ಪೋ ವ್ಯಾಪಾರ ಸಮ್ಮೇಳವನ್ನು ನಡೆಸುವ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ
- ಸಮ್ಮೇಳನದಲ್ಲಿ ವಿಶ್ವದ ನೂರಾರು ರಾಷ್ಟ್ರಗಳು ಭಾಗವಹಿಸಲಿದ್ದು, ತಂತ್ರಜ್ಞಾನ ಮತ್ತು ವಾಸ್ತುಕಲೆಗಳ ಬಗ್ಗೆ ಪ್ರದರ್ಶನಗೊಳ್ಳಲಿವೆ.
- ವಿಶ್ವ ಎಕ್ಸ್ಪೋ ವ್ಯಾಪಾರ ಸಮ್ಮೇಳನ ಪ್ರತಿ ಐದು ವರ್ಷಗಳಿಗೊಮ್ಮೆ ನಡೆಯಲಿದ್ದು, 2015 ರಲ್ಲಿ ಇಟಲಿಯ ಮಿಲನ್ ಅಲ್ಲಿ ನಡೆಯಲಿದೆ.

**ಡಿಸೆಂಬರ್ 1 ರಿಂದ ಡೆಬಿಟ್ ಕಾರ್ಡ್ ಬಳಕೆಗೆ ಪಿನ್ ನಂಬರ್ ಕಡ್ಡಾಯ: ಆರ್ ಬಿ ಐ**

ಡಿಸೆಂಬರ್ 1 ರಿಂದ ಅನ್ವಯವಾಗುವಂತೆ, ಡೆಬಿಟ್ ಕಾರ್ಡ್ ಬಳಕೆಗೆ ಪಿನ್ ನಂಬರ್ ಕಡ್ಡಾಯವಾಗಲಿದೆ. ರಿಸರ್ವ್ ಬ್ಯಾಂಕ್ ನಿಯಮದಂತೆ, ಡೆಬಿಟ್ ಕಾರ್ಡ್ ಬಳಕೆಗೆ ಪಿನ್ ನಂಬರ್ ಕಡ್ಡಾಯವಾಗಿ ನಮೂದಿಸಲೇಬೇಕು. ಈ ಸಂಬಂಧ ಕಳೆದ ಎರಡು ದಿನಗಳಿಂದ ಹಲವು ಬ್ಯಾಂಕ್‌ಗಳು ತಮ್ಮ ಗ್ರಾಹಕರಿಗೆ ಎಸ್‌ಎಂಎಸ್ ಮೂಲಕ ಸಂದೇಶ ರವಾನಿಸಲಾಗಿದೆ.

**ಹಿನ್ನೆಲೆ:**

ಡೆಬಿಟ್ ಕಾರ್ಡ್‌ಗಳನ್ನು ಕಳವು ಮಾಡಿ ಎಲ್ಲೆಂದರಲ್ಲಿ ಉಪಯೋಗಿಸುವ ಪ್ರಕರಣಗಳು ಮತ್ತು ನಕಲಿ ಕಾರ್ಡ್ ಬಳಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಪಿನ್ ನಂಬರ್ ಬಳಕೆ ಕಡ್ಡಾಯ ಮಾಡಲು ರಿಸರ್ವ್ ಬ್ಯಾಂಕ್ ಚಿಂತಿಸಿತ್ತು. ಕೆಲವೊಂದು ಬ್ಯಾಂಕ್‌ಗಳ ಡೆಬಿಟ್ ಕಾರ್ಡ್ ಬಳಕೆ ವೇಳೆ ಪಿನ್ ನಂಬರ್ ಕೇಳುತ್ತಿತ್ತಾದರೂ, ಈ ಕ್ರಮ ಸಾರ್ವತ್ರಿಕವಾಗಿರಲಿಲ್ಲ.

**ನೂತನ ವ್ಯವಸ್ಥೆಗೆ ಸಲಹೆ:**

- ಈ ಮೊದಲು ಆರ್‌ಬಿಐ ಕಾರ್ಯಕಾರಿ ಸಮಿತಿಯೊಂದು, ಅತ್ಯಾಧುನಿಕ ಇಎಮ್‌ವಿ ಚಿಪ್ ಕಾರ್ಡ್ ಅಂದರೆ, ಮ್ಯಾಗ್ನೆಟಿಕ್ ಸ್ಟ್ರಿಪ್ ಕಾರ್ಡ್ (ಡೆಬಿಟ್ ಕಾರ್ಡ್ ಮಾದರಿಯವು), ಜೊತೆಗೆ ಬಯೋಮೆಟ್ರಿಕ್ (ಆಧಾರ್ ಬೆರಳಚ್ಚು)ಗಳನ್ನು ಯೂರೋ ಪೇ, ಮಾಸ್ಟರ್ ಕಾರ್ಡ್, ವೀಸಾ ಕಾರ್ಡ್‌ಗಳಲ್ಲಿ ನೀಡಲು ಚಿಂತಿಸಿತ್ತು.
- ಆದರೆ ಸಾಮಾನ್ಯ ಪಿನ್ ನಂಬರ್ ಹೊಂದಿದ ಡೆಬಿಟ್ ಕಾರ್ಡ್‌ಗಳಿಗಿಂತ ಈ ಆಧುನಿಕ ಮಾದರಿಯ ಕಾರ್ಡ್‌ಗಳ ತಯಾರಿಕೆ ಅಧಿಕ ಬೆಲೆಯದ್ದಾಗಿದೆ.

- ಆದ್ದರಿಂದ ಸದ್ಯದ ಪರಿಸ್ಥಿತಿಯಲ್ಲಿ ಡೆಬಿಟ್ ಕಾರ್ಡ್ ಜೊತೆ ಪಿನ್ ನಂಬರ್ ಕಡ್ಡಾಯ ಮಾಡುವ ನಿರ್ಧಾರಕ್ಕೆ ಆರ್‌ಬಿಐ ಬಂದಿದೆ.
- ಸದ್ಯ ಐಸಿಐಸಿಐ, ಎಚ್‌ಡಿಎಫ್ಸಿ, ಎಸ್‌ಬಿಐ ಇಎಮ್‌ವಿ ಚಿಪ್ ಕಾರ್ಡ್‌ಳಗನ್ನು ಗ್ರಾಹಕರಿಗೆ ನೀಡುತ್ತಿವೆ.

# ವಿಜ್ಞಾನ-ತಂತ್ರಜ್ಞಾನ

## ಭಾರತೀಯ ಬಾಹ್ಯಾಕಾಶ ಸಂಸ್ಥೆಯಿಂದ ಐತಿಹಾಸಿಕ "ಮಂಗಳಯಾನ" ಯಾತ್ರೆಗೆ ಚಾಲನೆ

ಭಾರತೀಯ ಬಾಹ್ಯಾಕಾಶ ಸಂಸ್ಥೆ (ಇಸ್ರೋ) ಇದೇ ಮೊದಲ ಬಾರಿಗೆ ಕೈಗೊಳ್ಳುತ್ತಿರುವ ಐತಿಹಾಸಿಕ ಮಂಗಳಯಾನ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿ ಉಡಾವಣೆಗೊಂಡಿದೆ. ಈ ಯಾತ್ರೆ ಯಶಸ್ವಿಯಾದರೆ, ಮಂಗಳಯಾನ ನಡೆಸಿದ ವಿಶ್ವದ ನಾಲ್ಕನೇ ದೇಶ ಎಂಬ ಹಿರಿಮೆಗೆ ಭಾರತ ಪಾತ್ರವಾಗಲಿದೆ. ಈಗಾಗಲೇ ಅಮೆರಿಕ, ರಷ್ಯಾ ಹಾಗೂ ಯುರೋಪ್ ಈ ಸಾಧನೆ ಮಾಡಿವೆ. ಉಡಾವಣೆಗೊಂಡ 40 ನಿಮಿಷಗಳಲ್ಲಿ ಮಂಗಳಯಾನ ಉಪಗ್ರಹವನ್ನು ಪಿಎಸ್ಎಲ್ ವಿ ನೌಕೆ ಭೂಕಕ್ಷೆಗೆ ಸೇರಿಸಲಿದೆ. ಉಪಗ್ರಹದ ಪ್ರತಿ ಹಂತದ ಚಲನವಲನಗಳ ಬಗ್ಗೆ ಬೆಂಗಳೂರು ಹೊರವಲಯದಲ್ಲಿರುವ ಬ್ಯಾಲಾಳು, ಪೋರ್ಟ್‌ಬ್ಲೇರ್ ಹಾಗೂ ಬ್ರುನೈನಲ್ಲಿನ ಇಸ್ರೋ ಕೇಂದ್ರಗಳ ಮೂಲಕ ನಿಗಾ ಇಡಲಾಗುತ್ತದೆ.

**ಪರ್ಯಟನೆ ಹೇಗೆ:**

ಇದಲ್ಲದೆ ದಕ್ಷಿಣ ಪೆಸಿಫಿಕ್ ಸಮುದ್ರದಲ್ಲಿ ಎರಡು ಹಡಗುಗಳನ್ನು ಕೂಡ ನಿಯೋಜಿಸಲಾಗಿದೆ. ಉಡಾವಣೆಯಾದ ಬಳಿಕ 20 ರಿಂದ 25 ದಿನಗಳ ಕಾಲ ಭೂಕಕ್ಷೆಯಲ್ಲಿ ಸುತ್ತುವ ಉಪಗ್ರಹ, ಡಿಸೆಂಬರ್ 1 ರಿಂದ ಮಂಗಳಗ್ರಹದತ್ತ ಹೊರಡಲಿದೆ. 9 ತಿಂಗಳುಗಳ ಕಾಲ ಕ್ರಮಿಸಿ 2014ರ ಸೆಪ್ಟೆಂಬರ್ 24ಕ್ಕೆ ಮಂಗಳ ಗ್ರಹದ ಕಕ್ಷೆ ಮುಟ್ಟಲಿದೆ. ಇದುವರೆಗೂ ಅಮೆರಿಕ, ರಷ್ಯಾ ಹಾಗೂ ಯುರೋಪ್ 51 ಬಾರಿ ಮಂಗಳಯಾನ ಕೈಗೊಂಡಿವೆಯಾದರೂ ಆ ಪೈಕಿ 21 ರಲ್ಲಿ ಮಾತ್ರ ಯಶಸ್ಸು ಸಾಧಿಸಿವೆ.

**ಕಡಿಮೆ ಬಜೆಟ್:**

ಅಮೆರಿಕದ ಮಂಗಳಯಾನಕ್ಕೆ ತಗಲಿದ ವೆಚ್ಚ 4200 ಕೋಟಿ ರೂ. ಆದರೆ ಇಸ್ರೋದ ಮಂಗಳಯಾನದ ವೆಚ್ಚ ಕೇವಲ 450 ಕೋಟಿ ರೂ. ಕಡಿಮೆ ಬಜೆಟ್‌ನ ಯೋಜನೆಗಳು ಕಳಪೆ ಎಂಬ ಅಭಿಪ್ರಾಯ ಸಾಮಾನ್ಯ. ಆದರೆ ಬಾಹ್ಯಾಕಾಶ ಕ್ಷೇತ್ರದಲ್ಲಿ ಹಲವು ವರ್ಷಗಳಿಂದ ಈ ಮಾತನ್ನು ಸುಳ್ಳಾಗಿಸುತ್ತಲೇ ಬಂದಿರುವ ಇಸ್ರೋ, ಮಂಗಳಯಾನದಲ್ಲೂ ಅದೇ ಸಾಧನೆ ಮಾಡಿದೆ. ಅಚ್ಚರಿಯ ವಿಷಯವೆಂದರೆ, ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನಾಸಾ ತನ್ನ ಮೇವಿನ್ ಮಂಗಳಯಾನ ಉಪಗ್ರಹ ಸಿದ್ಧಪಡಿಸಲು 5 ವರ್ಷ ಸಮಯ ತೆಗೆದುಕೊಂಡಿತ್ತು. ಜೊತೆಗೆ ಅದರ ವೆಚ್ಚ ಸುಮಾರು 4200 ರೂ. ಕೋಟಿ ಆಗಿತ್ತು. ಆದರೆ ಇಸ್ರೋ, ಅನುಮತಿ ಸಿಕ್ಕ ಕೇವಲ 18 ತಿಂಗಳಲ್ಲಿ ಮಂಗಳಯಾನ ಉಪಗ್ರಹವನ್ನು ಸಿದ್ಧಪಡಿಸಿ ಉಡ್ಡಯನಕ್ಕೆ ಅಣಿಯಾಗಿದೆ. ಮೇಲಾಗಿ ವೆಚ್ಚ ಕೇವಲ 420 ಕೋಟಿ ರೂ. ಅಂದರೆ ಅಮೆರಿಕದ ವೆಚ್ಚಕ್ಕಿಂತ 9 ಪಟ್ಟು ಕಡಿಮೆ. ಹೀಗಾಗಿಯೇ ಒಂದು ವೇಳೆ ಭಾರತದ ಮಂಗಳಯಾನ ಯಶಸ್ವಿಯಾದರೆ, ಉಪಗ್ರಹ ಉಡ್ಡಯನ ವಲಯದಲ್ಲಿ ಭಾರತ ಏಷ್ಯಾದಲ್ಲಿ ಮಾತ್ರವಲ್ಲ, ವಿಶ್ವದಲ್ಲೇ ಹೊಸ ಉದ್ಯಮವನ್ನು ತನ್ನತ್ತ ಸೆಳೆಯುವ ಸಾಧ್ಯತೆ ಇದೆ.

**ಮಂಗಳಯಾನ:**

ನವೆಂಬರ್ 5 ಕ್ಕೆ ಉಪಗ್ರಹವನ್ನು ಹಾರಿಬಿಟ್ಟರೂ ಅದು ನವೆಂಬರ್ 20 ಅಥವಾ 25ರ ತನಕ ಭೂಮಿಯ ಕಕ್ಷೆಯಲ್ಲೇ ಸುತ್ತು ಹೊಡೆಯಲಿದೆ. ಕಾರಣ, ಮಂಗಳಗ್ರಹದತ್ತ ಉಪಗ್ರಹವನ್ನು ಹಾರಿಬಿಡುವ ಸಾಮರ್ಥ್ಯದ ರಾಕೆಟ್ ತಂತ್ರಜ್ಞಾನ ಇನ್ನೂ ಇಸ್ರೋಗೆ ಸಿದ್ಧಸಿಲ್ಲ. ಹೀಗಾಗಿ ಒಂದು ತಿಂಗಳ ಕಾಲ ಭೂಮಿಯ ಕಕ್ಷೆಯಲ್ಲೇ ಸುತ್ತುವರಿದು, ಬಳಿಕ ಡಿಸೆಂಬರ್ 1 ರ ಹೊತ್ತಿಗೆ ಉಪಗ್ರಹ ಸೂಕ್ತ ಸಮಯದಲ್ಲಿ ಮಂಗಳ ಗ್ರಹದತ್ತ ಪ್ರಯಾಣ ಬೆಳೆಸಲಿದೆ.

**ಇತರೆ ವಿಶೇಷತೆಗಳು:**

- ಭಾರತದ ಮೊದಲ ರಾಕೆಟ್ ಉಡಾವಣೆಯ ಸುವರ್ಣ ಮಹೋತ್ಸವ ಆಚರಿಸಲಾಗುವ (50ನೇ ವರ್ಷಾಚರಣೆ) ನವೆಂಬರ್ 5 ರಂದೇ ಮಂಗಳಕ್ಕೆ ಉಪಗ್ರಹ ಉಡಾವಣೆ. ಅದೇ ದಿನ ಧ್ರುವಗಾಮಿ ಉಪಗ್ರಹ ಉಡಾವಣಾ ವಾಹನದ (ಪಿಎಸ್‌ಎಲ್‌ವಿ)ರಜತ ಮಹೋತ್ಸವ.
- ಸುಮಾರು 1,350 ಕೆಜಿ ತೂಕದ ಉಪಗ್ರಹವು ಐದು ಸಾಧನಗಳನ್ನು ಹೊತ್ತೊಯ್ಯಲಿದೆ.
- ಮಂಗಳನ ಮೇಲ್ಮೈ, ವಾತಾವರಣ, ಖನಿಜಾಂಶ ಅಧ್ಯಯನ, ಜೀವ ಕುರುಹು ಪತ್ತೆ ಹಾಗೂ ವಿಶೇಷವಾಗಿ ಮಿಥೇನ್ ಪತ್ತೆಗೆ ಹುಡುಕಾಟ.
- ಹತ್ತು ತಿಂಗಳ ಸುದೀರ್ಘ ಪ್ರಯಾಣ. ಆರು ತಿಂಗಳು ಮಂಗಳ ಕಕ್ಷೆ ಮೇಲೆ. 300 ದಿನಗಳ ಸುದೀರ್ಘ ಯಾನದಲ್ಲಿ 40 ಕೋಟಿ ಕಿ.ಮೀ ಗಳಷ್ಟು ಕ್ರಮಿಸಿ ಮಂಗಳ ಕಕ್ಷೆ ಸೇರಲಿದೆ.
- ಹೆಚ್ಚಿನ ಪ್ರಮಾಣದಲ್ಲಿ ಮಿಥೇನ್ ಅಂಶ ಹೊಂದಿದೆ ಎನ್ನಲಾದ ಒಂದು ಧೂಮಕೇತು (ಸಿ/2013ಎ1) ಮತ್ತು ಮಂಗಳ ಗ್ರಹದ ಎರಡು ಉಪಗ್ರಹಗಳ ಮೇಲೆ ಕಣ್ಣಿರಿಸಲಿದೆ.
- ಇದು ಅಂತರಗ್ರಹೀಯ ಅನ್ವೇಷಣೆಗೆ ಸಹಕಾರಿ ಮತ್ತು ಭಾರತದ ತಾಂತ್ರಿಕ ಸಾಮರ್ಥ್ಯ, ಕೌಶಲದ ಕಾರ್ಯದೊತ್ತಡ ಮತ್ತು ಮಿತವ್ಯಯದ ಎಂಜಿನಿಯರಿಂಗ್ ಕಾರ್ಯಕ್ಕೆ (ದುಬಾರಿ ವೆಚ್ಚದ ಅನ್ವೇಷಣಾ ಉದ್ದಿಮೆಯಲ್ಲಿ ಕಡಿಮೆ ಖರ್ಚು ಮಾಡಿದ ರಾಷ್ಟ್ರ) ಅಂತರರಾಷ್ಟ್ರೀಯ ಮನ್ನಣೆ. ಬಾಹ್ಯಾಕಾಶ ಆರ್ಥಿಕತೆಗೆ ಅನುವು.
- ಭಾರತೀಯ ವಿಜ್ಞಾನಿಗಳು ಮತ್ತು ಎಂಜಿನಿಯರ್‌ಗಳಿಂದ ಉಪಗ್ರಹ ನಿರ್ಮಾಣ. ಸ್ವದೇಶಿ ನಿರ್ಮಿತ ರಾಕೆಟ್‌ನಿಂದ ಭಾರತದ ನೆಲದಿಂದಲೇ ಉಪಗ್ರಹ ಉಡಾವಣೆ. ಗ್ರಹದ ಜೀವ ರಾಸಾಯನಿಕ ಅಂಶಗಳ ಅಧ್ಯಯನಕ್ಕಾಗಿ ಉಪಗ್ರಹದೊಂದಿಗೆ ದೇಶಿ ನಿರ್ಮಿತ ಸಾಧನಗಳ ಅಳವಡಿಕೆ.
- ಮಂಗಳಯಾನ ಯಶಸ್ವಿಯಾದರೆ ಅಮೆರಿಕ, ರಷ್ಯಾ ಮತ್ತು ಯೂರೋಪ್ ಒಕ್ಕೂಟದ ನಂತರದ ಸ್ಥಾನ ಭಾರತದ್ದಾಗಲಿದೆ.
- ನ್ಯಾನೋ ಕಾರು ಗಾತ್ರದ ಉಪಗ್ರಹವನ್ನು ಹೊತ್ತ ಪಿಎಸ್‌ಎಲ್ವಿ- 24ಸಿ ಉಡ್ಡಯನವಾಹನ ನಭಕ್ಕೆ ಜಿಗಿದಿದೆ.

**ಅಂಗಾರಕನ ಪರಿಚಯ:**

ಸೂರ್ಯನ ಸಮೀಪದಿಂದ ಸುತ್ತುವ ನಾಲ್ಕನೇ ಗ್ರಹ. ಸೌರಮಂಡಲದಲ್ಲಿರುವ ಎರಡನೇ ಅತಿ ಸಣ್ಣ ಗ್ರಹ. ಕಬ್ಬಿಣದ ಆಕ್ಸೈಡ್ ಹೆಚ್ಚಿನ ಪ್ರಮಾಣದಲ್ಲಿ ಇರುವ ಕಾರಣ ಈ ಗ್ರಹ ಕೆಂಪಾಗಿ ಕಾಣುತ್ತದೆ. ಹಾಗಾಗಿ ಈ ಗ್ರಹವನ್ನು 'ಕೆಂಪು ಗ್ರಹ' ಎಂದೂ ಕರೆಯಲಾಗುತ್ತದೆ.

**ಮಂಗಳಯಾನ ಯಾಕೆ?**

ಜೀವಿಗಳ ಕುರುಹು ಪತ್ತೆಹಚ್ಚುವುದು. ಇದಕ್ಕಾಗಿ ಮಿಥೇನ್ನ ಇರುವಿಕೆ ಅಧ್ಯಯನ ನಡೆಸುವುದು. ಮಂಗಳಗ್ರಹದಲ್ಲಿ ಜೀವಿಗಳಿದ್ದರೆ ಮಿಥೇನ್ ಇರಲೇಬೇಕು. ಹಾಗಾಗಿ ಮಂಗಳಗ್ರಹಕ್ಕೆ ಕಳುಹಿಸುತ್ತಿರುವ ಉಪಗ್ರಹ ಮಿಥೇನ್ ಸೆನ್ಸರ್ ಹಾಗೂ ಥರ್ಮಲ್ ಇನ್ಫ್ರಾರೆಡ್ ಸ್ಪೆಕ್ಟ್ರೋಮೀಟರ್ ಅನ್ನು ಒಳಗೊಂಡಿದೆ. ಇವು ಮಿಥೇನ್ನ ಅಸ್ತಿತ್ವದ ಅಧ್ಯಯನಕ್ಕೆ ನೆರವಾಗಲಿವೆ. ಮಂಗಳನ ವಾತಾವರಣದಲ್ಲಿರುವ ಡಿಯುಟೇರಿಯಂ- ಹೈಡ್ರೋಜನ್ ಪ್ರಮಾಣದಂತಹ ಅಂಶಗಳ ಅಧ್ಯಯನವೂ ನಡೆಸಲಿದೆ.

**ಏನು ವಿಶೇಷ?**

ಈ ಗ್ರಹದ ಗುರುತ್ವಾಕರ್ಷಣೆ ಶಕ್ತಿ ಭೂಮಿಯ ಶೇ.38ರಷ್ಟಿದೆ. ಇದು ಮಾನವನ ದೇಹವನ್ನು ಆರೋಗ್ಯಕದಿಂದಿಡಲು ಸಾಕು ಎನ್ನುತ್ತಾರೆ ವಿಜ್ಞಾನಿಗಳು. ಮಂಗಳನ ವಾತಾವರಣ ಸೂರ್ಯನ ಹಾಗೂ ಕಾಸ್ಮಿಕ್ ವಿಕಿರಣಗಳಿಂದ ರಕ್ಷಣೆ ನೀಡುತ್ತದೆ. ಅಂಗಾರಕನಲ್ಲಿನ ದಿನ ಮತ್ತು ರಾತ್ರಿಯ ವೇಳಾಪಟ್ಟಿ ಸರಿಸುಮಾರು ಭೂಮಿಯಂತೆಯೇ ಇದೆ. ಮಂಗಳದಲ್ಲಿ ಒಂದು ದಿನ ಅಂದರೆ 24.39.37 ಗಂಟೆಗಳು. ಈ ಗ್ರಹದ ವಾತಾವರಣದ ಶೇ.95.32ರಷ್ಟು ಕಾರ್ಬನ್ ಡೈ ಆಕ್ಸೈಡ್ ಆವರಿಸಿದೆ. ಮಂಗಳಗ್ರಹವನ್ನು ಬರಿಗಣ್ಣಿನಿಂದ ನೋಡಲು ಸಾಧ್ಯ. ಭೂಮಿಯ ಅರ್ಧದಷ್ಟು ಅಗಲ ಇದೆ. 10ನೇ ಒಂದು ಭಾಗದಷ್ಟು ತೂಕ ಹೊಂದಿದೆ. ಮಂಗಳಗ್ರಹದ ಒಟ್ಟಾರೆ ಉಷ್ಣಾಂಶ 63 ಡಿಗ್ರಿ ಸೆಲ್ಸಿಯಸ್.

**ಮಂಗಳಗ್ರಹವೇ ಯಾಕೆ?**

ಭೂಮಿಯ ರೀತಿಯಲ್ಲೇ ಜೀವಿಗಳಿಗೆ ವಾಸಯೋಗ್ಯ ಗ್ರಹ ಯಾವುದು? ಇಂತಹದ್ದೊಂದು ಪ್ರಶ್ನೆ ಎಲ್ಲರ ತಲೆ ತಿನ್ನುತ್ತಿದ್ದಾಗ ವಿಜ್ಞಾನ ಕಣ್ಣಿಗೆ ಬಿದ್ದದ್ದು ಅಂಗಾರಕ. ಇದಕ್ಕೆ ಕಾರಣವೂ ಉಂಟು. ಈ ಕೆಂಪುಗ್ರಹ ಅನೇಕ ಕಾರಣಗಳಿಗಾಗಿ ವಿಜ್ಞಾನಿಗಳಿಗೆ ಕುತೂಹಲ ಮೂಡಿಸಿತ್ತು. ಭೂಮಿಯಲ್ಲಿ ಜೀವಿಗಳ ಉಗಮಕ್ಕೆ ಇದೇ ಗ್ರಹವೇ ಮೂಲ ಎನ್ನುವ ಸಿದ್ಧಾಂತಗಳೂ ಅಸ್ತಿತ್ವದಲ್ಲಿವೆ. ಹೀಗಾಗಿ 1960ರ ದಶಕದಿಂದಲೂ ಮಂಗಳನ ಅನ್ವೇಷಣೆ ಆರಂಭವಾಗಿತ್ತು.

**ಶೇ. 42 ವೈಫಲ್ಯ:**

ಮಂಗಳಗ್ರಹಕ್ಕೆ ಸಂಬಂಧಿಸಿದ ಅಂತಾರಾಷ್ಟ್ರೀಯ ಯೋಜನೆನೋಡಿದರೆ ಅವುಗಳಲ್ಲಿ ಶೇ.42ರಷ್ಟು ವೈಫಲ್ಯ ಕಂಡಿವೆ ಸುಧಾರಿತ ರಾಕೆಟ್ ಮಂಗಳಯಾನಕ್ಕೆ ಬಳಸಿಕೊಳ್ಳುತ್ತಿರುವುದು ಪಿಎಸ್‌ಎಲ್ವಿ ರಾಕೆಟ್. ಇಸ್ರೋ ಇದಕ್ಕಾಗಿ ಕಳೆದ 2 ದಶಕಗಳಿಂದ ಪಿಎಸ್ ಎಲ್ವಿಯಲ್ಲಿ ಬದಲಾವಣೆ ಮಾಡಿಕೊಳ್ಳುತ್ತಲೇ ಬಂದಿದೆ. ಸಾಫ್ಟ್ವೇರ್ನ ಗರಿಷ್ಠ ಬಳಕೆ ಮಂಗಳಯಾನದಲ್ಲಿ ಇಸ್ರೋ ಸಾಕಷ್ಟು ರಿಸ್ಕ್ ತೆಗೆದುಕೊಂಡಿದೆ. ಇಸ್ರೋವು ಗಗನನೌಕೆಯ ಒಂದೇ ಒಂದು ಭೌತಿಕ ಮಾದರಿಯನ್ನಷ್ಟೇ ಸಿದ್ಧಪಡಿಸಿದೆ. ಚಂದ್ರಯಾನ ಯೋಜನೆಯಲ್ಲೂ ಇಸ್ರೋ ಇದೇ ತಂತ್ರ ಬಳಸಿತ್ತು. ಮಂಗಳಯಾನದಲ್ಲೂ ಇದೇ ರೀತಿಯ ತಂತ್ರಕ್ಕೆ ಇಸ್ರೋ ಮೊರೆ ಹೋಗಿದೆ. ನಾಸಾ ಮತ್ತು ಐರೋಪ್ಯ ಬಾಹ್ಯಾಕಾಶ ಸಂಸ್ಥೆಗಳು ಸಾಮಾನ್ಯವಾಗಿ ಉಪಗ್ರಹಗಳ ಮೂರು ಮಾದರಿಗಳನ್ನು ಸಿದ್ಧಪಡಿಸುತ್ತವೆ. ಆದರೆ, ಇಸ್ರೋ ಇದಕ್ಕಾಗಿ ಹೆಚ್ಚಾಗಿ ಸಾಫ್ಟ್ವೇರ್ಗಳನ್ನೇ ಬಳಸಿಕೊಂಡಿದೆ. ಒಂದೇ ಮಾದರಿ ಸಿದ್ಧಪಡಿಸಿದೆ. ಹಾಗಂತ ಇತರೆ ಬಾಹ್ಯಾಕಾಶ ಸಂಸ್ಥೆಗಳು ಸಾಫ್ಟ್ವೇರ್ ಬಳಸಿಕೊಳ್ಳುವುದಿಲ್ಲ ಅಂತಲ್ಲ. ಆದರೆ, ಇಸ್ರೋ ಸಾಫ್ಟ್ವೇರ್ಗಳ ಗರಿಷ್ಠ ಪ್ರಯೋಜನ ಪಡೆದುಕೊಳ್ಳುತ್ತಿದೆ ಅಷ್ಟೆ. ಸಣ್ಣ ಸಂಪನ್ಮೂಲ, ದೊಡ್ಡ ಗುರಿ ಇಸ್ರೋದ ಸ್ಥಾಪನೆಯಾದದ್ದು 1960ರಲ್ಲಿ. ಆ ಸಮಯದಲ್ಲಿ ಚಂದ್ರ ಹಾಗೂ ಮಂಗಳಯಾನ ಇಸ್ರೋದ ಅಜೆಂಡಾದಲ್ಲಿಯೇ ಇರಲಿಲ್ಲ. ಹಣಕಾಸಿನ ಕೊರತೆಯಿಂದಾಗಿ ಇಸ್ರೋದ ಮುಖ್ಯಸ್ಥರು ಕಡಿಮೆ ಸಂಪನ್ಮೂಲದಲ್ಲಿ ಗರಿಷ್ಠ ಲಾಭಪಡೆಯುವ ಕಾರ್ಯಶೈಲಿಯನ್ನು ನೆಚ್ಚಿಕೊಂಡಿದ್ದರು. ಆ ಶೈಲಿಯನ್ನು ಇಂದಿಗೂ ಇಸ್ರೋ ಮುಂದುವರಿಸಿಕೊಂಡು ಬಂದಿದೆ.

**ಕೆಂಪು ಗ್ರಹದ ಸುತ್ತನೋಟ:**

1960 ವಿಶ್ವದ ಮೊದಲ ಮಂಗಳಗ್ರಹ ಯೋಜನೆಯಾದ ರಷ್ಯಾದ ಕೊರಾಬಿ-4 ವೈಫಲ್ಯ. 1965 ಅಮೆರಿಕದ ಫ್ಲೈಬೈ ವ್ಯೋಮನೌಕೆ ಮೆರೈನರ್-4ದಿಂದ ಭೂಮಿಗೆ ಮಂಗಳಗ್ರಹದ ಚಿತ್ರ ರವಾನೆ. 1971 ರಷ್ಯಾದ ಲ್ಯಾಂಡರ್- 3 ಮಂಗಳಗ್ರಹದಲ್ಲಿಳಿದ ಮೊದಲ ವ್ಯೋಮನೌಕೆ. 1988 ಮಂಗಳಗ್ರಹದತ್ತ ರಷ್ಯಾದಿಂದ ಫೋಬೋಸ್-1 ಮತ್ತು ಫೋಬೋಸ್-2 ಎನ್ನುವ ಎರಡು ವ್ಯೋಮನೌಕೆ

ರವಾನೆ. ಆದರೆ, ಇದು ವಿಫಲಯಾತ್ರೆ. 1992 ಅಮೆರಿಕ ಕಳುಹಿಸಿಕೊಟ್ಟ ಉಪಗ್ರಹ ನಾಪತ್ತೆ. 1996 ಅಮೆರಿಕದಿಂದ ಮಂಗಳಗ್ರಹದ ಕುರಿತು ದೊಡ್ಡಮಟ್ಟದ ಅಧ್ಯಯನ. 2001 ಅಮೆರಿಕದಿಂದ ಮಾರ್ಸ್ ಒಡಿಸ್ಸಿ ಉಪಗ್ರಹ ನಭಕ್ಕೆ. ಈಗಲೂ ಮಂಗಳಗ್ರಹದ ಅಧ್ಯಯನ ನಡೆಸುತ್ತಿದೆ ಈ ಉಪಗ್ರಹ. 2003 ಐರೋಪ್ಯ ಅಂತರಿಕ್ಷ ಸಂಸ್ಥೆಯಿಂದ ಮಾರ್ಸ್ ಎಕ್ಸ್ಪ್ರೆಸ್ ಉಪಗ್ರಹ ಉಡ್ಡಯನ. 2004 ಮಂಗಳಗ್ರಹದಲ್ಲಿ ಸ್ಪಿರಿಟ್ ಮತ್ತು ಒಪರ್ಚುನಿಟಿ ಎನ್ನುವ ಎರಡು ರೋವರ್ಗಳನ್ನು ಇಳಿಸಿದ ಅಮೆರಿಕ. ಐರೋಪ್ಯ ಅಂತರಿಕ್ಷ ಸಂಸ್ಥೆ ರೊಸೆಟ್ಟಾ ಎನ್ನುವ ವ್ಯೋಮನೌಕೆ ಕಳುಹಿಸಿಕೊಟ್ಟಿತು. 2011 ಅಮೆರಿಕವು ತನ್ನ ಮಹತ್ವಾಕಾಂಕ್ಷೆಯ ಕ್ಯೂರಿಯಾಸಿಟಿಯನ್ನು ಮಂಗಳನಗ್ರಹದತ್ತ ಯಶಸ್ವಿಯಾಗಿ ಹಾರಿಸಿತು. ಇದೇ ಅವಧಿಯಲ್ಲಿ ರಷ್ಯಾವು ಮಂಗಳಗ್ರಹದಿಂದ ಸ್ಯಾಂಪಲ್ನೊಂದನ್ನು ವಾಪಸ್ ತರುವ ಫೋಬೋಸ್ ಗ್ರ್ಯಾಂಟ್ ಯೋಜನೆ ಪ್ರಕಟಿಸಿತು. ಚೀನಾವು ಯಿಂಗಾವೊ-1 ಉಪಗ್ರಹ ಹಾರಿಸಿತು.

## ಭೂಮಿಗೆ ಅಪ್ಪಳಿಸಲಿರುವ ವೈಫಲ್ಯಕ್ಕೀಡಾದ ಯೂರೋಪಿಯನ್ ಉಪಗ್ರಹ

ಭೂಮಿಯ ಗುರುತ್ವಾಕರ್ಷಣೆ ಮತ್ತು ಗುರುತ್ವ ಕ್ಷೇತ್ರದ ಕುರಿತಂತೆ ಅತೀ ಸೂಕ್ಷ್ಮ ವಿವರಗಳನ್ನು ಸಂಶೋಧಿಸಿದ್ದ ಯುರೋಪಿಯನ್ ಉಪಗ್ರಹವು ಇದೀಗ ವೈಫಲ್ಯಕ್ಕೀಡಾಗಿದ್ದು ಮುಂದಿನ ಕೆಲವೇ ದಿನಗಳಲ್ಲಿ ಭೂಮಿಗೆ ಪತನಗೊಳ್ಳಲಿದೆ. ಈ ಉಪಗ್ರಹವು ತನ್ನ ಕಕ್ಷೆಯಿಂದ ಹೊರಬಿದ್ದ ತಕ್ಷಣವೇ ಬೆಂಕಿಗೆ ಆಹುತಿಯಾಗುವ ಸಾಧ್ಯತೆಗಳಿದ್ದು ಇದರ ಕೆಲ ತುಣುಕುಗಳು ಭೂಮಿಯ ಮೇಲೆ ಅಪ್ಪಳಿಸಲಿವೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ. ಆದರೆ ಉಪಗ್ರಹದ ಅವಶೇಷಗಳು ಭೂಮಿಯ ಯಾವ ಭಾಗದಲ್ಲಿ ಬೀಳಲಿವೆ ಮತ್ತು ಇದರಿಂದುಂಟಾಗಲಿರುವ ಪರಿಣಾಮಗಳ ಬಗೆಗೆ ವಿಜ್ಞಾನಿಗಳಿಗೂ ಖಚಿತತೆ ಇಲ್ಲವಾಗಿದ್ದು ಮೂರು ದಿನಗಳ ಅವಧಿಯಲ್ಲಿ ಈ ಉಪಗ್ರಹ ಭೂಮಿಗೆ ಪತನಗೊಳ್ಳಲಿದೆ ಎಂದು ಅಂದಾಜಿಸಿದ್ದಾರೆ.

**25-45 ತುಣುಕು:**

ಒಂದು ಟನ್ ತೂಕದ ಈ ಉಪಗ್ರಹದ ಸುಮಾರು 25 ರಿಂದ 45 ತುಣುಕುಗಳು ಪತನದ ವೇಳೆ ನೆಲಕ್ಕೆ ಬೀಳಲಿದ್ದು ಈ ತುಣುಕುಗಳ ಗರಿಷ್ಠ ತೂಕ ಸುಮಾರು 200 ಪೌಂಡ್ಗಳಷ್ಟಾಗಿರಲಿದೆ. ಹಾಲಿ ವರ್ಷವೊಂದರಲ್ಲಿಯೇ ಬಾಹ್ಯಾಕಾಶದಿಂದ ಸುಮಾರು 100 ಟನ್ಗಳಷ್ಟು ಈ ತೆರನಾದ ಭಗ್ನಾವಶೇಷಗಳು ಭೂಮಿಯ ಮೇಲೆ ಬೀಳಲಿವೆ ಎಂದು ವಿಜ್ಞಾನಿಗಳು ಅಂದಾಜಿಸಿದ್ದಾರೆ. ಆದರೆ ಈ ವರೆಗೆ ಉಪಗ್ರಹಗಳ ಪತನದಿಂದಾಗಿ ಹಾನಿ ಸಂಭವಿಸಿದ ಬಗೆಗೆ ಪೂರ್ವೋದಾಹರಣೆಗಳಿಲ್ಲ ಎಂದು ಯುರೋಪಿಯನ್ ಬಾಹ್ಯಾಕಾಶ ಸಂಸ್ಥೆಯ ಗೋಚೆ ಉಪಗ್ರಹ ಯೋಜನೆಯ ಮ್ಯಾನೇಜರ್ ಆಗಿರುವ ರೂನೆ ಫ್ಲೋಬರ್ಗಗೇನ್ ಹೇಳಿದರು.

**ಹಿನ್ನೆಲೆ:**

2009ರ ಮಾರ್ಚ್ನಲ್ಲಿ ಬಾಹ್ಯಾಕಾಶಕ್ಕೆ ಕಳುಹಿಸಲಾಗಿದ್ದ ಗೋಚೆ ಉಪಗ್ರಹವು ಕಳೆದ ತಿಂಗಳು ನಿಯಂತ್ರಣವನ್ನು ಕಳೆದುಕೊಂಡಿದ್ದು ಇದೀಗ ದಿನಕ್ಕೆ 2.5 ಮೈಲುಗಳಷ್ಟು ವೇಗದಲ್ಲಿ ಭೂಮಿಯತ್ತ ಪತನಗೊಳ್ಳುತ್ತಿದೆ. ಸದ್ಯ ಪ್ರತಿ 88 ನಿಮಿಷಗಳಿಗೊಮ್ಮೆ ಭೂಮಿಗೆ ಸುತ್ತು ಹಾಕುತ್ತಿರುವ ಈ ಉಪಗ್ರಹವು ಇದೀಗ ಭೂಕಕ್ಷೆಯಿಂದ 113 ಮೈಲುಗಳಷ್ಟು ಎತ್ತರದಲ್ಲಿದೆ.

**2 ವರ್ಷದ ಹಿಂದೆಯೂ..:**

ಎರಡು ವರ್ಷಗಳ ಹಿಂದೆ ನಾಸಾವು ವಾತಾವರಣದ ಮೇಲ್ಭಾಗದ ಸಂಶೋಧನೆಗಾಗಿ ಬಾಹ್ಯಾಕಾಶಕ್ಕೆ ಕಳುಹಿಸಿದ್ದ ಉಪಗ್ರಹವನ್ನು ನಿಷ್ಕ್ರಿಯಗೊಳಿಸಿತ್ತು. ಆ ಬಳಿಕ ನಿಯಂತ್ರಣ ಕಳೆದುಕೊಂಡಿದ್ದ ಈ ಉಪಗ್ರಹವು ಪತನಗೊಳ್ಳಲಾರಂಭಿಸಿತ್ತಲ್ಲದೆ ವಿಶ್ವದೆಲ್ಲೆಡೆ ಆತಂಕಕ್ಕೆ ಕಾರಣವಾಗಿತ್ತು. ಆದರೆ ಅದೃಷ್ಟವಶಾತ್ ಈ ಉಪಗ್ರಹದ ಅವಶೇಷಗಳು ಪೆಸಿಫಿಕ್ ಸಾಗರಕ್ಕೆ ಬೀಳುವುದರೊಂದಿಗೆ ಜನರು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿತ್ತು. ಕೆಲ ತಿಂಗಳ ಬಳಿಕ ರಷ್ಯಾ ಕಳುಹಿಸಿದ್ದ ಉಪಗ್ರಹವು ವೈಫಲ್ಯಕ್ಕೀಡಾಗಿ ಫೆಸಿಫಿಕ್ ಸಾಗರದಲ್ಲಿ ಪತನಗೊಂಡಿತ್ತು. ಇದೀಗ ಗೋಚೆ ಉಪಗ್ರಹವು ಭೂಮಿಗೆ ಪತನಗೊಳ್ಳುತ್ತಿದೆ ಎಂಬ ಮಾಹಿತಿ ವಿಶ್ವದೆಲ್ಲೆಡೆ ಹರಡುತ್ತಿರುವಂತೆಯೇ ಮತ್ತೆ ಜನರಲ್ಲಿ ಆತಂಕ ಮನೆಮಾಡಿದೆ. ಉಪಗ್ರಹ ಎಲ್ಲಿ ಪತನಗೊಳ್ಳಲಿದೆ ಎಂಬ ಬಗ್ಗೆ ವಿಜ್ಞಾನಿಗಳಿಗೂ ಖಚಿತತೆ ಇಲ್ಲವಾಗಿದ್ದು ಇದರಿಂದುಂಟಾಗಲಿರುವ ಹಾನಿಯ ಕುರಿತಂತೆಯೂ ಅನಿಶ್ಚಿತತೆ ಮುಂದುವರಿದಿದೆ. ಉಪಗ್ರಹದ ಅವಶೇಷಗಳು ಬಿದ್ದ ಸ್ಥಳದ ಸುತ್ತಮುತ್ತ 15ರಿಂದ 20 ಯಾರ್ಡ್‌ಗಳಷ್ಟು ಪರಿಸರ ಅಪಾಯಕಾರಿಯಾಗಿರಲಿದೆ ಎಂದು ರೂನೆ ತಿಳಿಸಿದರು.

**<u>ಧನುಷ್ ಕ್ಷಿಪಣಿ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರೈಸಿದ ಭಾರತ</u>**

ಪರಮಾಣು ಸಿಡಿಲ ತಲೆಯನ್ನು ಹೊತ್ತೊಯ್ಯುವ ಸಾಮರ್ಥ್ಯವನ್ನು ಹೊಂದಿರುವ ಧನುಷ್ ಕ್ಷಿಪಣಿಯ ಪ್ರಯೋಗಾರ್ಥ ಪರೀಕ್ಷೆಯನ್ನು ಭಾರತ ಯಶಸ್ವಿಯಾಗಿ ಇತ್ತೀಚೆಗೆ ಪೂರೈಸಿತು. ಒಡಿಶಾದ ಕಡಲ ತೀರದ ನೌಕೆಯಿಂದ ಉಡಾಯಿಸಿಲಾದ ಧನುಷ್ ಕ್ಷಿಪಣಿ ಯಶಸ್ವಿಯಾಗಿ ಗುರಿಯನ್ನು ತಲುಪುವ ಮೂಲಕ ಪರೀಕ್ಷೆ ಯಶಸ್ವಿಯಾಗಿದೆ ಎಂದು ಮೂಲಗಳು ಹೇಳಿವೆ.

**ಧನುಷ್ ಕ್ಷಿಪಣಿ ಬಗ್ಗೆ**:

- ಧನುಷ್ ಕ್ಷಿಪಣಿ ನೆಲದಿಂದ ನೆಲಕ್ಕೆ ಚಿಮ್ಮುವ ಕ್ಷಿಪಣಿಯಾಗಿದ್ದು, ಭಾರತ ತನ್ನ ಸ್ವದೇಶಿ ತಂತ್ರಜ್ಞಾನದಿಂದ ಅಭಿವೃದ್ಧಿಪಡಿಸಿದೆ.
- ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಕೈಗೊಂಡಿರುವ ಸಮಗ್ರ ಕ್ಷಿಪಣಿ ಅಭಿವೃದ್ಧಿ ಕಾರ್ಯಕ್ರಮದಡಿ ಅಭಿವೃದ್ಧಿಗೊಳಿಸಲಾಗುತ್ತಿರುವ ಐದು ಕ್ಷಿಪಣಿಗಳ ಪೈಕಿ ಧನುಷ್ ಕ್ಷಿಪಣಿ ಸಹ ಒಂದು.
- ಸುಮಾರು 500-1000 ಕೆ.ಜಿ. ಪರಮಾಣು ಸಿಡಿಲ ತಲೆಯನ್ನು ಹೊತ್ತೊಯ್ಯುವ ಸಾಮರ್ಥ್ಯವನ್ನು ಧನುಷ್ ಹೊಂದಿದೆ. ಹಾಗೂ ನೆಲದಿಂದ ಮತ್ತು ನೌಕೆಯಿಂದ ಈ ಕ್ಷಿಪಣಿಯನ್ನು ಉಡಾಯಿಸಬಹುದಾಗಿದೆ.
- ಅಕ್ಟೋಬರ್ 5, 2012 ರಂದು ಈ ಕ್ಷಿಪಣಿಯನ್ನು ಮೊದಲು ಯಶಸ್ವಿಯಾಗಿ ಪರೀಕ್ಷಿಸಲಾಗಿತ್ತು.

**ಚೀನಾದ ಪ್ರಥಮ "ರಹಸ್ಯ ಡ್ರೋನ್ (Stealth Drone)" ಪ್ರಯೋಗಾರ್ಥ ಪರೀಕ್ಷೆ ಯಶಸ್ವಿ**

ಚೀನಾ ತನ್ನ ಮೊದಲ ರಹಸ್ಯ ಡ್ರೋನ್ ನ ಪ್ರಯೋಗಾರ್ಥ ಪರೀಕ್ಷೆಯನ್ನು ಯಶಸ್ವಿಯಾಗಿ ನೆರವೇರಿಸಿರುವುದಾಗಿ ಮೂಲಗಳು ತಿಳಿಸಿವೆ. ಈ ಮೂಲಕ ಮಾನವ ರಹಿತ ಯುದ್ದ ವಿಮಾನವನ್ನು ಹೊಂದಿರುವ ವಿಶ್ವದ ಕೆಲವೇ ರಾಷ್ಟ್ರಗಳ ಪಟ್ಟಿಗೆ ಚೀನಾ ಸಹ ಸೇರ್ಪಡೆಗೊಂಡಿದೆ.

- "ಶಾರ್ಪ್ ಸ್ವೊರ್ಡ್ (Sharp Sword)" ಹೆಸರಿನ ಈ ರಹಸ್ಯ ಯುದ್ದ ವಿಮಾನ ಅಮೆರಿಕಾದ US B2 ಬಾಂಬರ್ ರೀತಿಯೇ ಇರುವುದಾಗಿ ಚೀನಾ ಬಿಡುಗಡೆಗೊಳಿಸಿರುವ ಚಿತ್ರಗಳ ಮೂಲಕ ಕಂಡುಬಂದಿದೆ.
- ಈ ಮಾನವ ರಹಿತ ಯುದ್ದ ವಿಮಾನವನ್ನು ಯಶಸ್ವಿಯಾಗಿ ಪರೀಕ್ಷೆ ನೆರವೇರಿಸಿದ ಬಳಿಕ ಚೀನಾ ಇಂತಹ ಯುದ್ದ ವಿಮಾನಗಳನ್ನು ಹೊಂದಿರುವ ವಿಶ್ವದ ನಾಲ್ಕನೇ ರಾಷ್ಟ್ರ ಎನಿಸಿದೆ. ಅಮೆರಿಕಾ, ಯೂರೋಪಿಯನ್ ಯೂನಿಯನ್, ಯು.ಕೆ ಇಂತಹ ವಿಮಾನಗಳನ್ನು ಹೊಂದಿರುವ ಕೆಲವೇ ರಾಷ್ಟ್ರಗಳು.
- ಈ ರಹಸ್ಯ ಡ್ರೋನ್ ವಾಯು ಮತ್ತು ನೆಲದಿಂದ ದಾಳಿಯನ್ನು ಸಮರ್ಥವಾಗಿ ನಡೆಸಲಿದೆ.

**ಭಾರತದ ರಾಕೆಟ್ ಉಡಾವಣೆಗೆ ಸುವರ್ಣ ಮಹೋತ್ಸವದ ಸಂಭ್ರಮ**

ಭಾರತ ತನ್ನ ಪ್ರಥಮ ರಾಕೆಟ್ ಉಡಾವಣೆ ಮಾಡಿದ ದಿನಕ್ಕೆ ಈಗ 50 ವರ್ಷಗಳ ಸಂಭ್ರಮ. ನವೆಂಬರ್ 21 ಈ ಸಂಭ್ರಮದ ಕ್ಷಣಕ್ಕೆ ಸಾಕ್ಷಿಯಾಗಲಿದೆ.

- ಇತ್ತೀಚೆಗಷ್ಟೇ ಮಂಗಳಯಾನವನ್ನು ಯಶಸ್ವಿಯಾಗಿ ಕೈಗೊಂಡು ವಿಶ್ವವನ್ನು ನಿಬ್ಬೆರಗಾಗಿಸಿರುವ ಭಾರತ ತನ್ನ ಮೊದಲ ರಾಕೆಟ್ ಅನ್ನು ನವೆಂಬರ್ 21, 1963 ರಂದು ಉಡಾಯಿಸುವ ಮೂಲಕ ಬಾಹ್ಯಕಾಶ ಕ್ಷೇತ್ರಕ್ಕೆ ಅಂಬೆಗಾಲಿಟ್ಟಿತ್ತು.
- ಅಮೆರಿಕಾದ ತಂತ್ರಜ್ಞಾನದ ಸಹಾಯದೊಂದಿಗೆ ತಯಾರಿಸಲಾದ "ನಿಕೆ ಅಪಾಚೆ (Niche Apache)" ರಾಕೆಟ್ ಅನ್ನು ಕೇರಳದ "TUMBA" ರಾಕೆಟ್ ಉಡಾವಣಾ ಸಂಸ್ಥೆಯಿಂದ ಮೊದಲ ಬಾರಿ ಉಡಾಯಿಸಲಾಯಿತು.
- TERLS (Tumba Equatorial Rocket Launch Station) ಅನ್ನು ಬಳಿಕ ವಿಕ್ರಂ ಸರಬಾಯಿ ಸ್ಪೇಸ್ ಸೆಂಟರ್ ಎಂದು ಮರು ನಾಮಕರಣ ಮಾಡಲಾಯಿತು. ಭಾರತದ ಬಾಹ್ಯಕಾಶಕ್ಕೆ ಸುಭದ್ರ ಅಡಿಪಾಯ ಹಾಕುವಲ್ಲಿ ವಿಕ್ರಂ ಸರಭಾಯಿ ಅವರು ಸಲ್ಲಿಸದ ಸೇವೆ ಅಪಾರ ಆಗಾಗಿ ಈ ರಾಕೆಟ್ ಉಡಾವಣಾ ಸಂಸ್ಥೆಗೆ ಅವರ ಹೆಸರನ್ನು ಇಡಲಾಗಿದೆ.
- ದಕ್ಷಿಣಾ ಕೇರಳದಲ್ಲಿರುವ "ತುಂಬ" ಪ್ರದೇಶದ ಮೂಲಕ ಭೂಮಿಯ ಮ್ಯಾಗ್ನೆಟಿಕ್ ರೇಖೆ ಹಾದು ಹೋಗುವ ಕಾರಣ ಈ ಸ್ಥಳವನ್ನು ರಾಕೆಟ್ ಉಡಾವಣೆಗೆ ಆರಿಸಿಕೊಳ್ಳಲಾಯಿತು.

**ಪೃಥ್ವಿ ಮಧ್ಯಂತರ ಛೇದಕ ಕ್ಷಿಪಣಿ (interceptor missile) ಪರೀಕ್ಷೆಗೆ ಸಜ್ಜಾಗುತ್ತಿರುವ DRDO**

ಭೂಮಿಯ ಹೊರ ವಾತಾವರಣದಲ್ಲೂ ಶತ್ರು ಕ್ಷಿಪಣಿಯನ್ನು ಯಶಸ್ವಿಯಾಗಿ ನಾಶಗೊಳಿಸುವ ಸಾಮರ್ಥ್ಯ ಹೊಂದಿರುವ ಕ್ಷಿಪಣಿಯ ಪರೀಕ್ಷೆಗೆ DRDO ಸಜ್ಜಾಗಿದೆ. ಒಡಿಶಾದ ವೀಲ್ಹರ್ ಐಲ್ಯಾಂಡ್ ನಿಂದ ಈ ಕ್ಷಿಪಣಿಯನ್ನು ಪರೀಕ್ಷಾರ್ಥ ಪ್ರಯೋಗವನ್ನು ನಡೆಯಸಲಾಗುವುದು.

- "ಪೃಥ್ವಿ ಡಿಫೆನ್ಸ್ ವೆಹಿಕಲ್ (Prithvi Defence Vehicle)" ಎನ್ನಲಾಗಿರುವ ಈ ಕ್ಷಿಪಣಿಯು ವಾತಾವರಣದ ಹೊರಭಾಗದಲ್ಲೂ ಅಂದರೆ 2,500 ಕಿ,ಮೀ ದೂರದಲ್ಲೂ ಶತ್ರು ಕ್ಷಿಪಣಿಯನ್ನು ಹೊಡೆದುರುಳಿಸುವ ಸಾಮರ್ಥ್ಯವನ್ನು ಹೊಂದಿದೆ.
- ವಾತಾವರಣದ ಹೊರಗಡೆ ಶತ್ರು ಕ್ಷಿಪಣಿಯನ್ನು ಹೊಡೆದುರುಳಿಸುವ ಕ್ಷಿಪಣಿಯನ್ನು ಜಗತ್ತಿನ ಕೆಲವೇ ಕೆಲವು ರಾಷ್ಟ್ರಗಳು ಹೊಂದಿದ್ದು, ಈ ಸಾಲಿಗೆ ಭಾರತ ಸಹ ಸೇರ್ಪಡೆಗೊಳ್ಳಲಿದೆ.
- DRDO ಈಗಾಗಲೇ ಅನೇಕ ಕ್ಷಿಪಣಿಗಳನ್ನು ಯಶಸ್ವಿಯಾಗಿ ಪರೀಕ್ಷೆ ನಡೆಸಿದೆ. ಇವುಗಳಲ್ಲಿ ಅತ್ಯಂತ ಪ್ರಮುಖವಾದವುಗಳೆಂದರೆ ಪೃಥ್ವಿ ಮತ್ತು ಅಗ್ನಿ ಕ್ಷಿಪಣಿ. ಅಗ್ನಿ-III ಕ್ಷಿಪಣಿ 3,000 ಕಿ.ಮೀ ದೂರವನ್ನು ಕ್ರಮಿಸಬಲ್ಲ ಸಾಮರ್ಥ್ಯವನ್ನು ಹೊಂದಿದೆ. ಅಗ್ನಿ-V ಕ್ಷಿಪಣಿಯನ್ನು ಸಹ DRDO ಅಭಿವೃದ್ಧಿಪಡಿಸುತ್ತಿದ್ದು ಈ ಕ್ಷಿಪಣಿ 5000 ಕಿ.ಮೀ ದೂರದ ಗುರಿಯನ್ನು ತಲುಪುವ ಸಾಮರ್ಥ್ಯವನ್ನು ಹೊಂದಿದೆ.

**"ಅಲ್ಟ್ರಾ ಮೆಗಾ ಪವರ್ ಪ್ರಾಜೆಕ್ಟ್ (Ultra Power Mega Project)" ಒಂದು ನೋಟ**

ಜಗತ್ತಿನ ಬಲಾಢ್ಯ ಆರ್ಥಿಕ ರಾಷ್ಟ್ರಗಳ ಪೈಕಿ ಒಂದಾಗಿರುವ ಭಾರತದಲ್ಲಿ ವಿದ್ಯುತ್ ಒಂದು ದೊಡ್ಡ ಸಮಸ್ಯೆ ಸರಿ. ದೇಶದಲ್ಲಿ ತಲೆದೂರಿರುವ ವಿದ್ಯುತ್ ಸಮಸ್ಯೆಯನ್ನು ನೀಗಿಸುವ ಸಲುವಾಗಿ 11 ನೇ ಪಂಚವಾರ್ಷಿಕ ಯೋಜನೆಯ ಅಂತ್ಯಕ್ಕೆ 10,000 ಮೆಗಾ ವ್ಯಾಟ್ ವಿದ್ಯುತ್ ಅನ್ನು ಉತ್ಪಾದಿಸುವ ಗುರಿಹೊಂದುವ ಮೂಲಕ ಅಲ್ಟ್ರಾ ಮೆಗಾ ಪವರ್ ಪ್ರಾಜೆಕ್ಟ್ ಗಳನ್ನು ಸರ್ಕಾರ ಕೈಗೆತ್ತಿಕೊಂಡಿತು. ಪ್ರತಿ ಅಲ್ಟ್ರಾ ಮೆಗಾ ಪವರ್ ಪ್ರಾಜೆಕ್ಟ್ ಗಳು 4000 ಮೆಗಾ ವ್ಯಾಟ್ ವಿದ್ಯುತನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿರಲಿವೆ.

**ಉದ್ದೇಶಿತ ಅಲ್ಟ್ರಾ ಪವರ್ ಮೆಗಾ ಪ್ರಾಜೆಕ್ಟ್ ಗಳು:** ಇಲ್ಲಿಯವರೆಗೆ ಒಟ್ಟು 12 ಘಟಕಗಳನ್ನು ಸ್ಥಾಪಿಸಲಾಗಿದೆ, ಇವುಗಳಲ್ಲಿ 2 ಘಟಕಗಳು ಈಗಾಗಲೇ ಕಾರ್ಯಾರಂಭಗೊಂಡಿವೆ. ಈ ಘಟಕಗಳ ಕಿರುಮಾಹಿತಿ ಇಲ್ಲಿದೆ.

- ಕೃಷ್ಣಪಟ್ಟಣಂ ಮತ್ತು ನಯುನಿಪಲ್ಲಿ - ಆಂಧ್ರಪ್ರದೇಶ
- ಸುರಗುಂಜ್- ಛತ್ತೀಸ್ ಗರ್
- ಮುಂದ್ರಾ - ಗುಜರಾತ್
- ತಿಲೈಯ - ಜಾರ್ಖಂಡ್
- ತದ್ರಿ -ಕರ್ನಾಟಕ

- ಸಸಾನ್ - ಮಧ್ಯಪ್ರದೇಶ
- ಗಿರ್ಲೆ - ಮಹಾರಾಷ್ಟ್ರ
- ಸುಂದರ್ಗರ್, ಘೋಪರ್ಲಪಲ್ಲಿ ಮತ್ತು ಸಖಿಗೊಪಲ್ - ಒಡಿಶಾ
- ಚೆಯ್ಯೂರ್ - ತಮಿಳುನಾಡು.

## 'ಮಂಗನಿಂದ ಮಾನವ' ಸಿದ್ಧಾಂತಕ್ಕೆ ಹೊಸ ಆಯಾಮ ನೀಡಿದ ವಿಜ್ಞಾನಿಗಳು

ಮಂಗನಿಂದ ಮಾನವ ಎಂಬುದು ಹಳೇ ಕಾಲದಿಂದಲೂ ಕೇಳಿ ಬರುತ್ತಿರುವ ಮಾತು. ಆದರೆ, ಇದನ್ನು ಬುಡಮೇಲಾಗುವಂತೆ ಮಾಡುವ ಸುದ್ದಿಯೊಂದು ಬಂದಿದೆ. ಮಾನವನ ಹುಟ್ಟಿಗೆ ಗಂಡು ಹಂದಿ, ಹೆಣ್ಣು ಚಿಂಪಾಂಜಿ ಸಯೋಗವೇ ಕಾರಣ ಎಂದು, ಖ್ಯಾತ ತಳಿವಿಜ್ಞಾನಿಗಳ ಗುಂಪೊಂದು ಹೇಳಿಕೊಂಡಿದೆ.

**ಏನಿದು ಸಿದ್ಧಾಂತ:**

ಜಾರ್ಜಿಯಾ ವಿಶ್ವವಿದ್ಯಾಲಯದ, ಮಾನವ ವಂಶವಾಹಿ ವಿಭಾಗದ ಮುಖ್ಯಸ್ಥರಾದ ಡಾ.ಈಗುನೆ ಮೆಕಾರ್ತಿ ಅವರ ಪ್ರಕಾರ, ಮಾನವನದ್ದು ಹೈಬ್ರಿಡ್ ತಳಿ. ಹೈಬ್ರಿಡ್ ಹಂದಿ ಮತ್ತು ಹೈಬ್ರಿಡ್ ಚಿಂಪಾಂಜಿಯಿಂದಾಗಿ, ಮಾನವನ ಜನ್ಮವಾಗಿದೆಯಂತೆ. ಡಾರ್ವಿನ್ ಅವರ ಮಂಗನಿಂದ ಮಾನವ ಎಂಬ ಸಿದ್ಧಾಂತ ಮಾನವ ವಂಶವಾಹಿ ಬಗ್ಗೆ ಅರ್ಧ ಕಥೆಯನ್ನು ಮಾತ್ರ ಹೇಳುತ್ತದೆ. ಉಳಿದರ್ಧ ಬೇರೆಯದೇ ಎಂಬುದು ಅವರ ಹೇಳಿಕೆ.

**ಹೊಸ ಆಯಾಮ:**

- ಚಿಂಪಾಂಜಿ ಬಹುತೇಕವಾಗಿ ಮಾನವನನ್ನೇ ಹೋಲುತ್ತದೆ. ಈ ವಾದದಲ್ಲಿ ಆಕ್ಷೇಪವಿಲ್ಲ. ಹಾಗೆಯೇ, ಇತರ ಪ್ರಾಣಿಗಳೊಂದಿಗೆ ಹೋಲಿಸಿದಾಗ, ಹಂದಿ ಮಾನವ ವಂಶವಾಹಿಗೆ ಹತ್ತಿರದಲ್ಲಿದೆಯಂತೆ.
- ಹಂದಿಯ ಕ್ರೋಮೋಸೋಮ್‌ಗಳು ಮಾನವನ ಕ್ರೋಮೋಸೋಮ್‌ಗಳಂತಿವೆ. ಅಲ್ಲದೇ, ಹಂದಿಯ ಹೃದಯ ಕವಾಟಗಳನ್ನು ಮಾನವನಿಗೆ ಯಶಸ್ವಿಯಾಗಿ ಜೋಡಿಸಲಾಗಿವೆ.
- ಅವುಗಳ ಚರ್ಮದ ಪದರವನ್ನೂ, ಮಾನವನ ಸುಟ್ಟ ಗಾಯಕ್ಕೆ ಪರ್ಯಾಯವಾಗಿ ಬಳಸಲಾಗಿದೆ.
- ಹಂದಿಯ ಬಹುತೇಕ ಅವಯವಗಳು, ಮಾನವನಂತೆಯೇ ಇದೆ ಎಂಬ ವಾದದ ಸರಣಿಗಳನ್ನು ಮುಂದಿಟ್ಟಿದ್ದಾರೆ.

## ಭೂ ಕಕ್ಷೆಯಿಂದ ಸೂರ್ಯ ಕಕ್ಷೆಗೆ ತಲುಪಿದ ಮಂಗಳಯಾನ ಉಪಗ್ರಹ

ಯಶಸ್ವಿ 'ಮಂಗಳಯಾನ' ಕೈಗೊಂಡ ಏಷ್ಯಾದ ಮೊದಲ ರಾಷ್ಟ್ರ ಎಂಬ ಪಟ್ಟವನ್ನು ಭಾರತಕ್ಕೆ ತಂದುಕೊಡುವ ನಿಟ್ಟಿನಲ್ಲಿ ದಾಪುಗಾಲು ಇಟ್ಟಿರುವ ಭಾರತೀಯ ಬಾಹ್ಯಾಕಾಶ ಸಂಸ್ಥೆ (ಇಸ್ರೋ), ಐತಿಹಾಸಿಕ ಮಂಗಳಯಾನ ಉಪಗ್ರಹವನ್ನು ಮಂಗಳ

ಗ್ರಹದ ಪಥದತ್ತ ನೂಕುವಲ್ಲಿ ಸಫಲವಾಗಿದೆ. ತನ್ಮೂಲಕ ಭೂಕಕ್ಷೆ ತೊರೆದು ಅನ್ಯ ಗ್ರಹದ ಕಕ್ಷೆಯತ್ತ ಪ್ರಯಾಣ ಬೆಳೆಸಿದ ಇಸ್ರೋದ ಮೊದಲ ಉಪಗ್ರಹ ಎಂಬ ಹಿರಿಮೆಗೆ ಮಂಗಳಯಾನ ಉಪಗ್ರಹ ಪಾತ್ರವಾಗಿದೆ.

**ಸವಾಲಿನ ಕೆಲಸ:**

ನಿತ್ಯ 25 ಲಕ್ಷ ಕಿ.ಮೀ. ವೇಗದಲ್ಲಿ 'ಕೆಂಪುಗ್ರಹ'ದತ್ತ ಚಲಿಸುತ್ತಿರುವ ಈ ಉಪಗ್ರಹ, ಮಾರ್ಗಮಧ್ಯೆ ಏನಾದರೂ ದಾರಿ ತಪ್ಪುವ ಸುಳಿವು ಕಂಡರೆ ಸರಿಪಡಿಸಲು ಇಸ್ರೋಗೆ ನಾಲ್ಕು ಬಾರಿ ಅವಕಾಶವಿದೆ. ಉಪಗ್ರಹವನ್ನು ಮಂಗಳ ಗ್ರಹದ ಹಾದಿಗೆ ಮುಟ್ಟಿಸುವುದು ಇಸ್ರೋ ವಿಜ್ಞಾನಿಗಳಿಗೆ ಉಪಗ್ರಹ ಉಡಾವಣೆಗಿಂತ ಅತ್ಯಂತ ಸವಾಲಿನ ಕೆಲಸವಾಗಿತ್ತು. ಈ ವೇಳೆ, 440 ನ್ಯೂಟನ್ ಲಿಕ್ವಿಡ್ ಇಂಜಿನ್ ಅನ್ನು 22 ನಿಮಿಷಗಳ ಕಾಲ ಚಾಲೂ ಮಾಡಲಾಯಿತು. ಇದರಿಂದಾಗಿ ಸೆಕೆಂಡ್‌ಗೆ 648 ಮೀಟರ್ ವೇಗದಲ್ಲಿ ಉಪಗ್ರಹ ಚಲಿಸಿತು ಎಂದು ಇಸ್ರೋ ಅಧಿಕಾರಿಗಳು ತಿಳಿಸಿದ್ದಾರೆ.

**ಬೆಂಗಳೂರಿಂದ ನಿಗಾ:**

ಗುರುತ್ವಾಕರ್ಷಣೆ ಬಲ ತೊರೆದು ಭೂಕಕ್ಷೆಯಿಂದ ಮಂಗಳ ಹಾದಿಗೆ ತಲುಪಿರುವ ಉಪಗ್ರಹದ ಮೇಲೆ ಬೆಂಗಳೂರು ಹೊರವಲಯದ ಕೆಂಗೇರಿ ಬಳಿ ಇರುವ ಇಂಡಿಯನ್ ಡೀಪ್ ಸ್ಟೇಷನ್ ನೆಟ್‌ವರ್ಕ್ (ಐಡಿಎಸ್‌ಎನ್) ಜತೆಗೂಡಿ ಪೀಣ್ಯದ ಇಸ್ಟ್ರಾಕ್ ಕೇಂದ್ರದ ವಿಜ್ಞಾನಿಗಳ ತಂಡ ನಿರಂತರ ನಿಗಾ ಇಟ್ಟಿದ್ದಾರೆ. ಉಪಗ್ರಹವನ್ನು ಮಂಗಳ ಹಾದಿಗೆ ನೂಕುವುದು ಅತ್ಯಂತ ಕ್ಲಿಷ್ಟಕರ ಕೆಲಸ. ಏಕೆಂದರೆ ತಲುಪಿಸಬೇಕಾದ ಗುರಿ ಅರ್ಧ ಡಿಗ್ರಿ ಏರುಪೇರಾದರೂ, ವೇಗ ಕೆಲವು ಕಿ.ಮೀ.ಯಷ್ಟು ಹೆಚ್ಚು ಕಮ್ಮಿಯಾದರೂ ತೊಂದರೆಯಾಗುವ ಅಪಾಯವಿರುತ್ತದೆ.

**ಮತ್ತೊಂದು ಸವಾಲಿದೆ:**

ಭೂಕಕ್ಷೆಯಿಂದ ಉಪಗ್ರಹವನ್ನು ಬೇರ್ಪಡಿಸಿದಾಕ್ಷಣ ಎಲ್ಲ ಸವಾಲುಗಳು ಮುಗಿದಿಲ್ಲ. 2014ರ ಸೆಪ್ಟೆಂಬರ್‌ನಲ್ಲಿ ಉಪಗ್ರಹವನ್ನು ಮಂಗಳ ಗ್ರಹದ ಕಕ್ಷೆಗೆ ನಾಜೂಕಾಗಿ ಇಳಿಸುವ ಮತ್ತೊಂದು ಕ್ಲಿಷ್ಟಕರ ಸನ್ನಿವೇಶವನ್ನು ಇಸ್ರೋ ಎದುರಿಸಬೇಕಾಗಿದೆ.

**ಐತಿಹಾಸಿಕ ಸಾಧನೆ:**

- ಮಂಗಳಕಕ್ಷೆಗೆ ಉಪಗ್ರಹವನ್ನು ಸೇರಿಸಿ ಯಶಸ್ವಿ ಯಾನ ಕೈಗೊಂಡ ದೇಶಗಳ ಸಂಖ್ಯೆ ಕೇವಲ ಮೂರು. ಅವೆಂದರೆ- ಅಮೆರಿಕ, ಯುರೋಪ್ ಹಾಗೂ ರಷ್ಯಾ.
- 2011ರ ನವೆಂಬರ್‌ನಲ್ಲಿ ಚೀನಾ ತನ್ನ ಮಂಗಳಯಾನ ಉಪಗ್ರಹವನ್ನು ಯಶಸ್ವಿಯಾಗಿ ಭೂಕಕ್ಷೆಗೆ ಸೇರಿಸಿತ್ತು. ಆದರೆ ಭೂಕಕ್ಷೆಯಿಂದ ಆ ಉಪಗ್ರಹವನ್ನು ಮಂಗಳ ಹಾದಿಗೆ ತಲುಪಿಸುವಾಗ ಅದು ಚೂರುಚೂರಾಗಿತ್ತು. ಆ ಚೂರುಗಳು ಕಳೆದ ವರ್ಷ ಪೆಸಿಫಿಕ್ ಸಮುದ್ರಕ್ಕೆ ಬಿದ್ದಿದ್ದವು.
- 2003ರಲ್ಲಿ ಜಪಾನ್‌ನ ಮಂಗಳ ಉಪಗ್ರಹದಲ್ಲಿ ಮಂಗಳ ಗ್ರಹದ ಬಳಿ ದೋಷ ಕಾಣಿಸಿಕೊಂಡಿತ್ತು. ಹೀಗಾಗಿ ಆ ಉಪಗ್ರಹ ಮಂಗಳ ಕಕ್ಷೆ ಸೇರಲು ವಿಫಲವಾಗಿತ್ತು.

- ಇಸ್ರೋ ಉಪಗ್ರಹ ಭೂಕಕ್ಷೆ ತೊರೆದು ಮಂಗಳ ಗ್ರಹ ಹಾದಿ ಹಿಡಿವ ಮೂಲಕ ಚೀನಾ ಮಾಡಲಾರದ್ದನ್ನು ಮಾಡಿ ತೋರಿಸಿದೆ.
- ಅಮೆರಿಕದ ಮಂಗಳಯಾತ್ರೆಗಿಂತ ಕೇವಲ ಶೇ.10ರಷ್ಟು (450 ಕೋಟಿ ರೂ.) ವೆಚ್ಚದಲ್ಲಿ ಇಸ್ರೋ ಕೈಗೊಂಡಿರುವ ಮಂಗಳಯಾನವನ್ನು ಇಡೀ ವಿಶ್ವ ಅತ್ಯಂತ ಕುತೂಹಲದಿಂದ ಗಮನಹರಿಸುತ್ತಿದೆ.

# ಪರಿಸರ

## ಭೂಮಿಯ ಮೇಲೆ ಜೀವಿಗಳ ಉಗಮವನ್ನು ಪತ್ತೆ ಹಚ್ಚಿದ ವಿಜ್ಞಾನಿಗಳು

4 ಶತಕೋಟಿ ವರ್ಷಗಳಷ್ಟು ಹಿಂದೆ ಭೂಮಿಯ ಮೇಲೆ ಜೀವಿ ಉಗಮಿಸಿದ್ದು ಹೇಗೆ? ಹಲವು ವರ್ಷಗಳ ಕಾಲ ಸಂಶೋಧನೆ ನಡೆಸಿ, ವಿಶ್ವದ ಪುರಾತನ ಪಳೆಯುಳಿಕೆ (ಫಾಸಿಲ್) ಹೊಂದಿರುವ 3 ಸ್ಥಳಗಳಿಗೆ ಭೇಟಿ ನೀಡಿ ಅಧ್ಯಯನ ನಡೆಸಿದ ಭಾರತೀಯ ಮೂಲದ ಅಮೆರಿಕ ಸಂಶೋಧಕ ಶಂಕರ ಚಟರ್ಜಿ ಅವರು ವಿಶ್ವದ ಮೂಲೆಮೂಲೆಯ ಜನರನ್ನು ಕಾಡುತ್ತಿರುವ ಈ ಪ್ರಶ್ನೆಗೆ ಉತ್ತರ ಕಂಡುಕೊಂಡಿದ್ದಾರೆ.

**ಉಗಮ ಹೇಗೆ?**

ಅವರ ಪ್ರಕಾರ ಜೀವಿಗಳ ಉಗಮಕ್ಕೆ ಮುಖ್ಯ ಕಾರಣ ಉಲ್ಕಾಪಾತ. 4 ಶತಕೋಟಿ ವರ್ಷಗಳ ಹಿಂದೆ ಭಾರಿ ಪ್ರಮಾಣದಲ್ಲಿ ಉಲ್ಕಾಪಾತವಾಗಿದ್ದರಿಂದ ಭೂಮಿಯ ಮೇಲೆ ಬೃಹತ್ ಗುಂಡಿಗಳು ಸೃಷ್ಟಿಯಾದವು. ಅದರಲ್ಲಿ ನೀರು ತುಂಬಿಕೊಂಡು, ರಾಸಾಯನಿಕಗಳು ಸೇರಿಕೊಂಡು ಜೀವಿಗಳ ಉಗಮಕ್ಕೆ ಪೂರಕ ವಾತಾವರಣ ಸೃಷ್ಟಿಯಾಯಿತು. ಬಳಿಕ ಅಲ್ಲಿ ಏಕಕೋಶದ ಮೊದಲ ಜೀವಿ ಉದಯವಾಯಿತು ಎಂದು ಶಂಕರ ಚಟರ್ಜಿ ಅವರು ಹೇಳಿದ್ದಾರೆ.

**ಶಂಕರ ಚಟರ್ಜಿ:**

ಕೋಲ್ಕತಾದಲ್ಲಿ ಜನಿಸಿ, ಸದ್ಯ ಅಮೆರಿಕದ ಟೆಕ್ಸಾಸ್ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಪಳೆಯುಳಿಕೆ ತಜ್ಞರಾಗಿರುವ ಚಟರ್ಜಿ ಅವರು ರಾಸಾಯನಿಕ ವಿಕಾಸವಾದಕ್ಕೆ ಸಂಬಂಧಿಸಿದ ಹಲವು ಸಿದ್ಧಾಂತಗಳನ್ನು ಪುರಾತನ ಭೂ ಗರ್ಭಶಾಸ್ತ್ರಕ್ಕೆ ಸಂಬಂಧಿಸಿದ ದಾಖಲೆಗಳ ಜತೆ ಹೋಲಿಕೆ ಮಾಡಿ ಈ ಉತ್ತರವನ್ನು ಕಂಡು ಕೊಂಡಿದ್ದಾರೆ. ಇದು ಡೈನೋಸಾರ್ ಪತ್ತೆ ಹಚ್ಚಿದ್ದಕ್ಕಿಂತ ದೊಡ್ಡ ಸಂಶೋಧನೆ ಎಂದು ಅವರು ಬಣ್ಣಿಸುತ್ತಾರೆ. ಭೂಮಿ ಸೃಷ್ಟಿಯಾದಾಗ, ಜೀವಿಗಳ ವಾಸಕ್ಕೆ ಯೋಗ್ಯವಾಗಿರಲಿಲ್ಲ. 1 ಶತಕೋಟಿ ವರ್ಷಗಳ ನಂತರ ಜೀವಿಗಳ ವಾಸಯೋಗ್ಯ ತಾಣವಾಗಿ ಪರಿವರ್ತನೆಯಾಯಿತು ಎಂದು ಚಟರ್ಜಿ ವಾದ ಮಂಡಿಸಿದ್ದಾರೆ.

## ಕರ್ನಾಟಕ ಸೇರಿ ಆರು ರಾಜ್ಯಗಳಲ್ಲಿ ಗಣಿಗಾರಿಕೆ ನಿಷೇಧಿಸಲು ಕೇಂದ್ರ ಪರಿಸರ ಸಚಿವಾಲಯ ಸೂಚನೆ

ಜೀವವೈವಿಧ್ಯದ ಸೂಕ್ಷ್ಮ ತಾಣ ಪಶ್ಚಿಮಘಟ್ಟದ 60 ಸಾವಿರ ಚದರ ಕಿ.ಮೀ. ವ್ಯಾಪ್ತಿಯಲ್ಲಿ ಗಣಿಗಾರಿಕೆ ಮತ್ತು ಕಲ್ಲು ಗಣಿಗಾರಿಕೆ (ಕ್ವಾರಿ) ನಿಷೇಧ ಸೇರಿದಂತೆ ಅಭಿವೃದ್ಧಿ ಚಟುವಟಿಕೆಯನ್ನು ಕೂಡಲೇ ಸ್ಥಗಿತಗೊಳಿಸುವಂತೆ ಕೇಂದ್ರ ಪರಿಸರ ಸಚಿವಾಲಯವು ಕರ್ನಾಟಕ ಸೇರಿ ಆರು ರಾಜ್ಯಗಳಿಗೆ ಸೂಚಿಸಿದೆ.

**ಎಲ್ಲೆಲ್ಲಿ?**

ಪಶ್ಚಿಮಘಟ್ಟ ಸಂರಕ್ಷಣೆ ಕುರಿತಂತೆ ಯೋಜನಾ ಆಯೋಗದ ಸದಸ್ಯ, ಬಾಹ್ಯಾಕಾಶ ವಿಜ್ಞಾನಿ ಕೆ. ಕಸ್ತೂರಿರಂಗನ್ ಅವರ ನೇತೃತ್ವದ ಉನ್ನತ ಸಮಿತಿ ಸಲ್ಲಿಸಿದ ವರದಿಯನ್ನು ಸರ್ಕಾರ ಇತ್ತೀಚೆಗೆ ಅಂಗೀಕರಿಸಿದೆ. ಈ ಹಿನ್ನೆಲೆಯಲ್ಲಿ ಪರಿಸರ

ಸಚಿವಾಲಯವು ಈ ನಿರ್ದೇಶನ ನೀಡಿದೆ. ಕರ್ನಾಟಕ, ಕೇರಳ, ತಮಿಳುನಾಡು, ಗೋವಾ, ಮಹಾರಾಷ್ಟ್ರ ಮತ್ತು ಗುಜರಾತ್‌ಗಳಿಗೆ ಈ ಸೂಚನೆ ರವಾನಿಸಿರುವ ಸಚಿವಾಲಯವು, 'ಈ ನಿರ್ದೇಶನವನ್ನು ಕೂಡಲೇ ಜಾರಿ ಮಾಡಬೇಕು ಮತ್ತು ಮುಂದಿನ ಆದೇಶ ಬರುವುವರೆಗೂ ಇದು ಪಾಲನೆಯಲ್ಲಿರಬೇಕು' ಎಂದು ಹೇಳಿದೆ. 'ಯಾವುದೇ ವಿಧದಲ್ಲಿ ಈ ಸೂಚನೆಯ ಉಲ್ಲಂಘನೆಯಾದರೂ ಪರಿಸರ (ಸಂರಕ್ಷಣೆ) ಕಾಯ್ದೆ 1986ರ ಅನ್ವಯ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ತಿಳಿಸಿದೆ.

**ಸಮಿತಿಯ ಶಿಫಾರಸು:**

- ಕಸ್ತೂರಿರಂಗನ್ ಅವರ ನೇತೃತ್ವದ ಸಮಿತಿಯ ವರದಿಯಲ್ಲಿನ ಶಿಫಾರಸುಗಳನ್ನು ನಿಗದಿತ ಕಾಲಮಿತಿಯಲ್ಲಿ ಅನುಷ್ಠಾನ ಮಾಡುವ ಬಗ್ಗೆ ನಿಗಾ ಇರಿಸಲು ಉನ್ನತಮಟ್ಟದ ಸಮಿತಿ ರಚಿಸಲಾಗುವುದು ಎಂದು ಸಚಿವಾಲಯ ಹೇಳಿದೆ.
- ಕಸ್ತೂರಿರಂಗನ್ ನೇತೃತ್ವದ 10 ಸದಸ್ಯರ ಉನ್ನತ ಸಮಿತಿಯು ಜೀವವೈವಿಧ್ಯದ ಉತ್ಕೃಷ್ಟ ಭಂಡಾರ ಎಂದು ಗುರುತಿಸಿದ ಪಶ್ಚಿಮಘಟ್ಟದ ಶೇ 37ರಷ್ಟು ನೈಸರ್ಗಿಕ ಭೂಪ್ರದೇಶದಲ್ಲಿ ಎಲ್ಲ ರೀತಿಯ ಅಭಿವೃದ್ಧಿ ಚಟುವಟಿಕೆಯನ್ನು ನಿಷೇಧಿಸುವಂತೆ ಶಿಫಾರಸು ಮಾಡಿತ್ತು.
- ಈ ಸಮಿತಿಯು ಪಶ್ಚಿಮಘಟ್ಟದಲ್ಲಿ ಕಡಿಮೆ ಪ್ರಮಾಣದಲ್ಲಿ ಅರಣ್ಯ ವಿಘಟನೆ, ಕಡಿಮೆ ಜನ ಸಾಂದ್ರತೆ, ಸಂರಕ್ಷಿತ ಪ್ರದೇಶ, ವಿಶ್ವಪಾರಂಪರಿಕ ತಾಣದ ಪಟ್ಟಿಗೆ ಸೇರಿರುವ ಪ್ರದೇಶ, ಹುಲಿ ಮತ್ತು ಆನೆಗಳ ಪಥಗಳನ್ನು ಜೀವವೈವಿಧ್ಯದ ಸೂಕ್ಷ್ಮ ವಲಯ ಎಂದು ಗುರುತಿಸಿದೆ.
- ನಿಷೇಧಿತ ಅಭಿವೃದ್ಧಿ ಚಟುವಟಿಕೆಯಲ್ಲಿ ಗಣಿಗಾರಿಕೆ, ಕಲ್ಲುಗಣಿಗಾರಿಕೆ (ಕ್ವಾರಿ), ಮರಳು ಗಣಿಗಾರಿಕೆ, ಉಷ್ಣ ವಿದ್ಯುತ್ ಸ್ಥಾವರ, 20 ಸಾವಿರ ಚದರ ಮೀಟರ್ ಮತ್ತು ಅದಕ್ಕೂ ಹೆಚ್ಚಿನ ಅಳತೆಯ ಕಟ್ಟಡ ಹಾಗೂ ಇನ್ನಿತರ ನಿರ್ಮಾಣ ಕಾರ್ಯ, 50 ಹೆಕ್ಟೇರ್ ವ್ಯಾಪ್ತಿಯ ಟೌನ್‌ಶಿಪ್ ಮತ್ತು ಪ್ರದೇಶ ಅಭಿವೃದ್ಧಿ ಯೋಜನೆಗಳು ಅಥವಾ 1.50 ಲಕ್ಷ ಚದರ ಮೀಟರ್ ವ್ಯಾಪ್ತಿ ಮತ್ತು ಅದಕ್ಕೂ ಹೆಚ್ಚಿನ ನಿರ್ಮಾಣ ಕಾರ್ಯವನ್ನು ಒಳಗೊಂಡ ಯೋಜನೆಗಳನ್ನು ನಿರ್ಬಂಧಿಸಿದೆ.

ಈ ಸೂಚನೆಯಂತೆ ಅಭಿವೃದ್ಧಿ ಕಾರ್ಯಗಳಿಗೆ ನಿರ್ಬಂಧ ಹೇರಲಾಗಿರುವ 60 ಸಾವಿರ ಚ.ಕಿ.ಮೀ. ವ್ಯಾಪ್ತಿಯಲ್ಲಿ ಈಗಾಗಲೇ ಸ್ಥಾಪಿತವಾಗಿರುವ ಇಂತಹ ಕೈಗಾರಿಕೆಗಳನ್ನು ಕೂಡಲೇ ಮುಚ್ಚಬೇಕಾಗುತ್ತದೆ

**ಚಂದ್ರನ ಅಂಗಳದಲ್ಲಿ ಸೊಪ್ಪು-ತರಕಾರಿ ಬೆಳೆಸುವ ಯೋಜನೆಗೆ ಕೈಹಾಕಿದ ನಾಸಾ**

ಚಂದ್ರನ ಅಂಗಳದಲ್ಲಿ 2015 ರ ಹೊತ್ತಿಗೆ ಸಣ್ಣ ಗಾತ್ರದ ಸೊಪ್ಪು- ತರಕಾರಿ ಗಿಡಗಳನ್ನು ಬೆಳೆಸುವ ಹೊಸ ಯೋಜನೆಯನ್ನು ನಾಸಾ ಹಾಕಿಕೊಂಡಿದೆ. ಭೂಮಿಯ ಉಪಗ್ರಹವಾದ ಚಂದ್ರನಲ್ಲಿ ಮಾನವ ಜೀವಿಸಲು ಸಾಧ್ಯವೇ ಎನ್ನುವುದನ್ನು ಖಾತರಿ ಪಡಿಸಿಕೊಳ್ಳುವ ಸಲುವಾಗಿ ನಾಸಾ ಈ ಯೋಜನೆ ಹಾಕಿಕೊಂಡಿದ್ದು,

**ಏನಿದು ಯೋಜನೆ:**

- ಮೊದಲಿಗೆ 'ಟರ್ನಿಪ್' (ಸೊಪ್ಪಿನ ಗಿಡ) ಮತ್ತು 'ಬ್ಯಾಸಿಲ್' (ಸುವಾಸನಾ ಸಸ್ಯ) ಗಿಡಗಳನ್ನು ಬೆಳೆಸಲು ಚಿಂತಿಸಿದೆ.
- ಮುಂದಿನ ಎರಡು ವರ್ಷಗಳಲ್ಲಿ ಬಾಹ್ಯಾಕಾಶ ನೌಕೆಯ ಮೂಲಕ ಈ ಗಿಡಗಳ ಬೀಜಗಳನ್ನು ಚಂದ್ರನಲ್ಲಿಗೆ ರವಾನಿಸುವ ಯೋಜನೆ ಇದಾಗಿದೆ.
- ಇದಕ್ಕಾಗಿ 'ಚಂದ್ರನಲ್ಲಿ ಸಸ್ಯ ನೆಲೆ' ಕುರಿತ ತಂಡವು ಈಗಾಗಲೇ ಸಂಶೋಧನಾ ಕಾರ್ಯ ಕೈಗೊಂಡಿದೆ ಎಂದು ನಾಸಾ ಹೇಳಿದೆ.
- ಚಂದ್ರನಲ್ಲಿಗೆ ಈ ಗಿಡಗಳ ಬೀಜ ಗಳನ್ನು ರವಾನಿಸಲು ಕಾಫಿ ಬೆರೆಸಲು ಬಳಸುವ ಕೈಪಾತ್ರೆ ಗಾತ್ರದ ಸಾಧನ ಗಳನ್ನು (ಕುಂಡ) ಬಳಸಲು ಉದ್ದೇಶಿಸಲಾಗಿದೆ. ಈ ಕುಂಡವು ವೈಜ್ಞಾನಿಕವಾಗಿದ್ದು, ಹವಾಮಾನ ವೈಪರೀತ್ಯದಿಂದ ಬೀಜಗಳನ್ನು ರಕ್ಷಿಸುತ್ತವೆ.
- ಇದರಲ್ಲಿ ಕ್ಯಾಮೆರಾ, ಸೂಕ್ಷ್ಮಸಂವೇದಿಗಳು ಮತ್ತು ಎಲೆಕ್ಟ್ರಾನಿಕ್ ಸಾಧನಗಳನ್ನು ಅಳವಡಿಸುವುದರಿಂದ ಚಂದ್ರನಲ್ಲಿ ಬೀಜ ಮೊಳಕೆ ಒಡೆಯುವುದರಿಂದ ಹಿಡಿದು ಅದರ ಪ್ರತಿಯೊಂದು ಬೆಳವಣಿಗೆಯ ಸೂಕ್ಷ್ಮವನ್ನು ಅರಿಯಲು ಸಾಧ್ಯವಾಗುತ್ತದೆ ಎಂದು ಎಂದು ನಾಸಾ ತಿಳಿಸಿದೆ.
- ಬೀಜ ಚಿಗುರೊಡೆಯಲು ಬೇಕಾದ ನೀರು ಪೂರೈಕೆಗಾಗಿ ನೀರು ತುಂಬಿದ ಕಾಗದವನ್ನು ಈ ಕುಂಡದಲ್ಲಿ ಇರಿಸಲಾಗುವುದು. ಬೀಜದ ಮೊಳಕೆಗೆ ಅಗತ್ಯವಾದ ಬೆಳಕಿಗೆ ಸೂರ್ಯನನ್ನು ಆಶ್ರಯಿಸಲಾಗುವುದು. ಕನಿಷ್ಠ 5 ದಿನಗಳಲ್ಲಿ ಬೀಜ ಮೊಳಕೆಯೊಡೆಯುವ ನಿರೀಕ್ಷೆ ಇದೆ ಎಂದು ನಾಸಾ ಹೇಳಿದೆ.

**ಚಂದ್ರನಲ್ಲಿ ಸೋಲಾರ್ ಬಳಸಿ ಭೂಮಿಗೆ ವಿದ್ಯುತ್ ಪಡೆಯುವ ಹೊಸ ಸಂಶೋಧನೆ**

ಇಷ್ಟು ದಿನ ಬೆಳದಿಂಗಳನ್ನು ನೀಡುತ್ತಿದ್ದ ಚಂದ್ರ ಇನ್ನು ಮುಂದೆ ನಮ್ಮ ಮನೆಯ ವಿದ್ಯುತ್ ಬಲ್ಬ್ ಗಳನ್ನೂ ಬೆಳಗಲಿದ್ದಾನೆ. ಇದು ಕೇವಲ ವಿಜ್ಞಾನದ ಕಲ್ಪನೆಯಲ್ಲ. ಜಪಾನಿನ ಕಂಪನಿಯೊಂದು ಚಂದ್ರನ ಮೇಲೆ ಮಾಡಹೊರಟಿರುವ ಮಹತ್ ಸಾಧನೆ. ಚಂದ್ರನ ಅಂಗಳದಲ್ಲಿ ಸೋಲಾರ್ ಫಲಕದ ಬೃಹತ್ ವೃತ್ತವನ್ನು ನಿರ್ಮಿಸಿ ಅದರಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು ಮನೆ ಮನೆಗೆ ಪೂರೈಸುವ ಕನಸನ್ನು ಬೆನ್ನೇರಿ ಹೊರಟಿದೆ ಜಪಾನ್.

ಜಪಾನಿನ ಶಿಮಿಜು ಕಂಪನಿಯ ಲೂನಾ (ಚಂದ್ರ) ಯೋಜನೆ, ಚಂದ್ರನ ಸಮಭಾಜಕ ವೃತ್ತದಲ್ಲಿ 6,790 ಮೈಲಿ ಸೋಲಾರ್ ಫಲಕವನ್ನು ಹಾಸಿ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಿದೆ. ಪ್ರತಿಯೊಂದು ಸೋಲಾರ್ ಫಲಕ ಸುಮಾರು 250 ಮೈಲಿ ಅಗಲವಾಗಿರಲಿದೆ. ಒಮ್ಮೆ ಸೋಲಾರ್ ವೃತ್ತ ನಿರ್ಮಾಣಗೊಂಡರೆ ಅಕ್ಷಯ ವಿದ್ಯುತ್ ಸಂಪನ್ಮೂಲವನ್ನು ನೀಡಲಿದೆ. ಈ ಯೋಜನೆಯಿಂದ 13000 ಟೆರಾವ್ಯಾಟ್ ನಿರಂತರ ವಿದ್ಯುತ್ ಉತ್ಪಾದನೆಯನ್ನು ನಿರೀಕ್ಷಿಸಲಾಗುತ್ತಿದೆ. ಇದರಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ವಿದ್ಯುತ್‌ಕಾಂತೀಯ ಅಲೆಗಳು (ಮೈಕ್ರೋವೇವ್) ಮತ್ತು ಲೇಸರ್ ಕಿರಣದ ಮೂಲಕ

ನೇರವಾಗಿ ಅಗತ್ಯವಿರುವ ದೇಶಗಳಿಗೆ ಪೂರೈಸಲಾಗುತ್ತದೆ. ಅಲ್ಲದೆ ಈಗಿನ ವಿದ್ಯುತ್ ಮೂಲಗಳಿಂದ ಉತ್ಪಾದನೆಯಾಗುತ್ತಿರುವ ಕಾರ್ಬನ್ ಡೈಆಕ್ಸೈಡ್‌ನಿಂದ ಹೆಚ್ಚುತ್ತಿರುವ ಜಾಗತಿಕ ತಾಪಮಾನ ಏರಿಕೆಯನ್ನು ತಡೆಗಟ್ಟುವಲ್ಲಿ ಸೌರ ವಿದ್ಯುತ್ ಕಾಣಿಕೆ ನೀಡಲಿದೆ.

**ಯೋಜನೆ ಆರಂಭಿಸಿದ್ದು ಏಕೆ?**

2011 ರಲ್ಲಿ ಸಂಭವಿಸಿದ ಭೀಕರ ಭೂಕಂಪ ಜಪಾನಿನ ಪುಕುಶಿಮಾ ಅಣು ವಿದ್ಯುತ್ ಸ್ಥಾವರದಲ್ಲಿ ಭಾರೀ ಪ್ರಮಾಣದ ವಿಕಿರಣ ಸೋರಿಕೆಗೆ ಕಾರಣವಾಗಿತ್ತು. ಈ ಅಪಾಯದ ಕರೆಗಂಟೆ ಬಾರಿಸುವವರೆಗೂ ಅಣು ವಿದ್ಯುತ್ ಮೇಲೆಯೇ ಜಪಾನ್ ಅವಲಂಬಿತವಾಗಿತ್ತು. ಇದರಿಂದಾಗಿ ವಿದ್ಯುತ್ ಉತ್ಪಾದನೆಯಲ್ಲಿ ಸುರಕ್ಷಿತ ಪರ್ಯಾಯ ಮಾರ್ಗವೊಂದನ್ನು ಕಂಡುಕೊಳ್ಳುವುದು ಜಪಾನಿಗೆ ಅನಿವಾರ್ಯವಾಗಿತ್ತು. ಈ ನಿಟ್ಟಿನಲ್ಲಿ ಆರಂಭವಾಗಿದ್ದೇ ಚಂದ್ರನಿಂದ ವಿದ್ಯುತ್ ಉತ್ಪಾದಿಸುವ ಯೋಜನೆ.

**ಏನಿದು ಯೋಜನೆ?**

ಭೂಮಿಯಿಂದ ಸುಮಾರು 4 ಲಕ್ಷ ಕಿ.ಮೀ. ದೂರದಲ್ಲಿರುವ ಚಂದ್ರನ ಮೇಲೆ ಗಗನಯಾತ್ರಿಗಳನ್ನು ಇಳಿಸಿ, ರೋಬೋಟ್‌ಗಳ ಸಹಾಯದಿಂದ ಸೌರ ಫಲಕವನ್ನು ಕೂರಿಸುವ ಕಾರ್ಯವನ್ನು ಜಪಾನಿನ ಶಿಮಿಜು ಕಂಪನಿ ಆರಂಭಿಸಲಿದೆ. ರೋಬೋಟ್ ಮತ್ತು ಸ್ವಯಂಚಾಲಿತ ಯಂತ್ರಗಳು ಯೋಜನೆಗೆ ಅಗತ್ಯವಿರುವ ನೀರು, ಕಾಂಕ್ರೀಟ್, ಆಮ್ಲಜನಕ ಮತ್ತು ಪಿಂಗಾಣಿಯಂತಹ ಅಗತ್ಯ ವಸ್ತುಗಳನ್ನು ಚಂದ್ರನ ಮಣ್ಣನ್ನೇ ಉಪಯೋಗಿಸಿ ನಿರ್ಮಾಣ ಮಾಡಲಿದೆ. ನಿರ್ವಹಣೆಗೆ ಅಗತ್ಯ ವಿರುವ ವಸ್ತುಗಳನ್ನು ಸಾಗಿಸಲು ಚಂದ್ರನ ಮೇಲೆ ರೈಲ್ವೆ ವ್ಯವಸ್ಥೆ ಕಲ್ಪಿಸುವ ಯೋಜನೆಯನ್ನೂ ರೂಪಿಸಲಾಗಿದೆಯಂತೆ.

**ವಿದ್ಯುತ್ ಉತ್ಪಾದನೆ ಹೇಗೆ?**

250 ಮೈಲಿ ಅಗಲದ ಸೌರ ಫಲಕದ ಪಟ್ಟಿಯನ್ನು ಚಂದ್ರನ ಮೇಲ್ಮೈ ಸುತ್ತಲೂ 6,790 ಮೈಲಿವರೆಗೆ ಜೋಡಿಸಲಾಗುತ್ತದೆ. ಒಂದು ಭಾಗ ಸೂರ್ಯನತ್ತ ಮುಖ ಮಾಡಿದರೆ, ಇನ್ನೊಂದು ಭಾಗ ಭೂಮಿಯತ್ತ ಇರುತ್ತದೆ. ಸೌರ ಫಲಕದ ಕೆಳಭಾಗದಲ್ಲಿ ಅಳವಡಿಸಲಾಗಿರುವ ಕೇಬಲ್‌ಗಳು ಸೂರ್ಯನಿಗೆ ಅಭಿಮುಖವಾಗಿರುವ ಭಾಗದಿಂದ ತಯಾರಾದ ವಿದ್ಯುತ್ತನ್ನು ಭೂಮಿಯ ಭಾಗಕ್ಕೆ ವರ್ಗಾಯಿಸುತ್ತದೆ. ಬಳಿಕ ವಿದ್ಯುತ್ಕಾಂತೀಯ ತರಂಗಗಳ ಮೂಲಕ 13 ಮೈಲಿ ವ್ಯಾಸದ ಮೈಕ್ರೋವೇವ್ ಆಯಂಟೆನಾಗಳು ವಿದ್ಯುತ್ತನ್ನು ಭೂಮಿಗೆ ರವಾನಿಸುತ್ತದೆ. ಸಂಕೇತಾಕ್ಷರಗಳನ್ನು ಬಳಸಿ ಭೂಮಿಯ ನಿರ್ದಿಷ್ಟ ಸ್ಥಳಗಳಿಗೆ ವಿದ್ಯುತ್ ಪೂರೈಸಲಾಗುವುದು.

# ಕ್ರೀಡೆ

## 2018 ರ ಹಾಕಿ ವಿಶ್ವಕಪ್ ಪಂದ್ಯಾವಳಿಗಳ ಆತಿಥ್ಯವಹಿಸಲಿರುವ ಭಾರತ

ಕಳೆದ ಬಾರಿಯ ಹಾಕಿ ವಿಶ್ವಕಪ್ ಪಂದ್ಯಾವಳಿಯನ್ನು ಯಶಸ್ವಿಯಾಗಿ ಆಯೋಜಿಸಿದ್ದ ಭಾರತ ಈಗ 2018 ರ ಪುರುಷರ ಹಾಕಿ ವಿಶ್ವಕಪ್ ಪಂದ್ಯಾವಳಿಯ ಆತಿಥ್ಯ ವಹಿಸಿಕೊಳ್ಳುವ ಅವಕಾಶ ಪಡೆದುಕೊಂಡಿದೆ.2018 ರ ವಿಶ್ವಕಪ್ ಪಂದ್ಯಾವಳಿಯಲ್ಲಿ ಒಟ್ಟು 16 ತಂಡಗಳು ಪುರುಷರ ಹಾಗೂ ಮಹಿಳಾ ವಿಭಾಗಗಳೆರಡರಲ್ಲೂ ಭಾಗವಹಿಸುತ್ತಿವೆ. ಮಹಿಳಾ ವಿಶ್ವಕಪ್ ಪಂದ್ಯಾವಳಿಯನ್ನು ಇಂಗ್ಲೆಂಡ್‌ನಲ್ಲಿ ಆಯೋಜಿಸಲಾಗುತ್ತಿದ್ದು, ಪುರುಷರ ಹಾಕಿ ವಿಶ್ವಕಪ್ ಪಂದ್ಯಾವಳಿಯ ಆತಿಥ್ಯವನ್ನು ಭಾರತ ವಹಿಸಿಕೊಳ್ಳುವ ಮೂಲಕ ಎಂಟು ವರ್ಷಗಳಲ್ಲಿ ಎರಡನೇ ಬಾರಿಗೆ ವಿಶ್ವಕಪ್ ಆತಿಥ್ಯ ವಹಿಸಿಕೊಂಡಂತಾಗಿದೆ.

**ಮಹಿಳಾ ವಿಶ್ವಕಪ್:**

ಮಹಿಳಾ ವಿಶ್ವಕಪ್ ಹಾಕಿ ಪಂದ್ಯಾವಳಿಯನ್ನು 2018ರ ಜುಲೈ 7ರಿಂದ 21ರವರೆಗೆ ಹಾಗೂ ಪುರುಷರ ವಿಶ್ವಕಪ್ ಪಂದ್ಯಾವಳಿಯನ್ನು ಡಿಸೆಂಬರ್ 1ರಿಂದ 16ರವರೆಗೆ ನಡೆಸಲು ನಿರ್ಧರಿಸಲಾಗಿದೆ. 2018ರ ಹಾಕಿ ವಿಶ್ವಕಪ್ ಪಂದ್ಯಾವಳಿಯ ಆತಿಥ್ಯವನ್ನು ಭಾರತ ಹಾಗೂ ಇಂಗ್ಲೆಂಡ್ ವಹಿಸಿಕೊಳ್ಳಲಿದೆ ಎಂದು ಪ್ರಕಟಿಸಲು ಅಂತಾರಾಷ್ಟ್ರೀಯ ಹಾಕಿ ಸಂಸ್ಥೆ ಸಂತೋಷ ಪಡುತ್ತಿದೆ. ಮಹಿಳೆಯರ ವಿಶ್ವಕಪ್ ಹಾಕಿ ಪಂದ್ಯಾವಳಿಯ ಆತಿಥ್ಯಕ್ಕೆ ನಡೆದ ಬಿಡ್‌ನಲ್ಲಿ ಇಂಗ್ಲೆಂಡ್ ಮೇಲುಗೈ ಸಾಧಿಸಿದರೆ, ಹಾಕಿ ಇಂಡಿಯಾ ಪುರುಷರ ಹಾಕಿ ವಿಶ್ವಕಪ್ ಆತಿಥ್ಯದ ಬಿಡ್ ತನ್ನದಾಗಿಸಿಕೊಂಡಿದೆ ಎಂದು ಅಂತಾರಾಷ್ಟ್ರೀಯ ಹಾಕಿ ಸಂಸ್ಥೆ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

**ಪ್ರಮುಖ ಪಂದ್ಯಾವಳಿಗಳು ಭಾರತ ಪಾಲು:**

2018 ರ ಪುರುಷರ ಹಾಕಿ ವಿಶ್ವಕಪ್ ಪಂದ್ಯಾವಳಿ ಸೇರಿದಂತೆ ಭಾರತ 4 ಪ್ರಮುಖ ಪಂದ್ಯಾವಳಿಯನ್ನು ಆಯೋಜಿಸಲಿದೆ. ಅಂತಾರಾಷ್ಟ್ರೀಯ ಹಾಕಿ ಸಂಸ್ಥೆ (ಎಫ್‌ಐಎಚ್) 2015 ರಿಂದ 2018ರ ವರೆಗಿನ ಹಾಕಿ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಈ ಮೂಲಕ ಭಾರತ 2015 ಮತ್ತು 2017ರ ವಿಶ್ವ ಪುರುಷರ ಹಾಕಿ ವಿಶ್ವ ಲೀಗ್ ಫೈನಲ್ ಪಂದ್ಯಾವಳಿ ಮತ್ತು 2016ರ ಕಿರಿಯರ ಹಾಕಿ ವಿಶ್ವಕಪ್ ಹಾಗೂ 2018 ಪುರುಷರ ಹಾಕಿ ವಿಶ್ವಕಪ್ ಪಂದ್ಯಾವಳಿಗಳ ಆತಿಥ್ಯವನ್ನು ವಹಿಸಿಕೊಳ್ಳಲಿದೆ.

## ವಿಶ್ವಕಪ್ ಶೂಟಿಂಗ್ ನಲ್ಲಿ ಇತಿಹಾಸ ನಿರ್ಮಿಸಿದ ಗುರಿಕಾರ್ತಿ ಹೀನಾ ಸಿಂಧು

ಭರವಸೆಯ ಮಹಿಳಾ ಗುರಿಕಾರ್ತಿ ಹೀನಾ ಸಿಂಧು ಜರ್ಮನಿಯ ಮ್ಯುನಿಚ್ನಲ್ಲಿ ನಡೆದ ಐಎಸ್‌ಎಸ್‌ಎಫ್ ವಿಶ್ವ ಕಪ್ ಶೂಟಿಂಗ್ ಫೈನಲ್ಸ್ನಲ್ಲಿ ಚಿನ್ನದ ಪದಕ ಗೆದ್ದುಕೊಳ್ಳುವ ಮೂಲಕ ಪಿಸ್ತೂಲ್ ವಿಭಾಗದಲ್ಲಿ ಈ ಸಾಧನೆ ಮಾಡಿದ ಭಾರತದ ಪ್ರಥಮ ಮಹಿಳೆ ಎಂಬ ಇತಿಹಾಸ ನಿರ್ಮಿಸಿದ್ದಾರೆ. ಹೀನಾ ಸಿಂಧು ಅವರು ತಮಗೆ ತೀವ್ರ ಸ್ಪರ್ಧೆಯೊಡ್ಡಿದ್ದ ಒಲಿಂಪಿಕ್ಸ್ ಡಬಲ್ ಚಾಂಪಿಯನ್ ಚೀನಾದ ಗು ವೆಂಜುನ್, ವಿಶ್ವ ಚಾಂಪಿಯನ್ ಸರ್ಬಿಯಾದ ಅರುನೊವಿಚ್ ಜೊರಾನಾ ಹಾಗೂ ಒಲಿಂಪಿಕ್ಸ್ ಡಬಲ್ ಪದಕ ವಿಜೇತೆ ಉಕ್ರೇನಿನ ಓಲೆನಾ ಕೊಸ್ಟೆವಿಚ್ ಅವರನ್ನು ಪರಾಭವಗೊಳಿಸಿ ಈ ಸಾಧನೆ ಮಾಡಿದರು.

**ಚಿನ್ನದ ಪದಕ:**

ಇದಕ್ಕೆ ಮುನ್ನ ಈ ಚಾಂಪಿಯನ್ಷಿಪ್ನಲ್ಲಿ ಅಂಜಲಿ ಭಾಗವತ್ (2002ರಲ್ಲಿ) ಹಾಗೂ ಗಗನ್ ನಾರಂಗ್ (2008ರಲ್ಲಿ) ಅವರು ರೈಫಲ್ ಶೂಟಿಂಗ್ನಲ್ಲಿ ಚಿನ್ನದ ಪದಕ ಜಯಿಸಿದ್ದರು. ಆದರೆ, ಪಿಸ್ತೂಲ್ ವಿಭಾಗದಲ್ಲಿ ಮಾತ್ರ ಹೀನಾ ಸಿಂಧು ಮೊದಲ ಬಾರಿಗೆ ತವರಿಗೆ ಚಿನ್ನದ ಪದಕ ಜಯಿಸಿಕೊಟ್ಟಿದ್ದಾರೆ.

**ಅದ್ಭುತ ಪ್ರದರ್ಶನ:**

ವರ್ಷಕ್ಕೊಮ್ಮೆ ನಡೆಯಲಿರುವ ಈ ಟೂರ್ನಿಯಲ್ಲಿ ವಿಶ್ವದ ಅಗ್ರಮಾನ್ಯ ಗುರಿಕಾರ್ತಿಯರು ಪಾಲ್ಗೊಳ್ಳುತ್ತಾರೆ. ಅರ್ಹತಾ ಸುತ್ತಿನಲ್ಲಿ ಹೀನಾ ಅವರು 384 ಅಂಕ ಗಳಿಸಿ ಮೂರನೇ ಸ್ಥಾನ ಪಡೆದಿದ್ದರು. ಆದರೆ ಫೈನಲ್ ನಲ್ಲಿ ಅವರು ಅದ್ಭುತ ಪ್ರದರ್ಶನ ನೀಡುವ ಮೂಲಕ ಅಗ್ರಸ್ಥಾನಕ್ಕೆ ಲಗ್ಗೆ ಇಟ್ಟು ಚಿನ್ನದ ಪದಕಕ್ಕೆ ಭಾಜನರಾದರು. ಈ ಸಾಲಿನ ಆರಂಭದಲ್ಲಿ ಕಾಮನ್ವೆಲ್ತ್ ಗೇಮ್ಸ್ ಚಿನ್ನದ ಪದಕ ವಿಜೇತ ರೋನಕ್ ಪಂಡಿತ್ ಅವರನ್ನು ವಿವಾಹವಾಗಿದ್ದ ಹೀನಾ ಅವರಿಗೆ ಮ್ಯುನಿಚ್ನಲ್ಲಿ ಪತಿಯೇ ಕೋಚ್ ಆಗಿದ್ದರು. ಕಳೆದ ಏಪ್ರಿಲ್ ಮತ್ತು ಮೇ ತಿಂಗಳು ಕೊರಿಯಾ ಮತ್ತು ಜರ್ಮನಿಯಲ್ಲಿ ನಡೆದ ಅರ್ಹತಾ ಸುತ್ತಿನ ಸ್ಪರ್ಧೆಗಳಲ್ಲಿ ಹೀನಾ ಸಿಂಧು ಉತ್ತಮ ಪ್ರದರ್ಶನ ನೀಡುವ ಮೂಲಕ ವಿಶ್ವಕಪ್ ಗೆ ಅರ್ಹತೆ ಪಡೆದುಕೊಂಡಿದ್ದರು.

## ಉಸೇನ್ ಬೋಲ್ಟ್ ಮತ್ತು ಶೆಲ್ಲಿ ಆಯನ್ ಫ್ರೇಸರ್ ಪ್ರೈಸ್ ವಿಶ್ವದ ವರ್ಷದ ಶ್ರೇಷ್ಠ ಅಥ್ಲೀಟ್ ಗಳು

ಜಮೈಕಾದ ವೇಗದ ಓಟಗಾರರಾದ ಉಸೇನ್ ಬೋಲ್ಟ್ ಮತ್ತು ಶೆಲ್ಲಿ ಆಯನ್ ಫ್ರೇಸರ್ ಪ್ರೈಸ್ ವಿಶ್ವದ ವರ್ಷದ ಶ್ರೇಷ್ಠ ಪುರುಷ ಮತ್ತು ವನಿತಾ ಅಥ್ಲೀಟ್‌ಗಳಾಗಿ ಆಯ್ಕೆಯಾಗಿದ್ದಾರೆ. ಐಎಎಎಫ್ ಈ ಪ್ರಶಸ್ತಿ ಪ್ರಕಟಿಸಿದೆ.

**ಉಸೇನ್ ಬೋಲ್ಟ್:**

- ಈ ಹಿಂದೆ 2008, 2009, 2011 ಮತ್ತು 2012ರಲ್ಲಿ ಈ ಪ್ರಶಸ್ತಿಗೆ ಪಾತ್ರರಾಗಿದ್ದ 27ರ ಹರೆಯದ ಬೋಲ್ಟ್ ಸತತ ಬಾರಿ ಪ್ರಶಸ್ತಿ ಗೆದ್ದ ಸಾಧನೆ ಮಾಡಿದ್ದಾರೆ.
- ಮಾಸ್ಕೋದಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ 100 ಮತ್ತು 200 ಮೀ. ಪ್ರಶಸ್ತಿಯನ್ನು ಉಳಿಸಿಕೊಳ್ಳಲು ಬೋಲ್ಟ್ ಯಶಸ್ವಿಯಾಗಿದ್ದರು.
- ಬೋಲ್ಟ್ 200 ಮೀ. ಸ್ಪರ್ಧೆಯನ್ನು ವಿಶ್ವದಾಖಲೆಯ ಸಮಯದೊಂದಿಗೆ (19.66ಸೆ.) ಜಯಿಸಿದ್ದರು.
- 4*100 ಮೀ. ರಿಲೇ ಸ್ಪರ್ಧೆಯಲ್ಲಿ ಜಮೈಕಾ ತಂಡಕ್ಕೆ ಚಿನ್ನ ದೊರಕಿಸಿಕೊಡುವ ಮೂಲಕ ಅವರು ಸ್ಪರ್ಧೆ ಮುಗಿಸಿದ್ದರು.
- ಶ್ರೇಷ್ಠ ಅಥ್ಲೀಟ್ ಪ್ರಶಸ್ತಿಗೆ ಬ್ರಿಟನ್‌ನ ಮೊ ಫರಾಹ ಅವರಿಂದ ಬೋಲ್ಟ್ ಸ್ಪರ್ಧೆ ಎದುರಿಸಿದ್ದರು. ಲಂಡನ್ ಒಲಿಂಪಿಕ್ಸ್‌ನಲ್ಲಿ 5,000 ಮತ್ತು 10,000 ಮಿ.ನಲ್ಲಿ ಚಿನ್ನ ಜಯಿಸಿದ್ದ ಫರಾಹ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಎರಡು ಚಿನ್ನ ಜಯಿಸಿದ್ದರು.

**ಫ್ರೇಸರ್ ಪ್ರೈಸ್:**

- 26ರ ಹರೆಯದ ಫ್ರೇಸರ್ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ತನ್ನ 100 ಮೀ. ಪ್ರಶಸ್ತಿಯನ್ನು ಮರಳಿ ಪಡೆದಿದ್ದಾರೆ.
- ವರ್ಷದ ಅತೀ ವೇಗದ ಸಮಯದೊಂದಿಗೆ (10.71 ಸೆ.) ಅವರು ಈ ಸಾಧನೆ ಮಾಡಿದ್ದಾರೆ.
- ಜಮೈಕಾದಲ್ಲಿ ನಡೆದ ಕೂಟದಲ್ಲಿ ವರ್ಷದ ಅತೀ ವೇಗದ ಸಮಯದೊಂದಿಗೆ 200 ಮೀ. ಸ್ಪರ್ಧೆಯ ಚಿನ್ನ ಜಯಿಸಿದ್ದ ಅವರು ವಿಶ್ವ ಅಥ್ಲೆಟಿಕ್ಸ್‌ನಲ್ಲೂ ಚಿನ್ನ ಗೆದ್ದು ಸಂಭ್ರಮಿಸಿದ್ದಾರೆ.

**ಅತ್ಯಂತ ಕಿರಿಯ ವಯಸ್ಸಿನಲ್ಲೇ ದಾಖಲೆ ಬರೆದ ಕ್ರಿಕೆಟರ್ ಮುಂಬೈನ ಪೃಥ್ವಿ ಶಾ**

ಹ್ಯಾರೀಸ್ ಶೀಲ್ಡ್ ಅಂತರ್ ಶಾಲಾ ಮಟ್ಟದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಮುಂಬೈನ 15 ವರ್ಷದ ಪೃಥ್ವಿ ಶಾ ಅಜೇಯ 546 ರನ್ ಗಳಿಸುವ ಮೂಲಕ ದಾಖಲೆ ಬರೆದಿದ್ದು, ಕಿರಿಯ ವಯಸ್ಸಿನಲ್ಲೇ ಗಮನಾರ್ಹ ಪ್ರದರ್ಶನ ತೋರಿದ್ದಾರೆ. ಇಲ್ಲಿ ನಡೆದ ಪಂದ್ಯದಲ್ಲಿ ರಿಜ್ವಿ ಸ್ಪ್ರಿಂಗ್‌ಫೀಲ್ಡ್ ಶಾಲೆಯ ಪರ ಆಡಿದ ಪೃಥ್ವಿ, ಸೆಂಟ್ ಫ್ರಾನ್ಸಿಸ್ ಡಿ ಅಸೀಸ್ ಬೊರಿವಲಿ ವಿರುದ್ಧ ಅತ್ಯದ್ಭುತ ಪ್ರದರ್ಶನ ನೀಡಿದ್ದಾರೆ.

**ದಾಖಲೆ:**

ಪೃಥ್ವಿ 367 ನಿಮಿಷಗಳಲ್ಲಿ 330 ಎಸೆತಗಳನ್ನು ಎದುರಿಸಿ ಅಜೇಯ 546 ರನ್ ದಾಖಲಿಸಿದ್ದು, 85 ಬೌಂಡರಿ ಹಾಗೂ 5 ಸಿಕ್ಸರ್ ಬಾರಿಸಿದ್ದಾನೆ. ಪೃಥ್ವಿ ಮುಂಬೈ ಅಂಡರ್ 16 ತಂಡದ ನಾಯಕನಾಗಿದ್ದು, ಅಂತರ್‌ಶಾಲಾ ಪಂದ್ಯದಲ್ಲಿ 500ಕ್ಕೂ ಹೆಚ್ಚು ರನ್ ದಾಖಲಿಸಿರುವ ಶಾಲಾ ಕ್ರಿಕೆಟರ್ ಆಗಿದ್ದಾನೆ. ಈ ಮೂಲಕ ಭಾರತ ತಂಡದ ಮಾಜಿ ಆಟಗಾರ ವಾಸೀಮ್ ಜಾಫರ್ ಸೋದರ ಸಂಬಂಧಿಯಾದ ಅರ್ಮಾನ್ ಗಳಿಸಿದ್ದ 498 ರನ್ ದಾಖಲೆಯನ್ನು ಹಿಂದಿಕ್ಕಿದ್ದಾರೆ.

**ದಾಖಲೆ ಆಟಗಳು:**

- ಈ ಹಿಂದೆ 1933-34ನೇ ಸಾಲಿನಲ್ಲಿ ಸಿಐ ರೈಲ್ವೇಸ್ ಮತ್ತು ಸೆಂಟ್ ಕ್ಸೇವಿಯರ್ ಕಾಲೇಜು ಮಟ್ಟದ ಪಂದ್ಯದಲ್ಲಿ ದಾದಬಾಯ್ ಹವೆವಾಲ 515 ರನ್ ದಾಖಲಿಸಿದ್ದ ಭಾರತೀಯ ಆಟಗಾರನಾಗಿದ್ದರು.
- ಇನ್ನು ಪೃಥ್ವಿ ಅವರ ಇನಿಂಗ್ಸ್ ವಿಶ್ವದಲ್ಲಿ ಮೂರನೇ ಅತಿ ಗರಿಷ್ಠ ಮೊತ್ತವಾಗಿದೆ. ಮಾಹಿತಿ ಲಭ್ಯವಿರುವ ಪ್ರಕಾರ ಈ ಹಿಂದೆ ಎ.ಇ.ಜೆ. ಕೊಲಿನ್ ಇಂಗ್ಲೆಂಡ್‌ನಲ್ಲಿ 1899 ರಲ್ಲಿ 628 ರನ್ ದಾಖಲಿಸಿದ್ದರು. ನಂತರ 1901ರಲ್ಲಿ ಸಿ.ಜೆ. ಎಡಿ 566 ರನ್ ದಾಖಲಿಸಿದ್ದರು.
- ಕಳೆದ ಕೆಲವು ವರ್ಷಗಳಿಂದಲೇ ಮುಂಬೈ ಕ್ರಿಕೆಟ್ ವಲಯದಲ್ಲಿ ಪೃಥ್ವಿ ಸಾಮರ್ಥ್ಯದ ಬಗ್ಗೆ ಚರ್ಚೆಗಳು ನಡೆಯುತ್ತಿದ್ದು, ಕ್ರಿಕೆಟ್ ಸ್ಕಾಲರ್‌ಶಿಪ್ ಮೂಲಕ ಯುಕೆಗೆ ತೆರಳಿ ಗ್ಲೌಸ್ಟರ್‌ಶೈರ್ ಅಕಾಡೆಮಿಯಲ್ಲಿ ತರಬೇತಿ ಪಡೆದಿದ್ದಾನೆ.

**ಶಾಲಾಮಟ್ಟದ ರನ್ ದಾಖಲೆ ವೀರರು:**

- ಪೃಥ್ವಿ ಶಾ-546 ರನ್ (2013), ದಾದಬಾಯ್ ಹವೆವಾಲ-515 ರನ್ (1932-33), ಅರ್ಮಾನ್ ಜಾಫರ್-498 ರನ್ (2010), ವಿನೋದ್ ಕಾಂಬ್ಳಿ-349 ರನ್ (1988), ಸಚಿನ್ ತೆಂಡೂಲ್ಕರ್-326 ರನ್ (1988).

**WTA ವರ್ಷದ ಆಟಗಾರ್ತಿ: ಸೆರೆನಾ ವಿಲಿಯಮ್ಸ್"**

ವಿಶ್ವದ ನಂ.1 ಟೆನ್ನಿಸ್ ಆಟಗಾರ್ತಿ ಸೆರೆನಾ ವಿಲಿಯಮ್ಸ್ ಅವರನ್ನು WTA ವರ್ಷದ ಆಟಗಾರ್ತಿಯೆಂದು ಆಯ್ಕೆಮಾಡಲಾಗಿದೆ. ಈ ಮೂಲಕ ಸೆರೆನಾ ತಮ್ಮ ವೃತ್ತಿ ಜೀವನದಲ್ಲಿ ಮತ್ತೊಂದು ಸಾಧನೆ ಬರೆದಿದ್ದಾರೆ.

- 32 ವರ್ಷದ ಸೆರೆನಾ ಅವರು 2013 ರ ಋತುವಿನಲ್ಲಿ ಆಡಿರುವ 82 ಪಂದ್ಯಗಳ ಪೈಕಿ ಒಟ್ಟು 78 ಪಂದ್ಯಗಳನ್ನು ಜಯಿಸಿದ್ದಾರೆ. ಇದರಲ್ಲಿ ಯು.ಎಸ್ ಓಪನ್ ಹಾಗೂ ಫ್ರೆಂಚ್ ಓಪನ್ ಸೇರಿದಂತೆ ಒಟ್ಟು 11 ಟೈಟಲ್ ಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.
- ಪ್ರಸ್ತಕ ಸಾಲಿನ WTA ಪ್ರಶಸ್ತಿ ಸೆರೆನಾ ಅವರ ವೃತ್ತಿ ಜೀವನದಲ್ಲಿ ಸಂದ ಐದನೇ ಪ್ರಶಸ್ತಿ.
- ಈ ಹಿಂದೆ 2002, 2008, 2009 ಹಾಗೂ 2012 ರಲ್ಲಿ ಸೆರೆನಾ ಈ ಪ್ರಶಂಸೆಗೆ ಪಾತ್ರರಾಗಿದ್ದರು.

**ನಾರ್ವೆಯ ಮ್ಯಾಗ್ನಸ್ ಕಾರ್ಲ್ಸನ್ ವಿಶ್ವ ಚೆಸ್ ನ ಹೊಸ ಚಾಂಪಿಯನ್**

ಇದೇ ಮೊದಲ ಬಾರಿಗೆ ನಾರ್ವೆಯ 22 ವರ್ಷದ ಮ್ಯಾಗ್ನಸ್ ಕಾರ್ಲ್ಸನ್ ಹೊಸ ವಿಶ್ವ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಕಾರ್ಲ್ಸನ್‌ಗೆ ಇದು ಮೊದಲ ವಿಶ್ವ ಕಿರೀಟ. ಆನಂದ್ ಮತ್ತು ಕಾರ್ಲ್ಸನ್ ನಡುವೆ ನಡೆದ 10ನೆ ಪಂದ್ಯ ಡ್ರಾಗೊಳ್ಳುವ ಮೂಲಕ ವಿಶ್ವಚಾಂಪಿಯನ್‌ಶಿಪ್ ಆನಂದ್ ಕೈತಪ್ಪಿದೆ. 5 ಬಾರಿ ವಿಶ್ವಚಾಂಪಿಯನ್ ಆನಂದ್‌ರನ್ನು ತವರಿನಲ್ಲೇ ಮಣಿಸಿದ ಖ್ಯಾತಿ ಕಾರ್ಲ್ಸನ್ ರದ್ದು. ಇದರೊಂದಿಗೆ 22ರ ಕಾರ್ಲ್‌ಸನ್ ವಿಶ್ವ ಚೆಸ್ ಚಾಂಪಿಯನ್‌ಶಿಪ್ ಗೆದ್ದ ಎರಡನೇ ಅತಿ ಕಿರಿಯ ಆಟಗಾರ ಎನಿಸಿದರು. ಈ ಮುನ್ನ 1985ರಲ್ಲಿ ಗ್ಯಾರಿ ಕಾಸ್ಪರೋವ್ 22ನೇ ವಯಸ್ಸಿನಲ್ಲಿ ಸಾಧನೆ ಮಾಡಿದ್ದು ಮೊದಲ ದಾಖಲೆಯಾಗಿದೆ.

**ಏಕಪಕ್ಷೀಯ ಸೋಲು:**

ಆಧುನಿಕ ಚೆಸ್ ವಿಶ್ವಚಾಂಪಿಯನ್‌ಶಿಪ್ ಇತಿಹಾಸದಲ್ಲಿ ಏಕಪಕ್ಷೀಯವಾಗಿ ವಿಜೇತನ ನಿರ್ಧಾರವಾದ ಮೊದಲ ಟೂರ್ನಿಯಿದು. ಹಾಲಿ ಚಾಂಪಿಯನ್ ಆಗಿದ್ದ ಆನಂದ್ ಮತ್ತು ಕಾರ್ಲ್ಸನ್ ನಡುವೆ 7 ಪಂದ್ಯಗಳು ಡ್ರಾಗೊಂಡಿವೆ. 3 ಪಂದ್ಯಗಳಲ್ಲಿ ಆನಂದ್ ಸೋತಿದ್ದರು. ಒಟ್ಟಾರೆ 6.5 ಅಂಕಗಳಿಸಿದ ಕಾರ್ಲ್ಸನ್ ಚಾಂಪಿಯನ್ ಶಿಪ್ ಗೆದ್ದುಕೊಂಡರು. ಇದೇ ವೇಳೆ ಆನಂದ್ 3.5 ಅಂಕ ಗಳಿಸಿದರು.

**ಚಾಂಪಿಯನ್ ನಿರ್ಧಾರವಾಗುವುಗು ಹೇಗೆ?**

ವಿಶ್ವ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಒಟ್ಟು 12 ಪಂದ್ಯಗಳಿರುತ್ತವೆ. ಹಾಲಿ ಚಾಂಪಿಯನ್ ಮತ್ತು ವಿಶ್ವ ನಂ.1 ಶ್ರೇಣಿಯ ಆಟಗಾರನ ನಡುವೆ ಪಂದ್ಯ ನಡೆಯುತ್ತದೆ. ಅತಿಹೆಚ್ಚು ಅಂಕಗಳಿಸಿದವರು ಟೂರ್ನಿ ಗೆಲ್ಲುತ್ತಾರೆ. ಒಂದು ವೇಳೆ ಇಬ್ಬರು ಸಮ ಅಂಕಗಳಿಸಿದರೆ. ಹಾಲಿ ಚಾಂಪಿಯನ್ ನಡುವೆ ಮತ್ತೆ ಚಾಂಪಿಯನ್ ಆಗುತ್ತಾರೆ. ಆನಂದ್‌ಗೆ ಮೊದಲ ಕಟು ಅನುಭವ 1991 ರಿಂದ ಆರಂಭವಾದ ತಮ್ಮ 22 ವರ್ಷಗಳ ವೃತ್ತಿಜೀವನದಲ್ಲಿ ಒಂದು ಪಂದ್ಯದಲ್ಲೂ ಗೆಲ್ಲದೇ ಟೂರ್ನಿ ಸೋತ ಮೊದಲ ಚಾಂಪಿಯನ್‌ಶಿಪ್ ಇದು. 2000,2007, 2008, 2010, 2012 ಸೇರಿದಂತೆ ಆನಂದ್ 5 ಬಾರಿ ವಿಶ್ವಚಾಂಪಿಯನ್ ಆಗಿದ್ದಾರೆ.

**ಯಾರು ಈ ಕಾರ್ಲ್ಸನ್?**

ತಮ್ಮ 19ನೆ ವಯಸ್ಸಿನಲ್ಲೇ ವಿಶ್ವ ಚೆಸ್‌ನಲ್ಲಿ ನಂ.1 ಶ್ರೇಣಿ ಪಡೆದ ಆಟಗಾರ ನಾರ್ವೆಯ ಮ್ಯಾಗ್ನಸ್ ಕಾರ್ಲ್ಸನ್. ಇಂತಹ ಸಾಧನೆ ಮಾಡಿದ ವಿಶ್ವದ ನಂ.1 ಆಟಗಾರ. 2009ರಲ್ಲಿ ಇವರು ಬ್ಲಿಟ್ಜ್ ವಿಶ್ವಚಾಂಪಿಯನ್‌ಶಿಪ್ ಗೆದ್ದಿದ್ದರು. ವಿಶ್ವಚೆಸ್‌ನ ದಿಗ್ಗಜ ಗ್ಯಾರಿ ಕಾಸ್ಪರೋವ್‌ರಿಂದಲೇ ಚೆಸ್ ತಂತ್ರಗಳನ್ನು ಕಲಿತ್ತಿದ್ದಾರೆ. ಕೇವಲ 13ನೆ ವರ್ಷಕ್ಕೆ ಗ್ರಾಂಡ್ ಮಾಸ್ಟರ್ ಪಟ್ಟಕ್ಕೇರಿದರು. ಇದೀಗ ಮೊದಲ ಬಾರಿಗೆ ಚೆಸ್ ವಿಶ್ವಚಾಂಪಿಯನ್‌ಶಿಪ್ ಗೆದ್ದಿದ್ದಾರೆ.

**ಪ್ರಶಸ್ತಿ ಮೊತ್ತ:** 14 ಕೋಟಿ ರೂ.- ವಿಶ್ವಚಾಂಪಿಯನ್ ಶಿಪ್ ಪ್ರಶಸ್ತಿ ಮೊತ್ತ. 60 ಶೇ.-ಚಾಂಪಿಯನ್‌ಗೆ ಸಿಗುವ ಹಣ. 40 ಶೇ.- ಸೋತವರಿಗೆ ಸಿಗುವ ಹಣ

**<u>ಐಸಿಸಿ ಟಿ20 ವಿಶ್ವಕಪ್ ಪಂದ್ಯಾವಲಿಗೆ ಅರ್ಹತೆ ಪಡೆದ ಐರ್ಲೆಂಡ್ ಮತ್ತು ಅಫ್ಘಾನಿಸ್ತಾನ ತಂಡಗಳು</u>**

ಐರ್ಲೆಂಡ್ ಮತ್ತು ಅಫ್ಘಾನಿಸ್ತಾನ ತಂಡಗಳು ಬರುವ ವರ್ಷ ಅಂದರೆ 2014 ರಲ್ಲಿ ನಡೆಯಲಿರುವ ಐಸಿಸಿ ಟಿ20 ವಿಶ್ವಕಪ್ ಪಂದ್ಯಾವಳಿಗೆ ಅರ್ಹತೆ ಪಡೆದುಕೊಂಡಿವೆ. ಅರ್ಹತಾ ಪಂದ್ಯಾವಳಿಯಲ್ಲಿ ಕ್ರಮವಾಗಿ ತಮ್ಮ ಪಂದ್ಯಗಳಲ್ಲಿ ಗೆದ್ದ ಉಭಯ ತಂಡಗಳು ವಿಶ್ವಕಪ್‌ಗೆ ಅರ್ಹತೆ ಪಡೆಯುವಲ್ಲಿ ಯಶಸ್ವಿಯಾಗಿವೆ.

**ಅರ್ಹತಾ ಪಂದ್ಯಗಳು:**

- ಐರ್ಲೆಂಡ್ ಅಂತಿಮ ಅರ್ಹತಾ ಪಂದ್ಯದಲ್ಲಿ ಹಾಂಕಾಂಗ್ ತಂಡವನ್ನು 85 ರನ್‌ಗಳ ಅಂತರದಿಂದ ಸೋಲಿಸುವ ಮೂಲಕ ಅರ್ಹತೆ ಗಿಟ್ಟಿಸಿದರೆ,
- ಅಫ್ಘಾನಿಸ್ತಾನ ತನ್ನ ಅಂತಿಮ ಹಣಾಹಣಿಯಲ್ಲಿ ಕೀನ್ಯಾ ತಂಡವನ್ನು 34 ರನ್‌ಗಳ ಅಂತರದಿಂದ ಸೋಲಿಸುವ ಮೂಲಕ ಅರ್ಹತೆ ಪಡೆದುಕೊಂಡಿತು.
- ಅರ್ಹತಾ ಪಂದ್ಯಾವಳಿಯಲ್ಲಿ ಆಫ್ಘಾನಿಸ್ತಾನ ತನ್ನ ಎಲ್ಲ ಏಳೂ ಪಂದ್ಯಗಳಲ್ಲೂ ಜಯ ಸಾಧಿಸಿದರೆ, ಐರ್ಲೆಂಡ್ ತನ್ನ ಏಳು ಪಂದ್ಯಗಳಲ್ಲಿ ಆರರಲ್ಲಿ ಮಾತ್ರ ಜಯ ಸಾಧಿಸಿತು.

- ಅಲ್ಲದೆ ಉಭಯ ತಂಡಗಳು ತಾವು ಪ್ರತಿನಿಧಿಸಿದ ಗುಂಪುಗಳಲ್ಲಿ ಅಗ್ರ ಸ್ಥಾನ ಪಡೆದವು.

**ಫಾರ್ಮುಲಾ ಒನ್ ರೇಸ್ ನ ವಿಶ್ವ ಚಾಂಪಿಯನ್ ಆಗಿ ರೆಡ್‌ಬುಲ್ ತಂಡದ ಸೆಬಾಸ್ಟಿಯನ್ ವೆಟಲ್**

ರೆಡ್‌ಬುಲ್ ತಂಡದ ಸೆಬಾಸ್ಟಿಯನ್ ವೆಟಲ್ ನಿರೀಕ್ಷೆಯಂತೆ ಬ್ರೆಜಿಲಿಯನ್ ಗ್ರ್ಯಾನ್ ಪ್ರೀಯಲ್ಲೂ ಪ್ರಶಸ್ತಿ ಗೆಲ್ಲುವ ಮೂಲಕ ಸತತ 9ನೇ ರೇಸ್ ಗೆದ್ದ ದಾಖಲೆ ಸರಿಗಟ್ಟಿ ಸತತ ನಾಲ್ಕನೇ ಬಾರಿಗೆ ವಿಶ್ವ ಚಾಂಪಿಯನ್ ಪಟ್ಟ ಅಲಂಕರಿಸಿದ್ದಾರೆ. ಬ್ರೆಜಿಲ್ ನಲ್ಲಿ ನಡೆದ ಪ್ರಸಕ್ತ ಸಾಲಿನ ಅಂತಿಮ ರೇಸ್‌ನಲ್ಲಿ ಅಗ್ರಸ್ಥಾನಿಯಾಗಿ ರೇಸ್ ಆರಂಭಿಸಿದ ಸೆಬಾಸ್ಟಿಯನ್ ವೆಟಲ್ ತಮ್ಮದೇ ತಂಡದ ಮಾರ್ಕ್ ವೆಬ್ಬರ್ ಅವರ ಸವಾಲನ್ನು ದಿಟ್ಟವಾಗಿ ಹಿಮ್ಮೆಟ್ಟಿಸಿ 71 ಲ್ಯಾಪ್‌ಗ್ಳನ್ನು ಮೊದಲಿಗರಾಗಿ ಪೂರೈಸಿದರು. ಇದರೊಂದಿಗೆ ವೆಟಲ್ 60 ವರ್ಷದ ಹಿಂದೆ ಅಲೆರ್ಟೊ ಅಸ್ಕಿರಿ ನಿರ್ಮಿಸಿದ್ದ ಸತತ 9ರೇಸ್‌ಗಳ ಜಯದ ದಾಖಲೆಯನ್ನು ಸರಿಗಟ್ಟಿದರು. ಇದು ವೆಟಲ್‌ಗೆ 39ನೇ ಪ್ರಶಸ್ತಿಯಾಗಿದ್ದು, ಸತತ ನಾಲ್ಕು ಬಾರಿ ವಿಶ್ವ ಚಾಂಪಿಯನ್ ಪಟ್ಟ ಅಲಂಕರಿಸುವ ಮೂಲಕ ಸಾರ್ವಕಾಲಿಕ ಶ್ರೇಷ್ಠ ಚಾಲಕರ ಸಾಲಿನಲ್ಲಿ ಸ್ಥಾನ ಗಿಟ್ಟಿಸಿದರು. ತೀವ್ರ ಸ್ಪರ್ಧೆ ಒಡ್ಡಿದ ಮಾರ್ಕ್ ವೆಬ್ಬರ್ ಎರಡನೇ ಸ್ಥಾನಕ್ಕೆ ಕುಸಿದರೆ, ಫರ್ನಾಂಡೊ ಅಲೊನ್ಸೊ 3ನೇ ಸ್ಥಾನ ಗಳಿಸಿದರು.

**ದಾಖಲೆ ಸರಿಗಟ್ಟಿದ ವೆಟಲ್:**

- 2004ರಲ್ಲಿ ಶೂಮಾಕರ್ ಅವರು ಋತು ಒಂದರಲ್ಲಿ ಸತತ 7 ಜಯ ಸಾಧಿಸಿದ್ದ ದಾಖಲೆಯನ್ನು ಕಳೆದ ವಾರ ನಡೆದ ಅಮೆರಿಕ ಜಿಪಿಯಲ್ಲೇ ಮುರಿದಿದ್ದ ವೆಟಲ್ ಅವರು ಈ ವರ್ಷ ಆಕರ್ಷಕ ಪ್ರದರ್ಶನ ತೋರಿದ್ದಾರೆ.
- ಶೂಮಾಕರ್ ದಾಖಲೆ ಸರಿಗಟ್ಟಿದ್ದಲ್ಲದೆ, ಭಾರತದಲ್ಲಿ ನಡೆದ ಗ್ರ್ಯಾನ್ ಫ್ರೀ ಗೆಲ್ಲುವ ಮೂಲಕ 26 ವರ್ಷದ ವೆಟಲ್ ನಾಲ್ಕು ಬಾರಿ ವಿಶ್ವ ಚಾಂಪಿಯನ್ ಎನಿಸಿದ ವಿಶ್ವದ ಅತಿ ಕಿರಿಯ ಚಾಲಕ ಎನಿಸಿದರು.
- ಈ ಋತುವಿನಲ್ಲಿ ಅತ್ಯದ್ಭುತ ಪ್ರದರ್ಶನ ವೆಟಲ್ ಅವರು ಮಾಜಿ ಖ್ಯಾತ ಚಾಲಕ ಮೈಕೆಲ್ ಶೂಮಾಕರ್ ದಾಖಲೆ ಸರಿಗಟ್ಟಿದ್ದಾರೆ. ಈ ವರ್ಷ ಸತತ 13 ಜಯ ಕಂಡ ವೆಟಲ್ ಅವರು ಮೈಕೆಲ್ ಶೂಮಾಕರ್ ಋತು ಒಂದರಲ್ಲಿ ಮಾಡಿದ ದಾಖಲೆಯನ್ನು ಸರಿಗಟ್ಟಿದ್ದಾರೆ.
- ಅಲ್ಲದೆ ಸತತ 9 ಗ್ರ್ಯಾನ್ ಫ್ರಿಗಳಲ್ಲಿ ಜಯ ಕಾಣುವ ಮೂಲಕ ಅಲ್ಬೆರ್ಟೋ ಆಸ್ಕರಿ ಅವರ ದಾಖಲೆಯನ್ನೂ ಸರಿಗಟ್ಟಿದರು.

**2013ರಲ್ಲಿ ಚಾಲಕರ ಸಾಧನೆ:**

1. ಸೆಬಾಸ್ಟಿಯನ್ ವೆಟಲ್ ಜರ್ಮನಿ ರೆಡ್‌ಬುಲ್ 397
2. ಫರ್ನಾಂಡೋ ಅಲೊನ್ಸೋ ಸ್ಪೇನ್ ಫೆರಾರಿ 242
3. ಮಾರ್ಕ್ ವೆಬರ್ ಆಸ್ಟ್ರೇಲಿಯಾ ರೆಡ್‌ಬುಲ್ 199
4. ಲೂಯಿಸ್ ಹ್ಯಾಮಿಲ್ಟನ್ ಇಂಗ್ಲೆಂಡ್ ಮರ್ಸಿಡೀಸ್ 189
5. ಕಿಮಿ ರೈಕೋನೆನ್ ಫಿನ್‌ಲ್ಯಾಂಡ್ ಲೋಟಸ್ ರೆನಾಲ್ಟ್ 183

6. ಪಾಲ್ ಡಿ ರೆಸ್ಟಾ ಇಂಗ್ಲೆಂಡ್ ಫೋರ್ಸ್ ಇಂಡಿಯಾ 48
7. ಆಯಡ್ರಿಯನ್ ಸುಟಿಲ್ ಜರ್ಮನಿ ಫೋರ್ಸ್ ಇಂಡಿಯಾ 29

**ಋತುವಿನಲ್ಲಿ ಅಗ್ರ 5 ಸ್ಥಾನ ಪಡೆದ ತಂಡಗಳು:**

1-ರೆಡ್‌ಬುಲ್-596, 2-ಮರ್ಸಿಡೀಸ್-360, 3-ಫೆರಾರಿ-354, 4-ಲೋಟಸ್-315, 5-ಮೆಕ್‌ಲಾರೆನ್ 122, 6-ಫೋರ್ಸ್ ಇಂಡಿಯಾ-77

<u>**ಉದಯೋನ್ಮುಖ ಬ್ಯಾಡ್ಮಿಂಟನ್ ತಾರೆ ಪಿ.ವಿ ಸಿಂಧುಗೆ ಮಕಾವು ಓಪನ್ ಗ್ರ್ಯಾಂಡ್ ಪ್ರಿಕ್ಸ್ ಗೋಲ್ಡ್ ಪ್ರಶಸ್ತಿ**</u>

ಆಕರ್ಷಕ ಪ್ರದರ್ಶನ ಮುಂದುವರಿಸಿದ ಭಾರತದ ಉದಯೋನ್ಮುಖ ಬ್ಯಾಡ್ಮಿಂಟನ್ ತಾರೆ ಪಿ.ವಿ ಸಿಂಧು ಅವರು ಮಕಾವು ಓಪನ್ ಗ್ರ್ಯಾಂಡ್ ಪ್ರಿಕ್ಸ್ ಗೋಲ್ಡ್ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ.ಇದರೊಂದಿಗೆ ಸಿಂಧು ಋತುವಿನ ಎರಡನೇ ಪ್ರಶಸ್ತಿ ತಮ್ಮದಾಗಿಸಿಕೊಂಡಿದ್ದಾರೆ. ಈ ಮುನ್ನ ಕಳೆದ ಮೇ ತಿಂಗಳಲ್ಲಿ ನಡೆದ ಮಲೇಷ್ಯಾ ಓಪನ್‌ನಲ್ಲಿ ಋತುವಿನ ಮೊದಲ ಪ್ರಶಸ್ತಿ ಗೆದ್ದುಕೊಂಡಿದ್ದರು.

**ಮಕಾವು ಓಪನ್:**

18 ವರ್ಷದ ಸಿಂಧು ಫೈನಲ್ ಪಂದ್ಯದಲ್ಲಿ ಕೆನಡಾದ ಮಿಚೆಲ್ಲೆ ಲೀ ಅವರನ್ನು 21-15, 21-12 ಗೇಮ್‌ಗಳಿಂದ ಪರಾಭವಗೊಳಿಸಿದರು. ಈ ವರ್ಷವಷ್ಟೇ ಅರ್ಜುನ ಪ್ರಶಸ್ತಿ ಪಡೆದಿರುವ ಸಿಂಧು, ಪ್ರಶಸ್ತಿ ಸುತ್ತಿನಲ್ಲಿ 7ನೇ ಶ್ರೇಯಾಂಕ ಪಡೆದಿದ್ದ ಕೆನಡಾದ ಆಟಗಾರ್ತಿ ವಿರುದ್ಧ ಆರಂಭದಿಂದ ಅಂತ್ಯದವರೆಗೂ ಪಾರಮ್ಯ ಮೆರೆಯುವಲ್ಲಿ ಯಶಸ್ವಿಯಾದರು. ಪ್ರಶಸ್ತಿಯೊಂದಿಗೆ ಸಿಂಧು ಅವರು ಅಂದಾಜು ರು. 5.5 ಲಕ್ಷ ಬಹುಮಾನ ತಮ್ಮದಾಗಿಸಿಕೊಂಡರು.

**ಸಿಂಧು ಸಾಧನೆ:**

- ಹೈದರಾಬಾದ್ ಮೂಲದ ಸಿಂಧು ಪ್ರಸಕ್ತ ವರ್ಷದಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ.
- ಮಲೇಷ್ಯಾ ಓಪನ್ ಪ್ರಶಸ್ತಿ ಜತೆಗೆ, ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಚೀನಾದ ದೈತ್ಯ ಆಟಗಾರ್ತಿಯರ ವಿರುದ್ಧ ಸತತವಾಗಿ ಜಯ ಸಾಧಿಸುವ ಮೂಲಕ ಕಂಚಿನ ಪದಕ ಗೆದ್ದು, ಮಹಿಳೆಯರ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಗೆದ್ದ ಮೊದಲ ಭಾರತೀಯ ಆಟಗಾರ್ತಿ ಎಂಬ ಕೀರ್ತಿಗೆ ಪಾತ್ರರಾಗಿದ್ದರು.
- ಪ್ರಕಾಶ್ ಪಡಕೋಣೆ ಅವರು 1983ರ ವಿಶ್ವ ಚಾಂಪಿಯನ್‌ಶಿಪ್‌ನ ಪುರುಷರ ಸಿಂಗಲ್ಸ್‌ನಲ್ಲಿ ಕಂಚಿನ ಪದಕ ಗೆದ್ದ ನಂತರ ಮೊದಲ ಬಾರಿಗೆ ಸಿಂಧು ಸಿಂಗಲ್ಸ್‌ನಲ್ಲಿ ಪ್ರಶಸ್ತಿ ತಂದುಕೊಟ್ಟಿದ್ದರು.
- ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಸೈನಾ ನೆಹ್ವಾಲ್ ನಂತರ, ಸಿಂಧು ಅವರು ಸಹ ಭಾರತದ ಬ್ಯಾಡ್ಮಿಂಟನ್ ತಾರೆಯಾಗಿ ಮಿಂಚುತ್ತಿದ್ದಾರೆ.

**ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷರಾಗಿ ಮೈಸೂರು ಮಹಾರಾಜ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್**

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಧಿಕಾರ ಮೈಸೂರು ಮಹಾರಾಜ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮತ್ತು ಮಾಜಿ ಕಾರ್ಯದರ್ಶಿ ಬ್ರಿಜೇಶ್ ಪಟೇಲ್ ನೇತೃತ್ವದ ಬಣಕ್ಕೆ ಒಲಿದಿದೆ, ಕಳೆದ 3 ವರ್ಷಗಳ ಅಧಿಕಾರ ನಡೆಸಿದ ಮಾಜಿ ಕ್ರಿಕೆಟಿಗರಾದ ಅನಿಲ್ ಕುಂಬ್ಳೆ ಮತ್ತು ಜಾವಗಲ್ ಶ್ರೀನಾಥ್ ಬೆಂಬಲಿತ ಪಡೆ ಸೋಲು ಅನುಭವಿಸಿದೆ.

**ಕ್ಲೀನ್ ಸ್ವೀಪ್:**

- ಕೆಎಸ್‌ಸಿಎನ 23 ಪದಾಧಿಕಾರಿಗಳ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಒಡೆಯರ್ ಮತ್ತು ಬ್ರಿಜೇಶ್ ಬಣದ ಬಹುತೇಕ ಅಭ್ಯರ್ಥಿಗಳು ಭಾರೀ ಅಂತರದಿಂದ ಜಯ ಸಾಧಿಸಿತು. ಇದರೊಂದಿಗೆ ಕಳೆದ 3 ವರ್ಷ ಕಾಲ ಅಧಿಕಾರದಲ್ಲಿದ್ದ ಕುಂಬ್ಳೆ ಬಣಕ್ಕೆ ತೀವ್ರ ಮುಖಭಂಗವಾಗಿದೆ.
- 1351 ಮತ ಚಲಾವಣೆ ಆಗುವ ಮೂಲಕ ದಾಖಲೆಯ ಸಂಖ್ಯೆಯ ಮತದಾನ ನಡೆಯಿತು. 343 ಕ್ಲಬ್ ಮತ್ತು 1485 ಸದಸ್ಯರು ಸೇರಿದಂತೆ 1823 ಮತದಾರರು ಇದ್ದು, ಕಳೆದ ಬಾರಿ 1080 ಮತಗಳು ಚಲಾವಣೆ ಆಗಿದ್ದವು. ಅದಕ್ಕೆ ಹೋಲಿಸಿದರೆ ಈ ಬಾರಿ ದಾಖಲೆ ಸಂಖ್ಯೆಯ ಮತದಾನವಾಗಿದೆ.
- 2008-2010ರ ಅವಧಿಗೆ ಪರಸ್ಪರ ವಿರೋಧಿ ಬಣಗಳಾಗಿ ಅಧಿಕಾರಕ್ಕೆ ಇಳಿದಿದ್ದ ಒಡೆಯರ್ ಮತ್ತು ಬ್ರಿಜೇಶ್ ಬಣಗಳು ಈ ಬಾರಿ ಒಂದಾಗಿ ಕುಂಬ್ಳೆ ಬೆಂಬಲಿತ ಬಣಗಳ ವಿರುದ್ಧ ಕಣಕ್ಕಿಳಿದಿತ್ತು. 2010-2013ರಲ್ಲಿ ಮೂರು ವರ್ಷ ಅಧಿಕಾರ ನಡೆಸಿದ್ದ ಕುಂಬ್ಳೆ ಮತ್ತು ಶ್ರೀನಾಥ್ ಈ ಬಾರಿ ಸ್ಪರ್ಧೆಯಿಂದ ಈ ಹಿಂದೆ ಸರಿದಿದ್ದರು.

**ಜಯಗಳಿಸಿದವರು:**

- **ಅಧ್ಯಕ್ಷ**: ಶ್ರೀಕಂಠದತ್ತ ನರಸಿಂಹರಾಜ ಒಡೆಯರ್,
- **ಕಾರ್ಯದರ್ಶಿ:** ಬ್ರಿಜೇಶ್ ಪಟೇಲ್,
- **ಖಜಾಂಚಿ:** ದಯಾನಂದ ಪೈ
- **ಉಪಾಧ್ಯಕ್ಷ:** ಪಿ.ಆರ್. ಅಶೋಕಾನಂದ್, ಸಂಜಯ್ ದೇಸಾಯಿ, ಆರ್. ಸುಧಾಕರ್ ರಾವ್
- **ವ್ಯವಸ್ಥಾಪಕ ಸಮಿತಿ:** ದೊಡ್ಡ ಗಣೇಶ್, ಲಕ್ಷಣ್ ಮಥಾನಿ, ಮಲ್ಲಿಕಾರ್ಜುನ ಸ್ವಾಮಿ, ವಿ.ಎಂ ಮಂಜುನಾಥ್, ರಘುರಾಮ್ ಭಟ್, ಶ್ರೀನಿವಾಸ್ ಮೂರ್ತಿ

# ಪ್ರಶಸ್ತಿಗಳು

## ವೆನಿಜುವೆಲಾದ ಗ್ಯಾಬ್ರಿಲ್ಲಾ ಐಲೇರ್ ಗೆ 2013 ರ ವಿಶ್ವ ಸುಂದರಿ ಕೀರೀಟ

25 ವರ್ಷದ ವೆನಿಜುವೆಲಾದ ಟಿವಿ ನಿರೂಪಕಿ ಹಾಗೂ ಫ್ಲೆಮೆನ್ಕೋ ಡಾನ್ಸರ್ ಗೇಬ್ರಿಯೆಲಾ ಐಸ್ಲರ್ 2013 ರ ಭುವನ ಸುಂದರಿ ಕಿರೀಟವನ್ನು ಮುಡಿಗೇರಿಸಿಕೊಂಡಿದ್ದಾರೆ. ಮಾಸ್ಕೊದಲ್ಲಿ ನಡೆದ ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ ಜಗತ್ತಿನ 85 ದೇಶದ ಸ್ಪರ್ಧಿಗಳು ಭಾಗವಹಿಸಿದ್ದರು. ಭಾರತದ ಲಾರಾ ದತ್ತಾ 2000 ರಲ್ಲಿ ಭುವನ ಸುಂದರಿ ಕಿರೀಟ ತೊಟ್ಟಿದ್ದರು.

**ಮಿಸ್ ಇಂಡಿಯಾ ವಿಫಲ:**

ರಷ್ಯಾದಲ್ಲಿ ನಡೆದ 2013ರ ವಿಶ್ವ ಸುಂದರಿ ಸ್ಪರ್ಧೆಯಿಂದ ಭಾರತೀಯ ಸ್ಪರ್ಧಿ ಮಾನ್ಸಿ ಮೊಘೆ ಕಡೆಯ 5ನೇ ಸುತ್ತಿಗೆ ಆಯ್ಕೆಯಾಗುವಲ್ಲಿ ವಿಫಲರಾದರು. ಈ ಮೂಲಕ 14 ವರ್ಷದ ನಂತರ ಪ್ರಶಸ್ತಿ ಗೆಲ್ಲುವ ಭಾರತೀಯರ ಕನಸು ಕನಸಾಗಿಯೇ ಉಳಿದಿದೆ.ಈ ಬಾರಿಯ ಮಿಸ್ ಇಂಡಿಯಾ ಮಾನಸಿ ಮೋಘೆ ಅಂತಿಮ ಸುತ್ತಿಗೆ ಆಯ್ಕೆಯಾದ 10 ಜನರ ತಂಡದಲ್ಲಿ ಒಬ್ಬರಾಗುವಲ್ಲಿ ತೃಪ್ತಿಪಟ್ಟಿದ್ದಾರೆ.

**ವಿಶ್ವ ಸುಂದರಿ ಕಿರೀಟ:**

2012ರ ಭುವನ ಸುಂದರಿ ಅಮೆರಿಕದ ಒಲಿವಿಯಾ ಕಲ್ಪೋ ಅವರು ಐಸ್ಲರ್‌ಗೆ ಕಿರೀಟ ತೊಡಿಸಿದ್ದಾರೆ. ಕಳೆದ ಆರು ವರ್ಷದಲ್ಲಿ ವೆನಿಜುವೆಲಾ ದೇಶಕ್ಕೆ ಲಭಿಸಿದ ಮೂರನೇ ಭುವನ ಸುಂದರಿ ಕಿರೀಟ ಇದಾಗಿದೆ. ನಂತರದ ಸ್ಥಾನಗಳನ್ನು ಮಿಸ್ ಸ್ಪೇನ್ ಪಾಟ್ರಿಸಿಯಾ ರೋಡ್ರಿಗೆಸ್, ಎಕ್ವೇಡರ್‌ನ ಕನ್‌ಸ್ಟಾನ್ಜಾ ಬೇಜ್, ಫಿಲಿಪ್ಪೀನ್ಸ್‌ನ ಅರಿಲ್ಲಾ ಅರಿಡಾ, ಬ್ರೆಜಿಲ್‌ನ ಜಾಕೆಲೇನ್ ಒಲಿವೆರಿಯಾ ಪಡೆದುಕೊಂಡಿದ್ದಾರೆ.

## ಸಿ.ಎನ್.ಆರ್.ರಾವ್ ಮತ್ತು ಸಚಿನ್ ತೆಂಡೂಲ್ಕರ್ ಗೆ ಪ್ರತಿಷ್ಠಿತ ಭಾರತರತ್ನ ಪ್ರಶಸ್ತಿ

ಅಂತರರಾಷ್ಟ್ರೀಯ ಕ್ರಿಕೆಟ್ ಜೀವನದಲ್ಲಿ ಅಚ್ಚಳಿಯದ ಸಾಧನೆಗಳನ್ನು ಮಾಡಿರುವ ಸಚಿನ್ ತೆಂಡೂಲ್ಕರ್ ಹಾಗೂ ವಿಜ್ಞಾನಿ ಕನ್ನಡಿಗ ಪ್ರೊ. ಸಿ ಎನ್ ಆರ್ ರಾವ್ ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಲು ರಾಷ್ಟ್ರಪತಿಗಳು ನಿರ್ಧರಿಸಿರುವುದಾಗಿ ರಾಷ್ಟ್ರಪತಿ ಭವನದ ವಕ್ತಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕ್ರಿಕೆಟಿನಲ್ಲಿ ಸಚಿನ್ ಅವರ ಜೀವಮಾನ ಸಾಧನೆಗೆ ಈ ಅತ್ಯುನ್ನತ ನಾಗರಿಕ ಪ್ರಶಸ್ತಿ ಲಭಿಸುತ್ತಿದೆ. ಈ ಮೂಲಕ ಕ್ರೀಡೆಯಲ್ಲಿ ಭಾರತ ರತ್ನ ಗೌರವಕ್ಕೆ ಆಯ್ಕೆಯಾದ ಮೊದಲ ಕ್ರೀಡಾಪಟು ಎನಿಸಿದ್ದಾರೆ. ಇದೇ ವೇಳೆ ಕನ್ನಡಿಗ ಪ್ರೊ. ಸಿ ಎನ್ ಆರ್ ರಾವ್ ಅವರಿಗೂ ಭಾರತ ರತ್ನ ಪ್ರಶಸ್ತಿ ಲಭಿಸಲಿದೆ. ರಾವ್ ಅವರು ಭಾರತದ ಚೊಚ್ಚಲ ಮಂಗಳಯಾನ ಯೋಜನೆಯ ರೂವಾರಿ ಆಗಿದ್ದಾರೆ. ಕೊನೆಯದಾಗಿ 2008ರಲ್ಲಿ ಪಂಡಿತ್ ಭೀಮಸೇನ ಜೋಷಿ ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.

**'ಭಾರತ ರತ್ನ' ಪಡೆದ 3ನೇ ಕನ್ನಡಿಗ:**

ರಾವ್ ಎಂದೇ ಹೆಸರುವಾಸಿಯಾಗಿರುವ ವಿಶ್ವಪ್ರಸಿದ್ಧ ವಿಜ್ಞಾನಿ ಚಿಂತಾಮಣಿ ನಾಗೇಶ ರಾಮಚಂದ್ರ ರಾವ್ ಅವರು ದೇಶದ ಅತ್ಯುನ್ನತ ಪುರಸ್ಕಾರವಾದ 'ಭಾರತ ರತ್ನ' ಪಡೆದ ಮೂರನೇ ಕನ್ನಡಿಗ. 1955ರಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ಹಾಗೂ 2008ರಲ್ಲಿ ಪಂಡಿತ್ ಭೀಮಸೇನ ಜೋಶಿ ಅವರಿಗೆ ಈ ಗೌರವ ಸಂದಿತ್ತು.

**ಚಿಕ್ಕಬಳ್ಳಾಪುರಕ್ಕೆ 2 'ಭಾರತ ರತ್ನ':**

1954 ರಿಂದ ಈವರೆಗೆ ಕರ್ನಾಟಕಕ್ಕೆ ಸಿಕ್ಕಿರುವ ಮೂರು 'ಭಾರತ ರತ್ನ'ಗಳ ಪೈಕಿ ಎರಡು ಗೌರವಗಳು ಅವಿಭಜಿತ ಕೋಲಾರ ಜಿಲ್ಲೆ ಅಥವಾ ಈಗಿನ ಚಿಕ್ಕಬಳ್ಳಾಪುರ ಜಿಲ್ಲೆಯವರಿಗೇ ದೊರೆತಿರುವುದು ವಿಶೇಷ. ಸರ್ ಎಂ. ವಿಶ್ವೇಶ್ವರಯ್ಯ ಅವರು ಚಿಕ್ಕಬಳ್ಳಾಪುರ ತಾಲೂಕಿನ ಮುದ್ದೇನಹಳ್ಳಿಯವರು. ಸಿ.ಎನ್.ಆರ್. ರಾವ್ ಅವರು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿಯವರು.

**ಒಂದೇ ವರ್ಷದಲ್ಲಿ ಇಬ್ಬರಿಗೆ:**

ಒಂದೇ ವರ್ಷದಲ್ಲಿ ಇಬ್ಬರಿಗೆ 'ಭಾರತ ರತ್ನ' ಘೋಷಿಸಿದ್ದು ಇದೇ ಮೊದಲಲ್ಲ. 'ಭಾರತ ರತ್ನ' ಪುರಸ್ಕಾರ ನೀಡುವ ಪರಿಪಾಠ ಆರಂಭವಾದ ಮೊದಲ ವರ್ಷದಲ್ಲೇ ಅಂದರೆ 1954ರಲ್ಲಿ ಸರ್ವಪಲ್ಲಿ ರಾಧಾಕೃಷ್ಣನ್, ಸಿ.ವಿ. ರಾಮನ್ ಹಾಗೂ ಚಕ್ರವರ್ತಿ ರಾಜಗೋಪಾಲಚಾರಿ ಅವರಿಗೆ ಈ ಗೌರವ ನೀಡಲಾಗಿತ್ತು. 1955ರಲ್ಲಿ ವಿಶ್ವೇಶ್ವರಯ್ಯ, ಜವಾಹರಲಾಲ್ ನೆಹರು ಹಾಗೂ ಸಾಹಿತಿ ಭಗವಾನ್ ದಾಸ್ ಅವರಿಗೆ ಪ್ರಶಸ್ತಿ ನೀಡಲಾಗಿತ್ತು. ತೀರಾ ಇತ್ತೀಚೆಗೆ ಎಂದರೆ 2001ರಲ್ಲಿ ಲತಾ ಮಂಗೇಶ್ಕರ್ ಹಾಗೂ ಉಸ್ತಾದ್ ಬಿಸ್ಮಿಲ್ಲಾ ಖಾನ್, 1999ರಲ್ಲಿ ಅಮರ್ತ್ಯ ಸೇನ್, ಲೋಕಪ್ರಿಯ ಗೋಪಿನಾಥ್, ಲೋಕನಾಯಕ ಜಯಪ್ರಕಾಶ್, ಪಂಡಿತ್ ರವಿಶಂಕರ್ ಅವರಿಗೆ ಪ್ರದಾನ ಮಾಡಲಾಗಿತ್ತು. ಸಚಿನ್, ರಾವ್ ಸೇರಿ ಇದುವರೆಗೆ 43 ಮಂದಿಗೆ ಭಾರತ ರತ್ನ ಸಿಕ್ಕಿದೆ.

## ಪರಿಸರ ಹೋರಾಟಗಾರ್ತಿ ಪ್ರೀತಿ ರಾಜಗೋಪಾಲನ್ ಗೆ ಪ್ರಸಕ್ತ ಸಾಲಿನ ಕಾಮನ್‌ವೆಲ್ತ್ ಯೂತ್ ಪ್ರಶಸ್ತಿ

ಯುವ ಪರಿಸರ ಹೋರಾಟಗಾರ್ತಿ ಪ್ರೀತಿ ರಾಜಗೋಪಾಲನ್ ಪ್ರಸಕ್ತ ಸಾಲಿನ ಕಾಮನ್‌ವೆಲ್ತ್ ಯೂತ್ ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ. ಎಂಜಿನಿಯರಿಂಗ್ ಪದವಿ ಓದುತ್ತಿರುವ ಪ್ರೀತಿ ಮೂರು ವರ್ಷಗಳ ಹಿಂದೆ ಗೆಳೆಯರ ಸಹಾಯದಿಂದ ತ್ಯಾಜ್ಯ ನಿರ್ವಹಣಾ ಯೋಜನೆಯನ್ನು ಆರಂಭಿಸಿದರು. ಸುಮಾರು 200 ಶಾಲೆ ಮತ್ತು 40 ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ತ್ಯಾಜ್ಯ ಮರುಬಳಕ್ಕೆ ಮಾಡುವುದು ಹೇಗೆ ಎಂಬುದರ ಬಗ್ಗೆ ತರಬೇತಿ ನೀಡಿದರು. ಸತತ ಮೂರು ವರ್ಷ ದೇಶದ ವಿವಿಧ ಭಾಗಗಳನು ಸುತ್ತಿ ಗ್ರಾಮೀಣ ಮಹಿಳೆಯರು ಮತ್ತು ಮಕ್ಕಳಿಗೆ ತ್ಯಾಜ್ಯವನ್ನು ಗೊಬ್ಬರವಾಗಿ ಹೇಗೆ ಮರುಬಳಕೆ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟರು.

**ಪ್ರೀತಿ ಸಾಧನೆ:**

- ಅಲ್ಲದೆ ಅತಿ ಕಡಿಮೆ ವೆಚ್ಚದಲ್ಲಿ ಸೌರಶಕ್ತಿಯಿಂದ ದೀಪಗಳನ್ನು ಉರಿಸುವುದು, ನೀರು ಶುದ್ಧೀಕರಣ ಮಾಡುವ ವಿಧಾನದ ಬಗ್ಗೆ ಯಾಂತ್ರಿಕವಾಗಿ ಹೇಳಿಕೊಟ್ಟ ಹೆಗ್ಗಳಿಕೆ ಅವರದ್ದು.
- ಈ ಯೋಜನೆಯಿಂದ ಸ್ಫೂರ್ತಿ ಪಡೆದ ಕೇಂದ್ರ ಸರ್ಕಾರ ಪ್ರಸ್ತುತ 40 ನಗರಗಳಲ್ಲಿ ತ್ಯಾಜ್ಯ ಮರುಬಳಕೆ ಮಾಡುವ ಘಟಕಗಳಿಗೆ ಸಹಾಯಧನ ನೀಡುತ್ತಿದ್ದೆ.
- ಪ್ರೀತಿ ತಮ್ಮ ಯೋಜನೆಗೆ ಆಫ್ರಿಕಾ, ಯುರೋಪ್ ದೇಶಗಳ ವಿವಿಧ ಸಂಘ ಸಂಸ್ಥೆಗಳಿಂದ ಸಹಾಯಧನ ಪಡೆದಿದ್ದಾರೆ.
- ಕಾಮನ್‌ವೆಲ್ತ್ ಯುವ ಪ್ರಶಸ್ತಿಯಿಂದ ಬಂದ ಹಣವನ್ನು ಸಾವಯವ ಕೃಷಿಯ ಬಗ್ಗೆ ಯುವಕರಿಗೆ ಮತ್ತು ಮಹಿಳೆಯರಿಗೆ ತರಬೇತಿ ನೀಡಲು ವಿನಿಯೋಗಿಸುತ್ತಿದ್ದಾರೆ.
- ಸಾವಯವ ಬೆಳೆ ಮತ್ತು ತ್ಯಾಜ್ಯ ಮರುಬಳಕೆ ಮಾಡುವ ವಿಧಾನದ ಬಗ್ಗೆ ವಿದ್ಯಾರ್ಥಿಗಳು, ಯುವಕರು ಮತ್ತು ಮಹಿಳೆಯರಲ್ಲಿ ಜಾಗೃತಿ ಮೂಡಿಸುವುದೇ ನನ್ನ ಜೀವನದ ಗುರಿ ಎನ್ನುತ್ತಾರೆ ಪ್ರೀತಿ.

**ವಿಶ್ವಸಂಸ್ಥೆಯ ಸಂಶೋಧನಾ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡ ಭಾರತದ ವರುಣ್ ಅರೋರ**

ವಿಶ್ವಸಂಸ್ಥೆ ಪ್ರತಿ ವರ್ಷ ಯುವಕರಿಗಾಗಿ ಒಂದು ಸಂಶೋಧನಾ ಸ್ಪರ್ಧೆಯನ್ನು ಏರ್ಪಡಿಸುತ್ತದೆ. ಅದು ತಂತ್ರಜ್ಞಾನದ ಮೂಲಕ ಜಗತ್ತನ್ನೇ ಬದಲಿಸುವಂತಹ ಸಂಶೋಧನೆಯಾಗಿರಬೇಕು. 2013ನೇ ಸಾಲಿನ ಈ ಪ್ರಶಸ್ತಿಗೆ ಭಾರತೀಯ ಯುವಕ ವರುಣ್ ಆರೋರ ಆಯ್ಕೆಯಾಗುವ ಮೂಲಕ ವಿಶ್ವದ ಗಮನ ಸೆಳೆದಿದ್ದಾರೆ.

**ಯಾವುದಕ್ಕೆ ಪ್ರಶಸ್ತಿ:**

ಪೂರ್ವ ಪ್ರಾಥಮಿಕ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಸಂಬಂಧಿಸಿದಂತೆ 'ಓಪನ್ ಕರಿಕುಲಂ' ಎಂಬ ವೆಬ್‌ಸೈಟ್ ವಿನ್ಯಾಸಕ್ಕೆ ದೆಹಲಿ ಮೂಲದ ವರುಣ್‌ಗೆ ವಿಶ್ವಸಂಸ್ಥೆ ಪ್ರಶಸ್ತಿ ಸಂದಿದೆ. ವರುಣ್ ಸೇರಿದಂತೆ ನಾನಾ ದೇಶಗಳ 10 ಯುವ ಸಂಶೋಧಕರು ಈ ಪ್ರಶಸ್ತಿಯನ್ನು ಹಂಚಿಕೊಂಡಿದ್ದಾರೆ. ವಿಶ್ವಸಂಸ್ಥೆ ನೀಡುವ ಈ ಪ್ರಶಸ್ತಿಗೆ ಭಾರತ ಸೇರಿದಂತೆ ವಿಶ್ವಸಂಸ್ಥೆಯಲ್ಲಿ ಸದಸ್ಯತ್ವ ಪಡೆದ ರಾಷ್ಟ್ರಗಳ ನಾಗರಿಕರು ಅರ್ಹರು.

**ಈ ಬಾರಿಯ ಸಂಶೋಧನೆ ಏನು?**

ಈ ಬಾರಿ 88 ದೇಶಗಳಿಂದ 600 ಸ್ಪರ್ಧಿಗಳು ಭಾಗವಹಿಸಿದ್ದರು. 'ಕ್ರಿಯಾತ್ಮಕ ತಂತ್ರಜ್ಞಾನದ ಮೂಲಕ ಜಗತ್ತನ್ನು ಬದಲಿಸಬಹುದು' ಎಂಬುದು ಈ ಪ್ರಶಸ್ತಿಯ ಘೋಷವಾಕ್ಯ. ಅದರಂತೆ ಸ್ಪರ್ಧಿಗಳು ತಮ್ಮ ಸುತ್ತಲಿನ ಸಮಾಜವನ್ನು ಕೇಂದ್ರವಾಗಿಟ್ಟುಕೊಂಡು ತಂತ್ರಜ್ಞಾನದ ಮೂಲಕ ಅದನ್ನು ಹೇಗೆ ಬದಲಿಸಬಹುದು ಎಂಬುದನ್ನು ತೋರಿಸಿಕೊಡಬೇಕು ಅಥವಾ ಬದಲಾವಣೆಗೆ ಪೂರಕವಾದ ತಂತ್ರಜ್ಞಾನವನ್ನು ಕಂಡುಹಿಡಿಯಬೇಕು.

**ವರುಣ್ ಆಯ್ಕೆ:**

ಈ ಸ್ಪರ್ಧೆಗೆ ವರುಣ್ ಭಾರತೀಯ ಶಿಕ್ಷಣ ಪದ್ಧತಿಯನ್ನು ಅಯ್ಕೆ ಮಾಡಿಕೊಂಡರು. ಮುಖ್ಯವಾಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಒತ್ತು ನೀಡಿದರು. 'ಓಪನ್ ಕರಿಕುಲಂ' ವೆಬ್‌ಸೈಟ್‌ನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ಅಪ್‌ಲೋಡ್ ಮಾಡಿದರು.ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದಂತೆ ಯಾರು ಬೇಕಾದರೂ ಮಾಹಿತಿ ಅಪ್‌ಲೋಡ್ ಮಾಡಲು ಅವಕಾಶ ಕಲ್ಪಿಸಿದ್ದಾರೆ. ಈ ವೆಬ್ ಮೂಲಕ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಶಿಕ್ಷಣದ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗುತ್ತದೆ. ಇದು ಓಪನ್ ಕರಿಕುಲಂನ ವಿಶೇಷ.

**2013 ನೇ ಸಾಲಿನ 'ಅಂಗವಿಕಲರ ವಿಶೇಷ ರಾಜ್ಯ ಪ್ರಶಸ್ತಿ' ಪ್ರಕಟ**

ಅಂಗವಿಕಲರ ಅಭಿವೃದ್ಧಿಗಾಗಿ ವಿಶೇಷ ಸೇವೆ ಸಲ್ಲಿಸಿದ ವ್ಯಕ್ತಿ, ಸಂಸ್ಥೆ ಹಾಗೂ ಶಿಕ್ಷಕರಿಗೆ ಪ್ರತಿ ವರ್ಷ ಸರ್ಕಾರದಿಂದ ನೀಡಲಾಗುವ 2013 ನೇ ಸಾಲಿನ 'ಅಂಗವಿಕಲರ ವಿಶೇಷ ರಾಜ್ಯ ಪ್ರಶಸ್ತಿ' ಪ್ರಕಟವಾಗಿದೆ. ಅಂಗವಿಕಲರ ವೈಯಕ್ತಿಕ ಪ್ರಶಸ್ತಿಗೆ 8 ಜನರು, ವಿಶೇಷ ರಾಜ್ಯ ಪ್ರಶಸ್ತಿಗೆ ಐದು ಸಂಸ್ಥೆಗಳು ಹಾಗೂ ಅಂಗವಿಕಲ ಮಕ್ಕಳ ಶಿಕ್ಷಣ ಕ್ಷೇತ್ರದ ಸೇವಾ ಪ್ರಶಸ್ತಿಗೆ ಐವರು ಶಿಕ್ಷಕರನ್ನು ಆಯ್ಕೆ ಮಾಡಲಾಗಿದೆ. ಅಲ್ಲದೆ ಕನ್ನಡ ಚಿತ್ರರಂಗದ ಹಾಸ್ಯ ಚಕ್ರವರ್ತಿ ದಿ.ನರಸಿಂಹರಾಜು ಅವರಿಗೆ ವಿಶೇಷ ವೈಯಕ್ತಿಕ ಮರಣೋತ್ತರ ಪ್ರಶಸ್ತಿ ಘೋಷಿಸಲಾಗಿದೆ.

- **ವೈಯಕ್ತಿಕ ಪ್ರಶಸ್ತಿ:** ಸಿದ್ದರಾಜು - ಬೆಂಗಳೂರು, ಚಿದಂಬರಂ ವಿಷ್ಣು ಜೋಶಿ - ಬೆಂಗಳೂರು, ಎಲ್.ಶೇಖರ ನಾಯಕ - ಬೆಂಗಳೂರು, ಬಾಲಾಜಿ - ಮೈಸೂರು, ಸಿ. ಸುರೇಶ ನಾಯಕ - ಪುತ್ತೂರು, ಶಬಾನಾ ಭಾನು - ದೇವದುರ್ಗ, ಮಲ್ಲಿಕಾರ್ಜುನ ಖೇಡ - ಜಾಪೂರ, ಭೀಮಾಶಂಕರ - ಗುಲ್ಬರ್ಗ
- **ಪ್ರಶಸ್ತಿ ಪಡೆದ ಸಂಸ್ಥೆಗಳು:** ಮಾತೃ ಶ್ರೀ ಮನೋವಿಕಾಸ ಬುದ್ಧಿಮಾಂದ್ಯ ಮಕ್ಕಳ ಶಾಲೆ, ಬೆಂಗಳೂರು. ಆಕಾಶದೀಪ ಅಂಗವಿಕಲ ಸರ್ವ ಅಭಿವೃದ್ಧಿ ಸೇವಾ ಸಂಸ್ಥೆ ಕಲಕಲ್ಲ, ಹುನಗುಂದ ತಾಲೂಕು. ವಿದ್ಯಾರಣ್ಯ, ಬೆಂಗಳೂರು. ಶ್ರೀ ವಿನಾಯಕ ಎಜುಕೇಷನ್ ಸೊಸೈಟಿ, ದಾವಣಗೆರೆ. ಆಲಂಭಾ ಚಾರಿಟಬಲ್ ಟ್ರಸ್ಟ್, ಬೆಂಗಳೂರು.
- **ವಿಶೇಷ ಶಿಕ್ಷಕ ಪ್ರಶಸ್ತಿ:** ಸುಧಾವತಿ ರಾಘವೇಂದ್ರ ಮಿಟ್ಟಿಮನಿ, ಬೆಳಗಾವಿ. ಮೀನಾಕ್ಷಮ್ಮ ಪಾಟೀಲ್, ಗುಲ್ಬರ್ಗ. ರೋಹಿಣಿ, ಬೆಂಗಳೂರು. ಗಂಗಾಧರ, ಮೈಸೂರು. ಫಿಲೋಮಿನಾ ಜೆಸಿಂತಾ ಎಲ್ವಿರ ಡಿಮೆಲ್ಲೋ, ಮಂಗಳೂರು.

# ಸುದ್ಧಿಯಲ್ಲಿರುವ ವ್ಯಕ್ತಿಗಳು

## ಶತಕೋಟ್ಯಾಧೀಶರನ್ನು ಹೊಂದಿರುವ ವಿಶ್ವದ ಅತೀ ಶ್ರೀಮಂತರ ಪಟ್ಟಿಯಲ್ಲಿ ಭಾರತಕ್ಕೆ ಆರನೇ ಸ್ಥಾನ

ಭಾರತವು ಫ್ರಾನ್ಸ್, ಸೌದಿ ಅರೇಬಿಯಾ, ಸ್ವಿಟ್ಜರ್ಲೆಂಡ್ ಮತ್ತು ಹಾಂಕಾಂಗ್‌ಗಳಿಗಿಂತ ಹೆಚ್ಚಿನ ಸಂಖ್ಯೆಯ ಶತಕೋಟ್ಯಧೀಶರನ್ನು ಹೊಂದಿದ್ದು ಸದ್ಯ ವಿಶ್ವದ ಅತೀ ಶ್ರೀಮಂತರ ರಾಷ್ಟ್ರಗಳ ಯಾದಿಯಲ್ಲಿ ಆರನೇ ಸ್ಥಾನದಲ್ಲಿದೆ. ಇದೀಗ ಭಾರತವು 103 ಮಂದಿ ಶತಕೋಟ್ಯಧೀಶರನ್ನು ಹೊಂದಿದೆಯಾದರೂ ಇವರ ಮೌಲ್ಯ 157 ಶತಕೋಟ್ಯಧೀಶರು ಇರುವ ಚೀನಾದ ಅರ್ಧದಷ್ಟೂ ಇಲ್ಲ. 'ವೆಲ್ತ್ -ಎಕ್ಸ್ ಮತ್ತು ಯುಬಿಎಸ್ ಶತಕೋಟ್ಯಧೀಶರ ಗಣತಿ ವರದಿ-2013'ರಲ್ಲಿ ಈ ಮಾಹಿತಿ ತಿಳಿದುಬಂದಿದೆ.

**ಮುಂಬೈ ಮುಂದು:**

ಭಾರತದ ಆರ್ಥಿಕ ರಾಜಧಾನಿಯಾಗಿರುವ ಮುಂಬೈನಲ್ಲಿ 30 ಮಂದಿ ಶತಕೋಟ್ಯಧೀಶರಿದ್ದು ಗರಿಷ್ಠ ಸಂಖ್ಯೆಯಲ್ಲಿ ಶತಕೋಟ್ಯಧೀಶರನ್ನು ಹೊಂದಿದ ವಿಶ್ವದ ಉನ್ನತ ಐದು ನಗರಗಳ ಪಟ್ಟಿಯಲ್ಲಿ ಕಾಣಿಸಿಕೊಂಡಿದೆ. ವಿಶ್ವದಲ್ಲಿಯೇ ಅತೀ ಗರಿಷ್ಠ ಸಂಖ್ಯೆಯ ಶತಕೋಟ್ಯಧೀಶರನ್ನು ಹೊಂದುವ ಮೂಲಕ ನ್ಯೂಯಾರ್ಕ್ ನಗರವು ಪ್ರಥಮ ಸ್ಥಾನದಲ್ಲಿದ್ದರೆ ಹಾಂಕಾಂಗ್ (75), ಮಾಸ್ಕೊ (74) ಮತ್ತು ಲಂಡನ್ (67) ಕ್ರಮವಾಗಿ ಎರಡು, ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿವೆ.

**ವಾರ್ಷಿಕ ಬೆಳವಣಿಗೆ:**

2012ರ ಜುಲೈನಿಂದ 2013ರ ಜೂನ್‌ವರೆಗಿನ ಅವಧಿಯಲ್ಲಿ ಭಾರತದಲ್ಲಿ ಶತಕೋಟ್ಯಧೀಶರ ಸಂಖ್ಯೆಯಲ್ಲಿ ಇಳಿಕೆಯಾಗಿದ್ದರೂ ಒಟ್ಟು 103 ಶತಕೋಟ್ಯಧೀಶರನ್ನು ಹೊಂದುವ ಮೂಲಕ ವಿಶ್ವದ ಹತ್ತು ಅಗ್ರಮಾನ್ಯ ರಾಷ್ಟ್ರಗಳ ಯಾದಿಯಲ್ಲಿ ತನ್ನ ಆರನೇ ಸ್ಥಾನವನ್ನು ಕಾಯ್ದುಕೊಳ್ಳುವಲ್ಲಿ ಸಫಲವಾಗಿದೆ. 515 ಶತಕೋಟ್ಯಧೀಶರನ್ನು ಹೊಂದಿರುವ ಅಮೆರಿಕ ಪ್ರಥಮ ಸ್ಥಾನದಲ್ಲಿದ್ದರೆ 157 ಮಂದಿ ಶತಕೋಟ್ಯಧೀಶರನ್ನು ಹೊಂದಿರುವ ಚೀನ ದ್ವಿತೀಯ ಸ್ಥಾನದಲ್ಲಿದೆ. ಜರ್ಮನಿ (148), ಬ್ರಿಟನ್ (135) ಮತ್ತು ರಷ್ಯಾ (108) ಕ್ರಮವಾಗಿ ಮೂರು, ನಾಲ್ಕು ಮತ್ತು ಐದನೇ ಸ್ಥಾನದಲ್ಲಿವೆ.

**ಶೇ.5.5 ಕುಸಿತ:**

- ಆದರೆ ವರದಿ ಪ್ರಕಾರ, ಭಾರತದಲ್ಲಿ ಶತಕೋಟ್ಯಧಿಪತಿಗಳ ಸಂಖ್ಯೆಯಲ್ಲಿ ಶೇ. 5.5 ರಷ್ಟು ಕುಸಿತವಾಗಿದ್ದು ಇವರ ಒಟ್ಟು ಸಂಪತ್ತು 10 ಶತಕೋಟಿ ಡಾಲರ್‌ಗಳಷ್ಟು ಇಳಿಕೆ ಕಂಡು 180 ಶತಕೋಟಿ ಡಾಲರ್‌ಗಳಷ್ಟಾಗಿದೆ.
- ವಿಶ್ವದಲ್ಲಿ ಶತಕೋಟ್ಯಧಿಪತಿಗಳ ಸಂಖ್ಯೆಯಲ್ಲಿ ಶೇ.0.5 ರಷ್ಟು ಏರಿಕೆಯಾಗಿದ್ದು ಇವರ ಒಟ್ಟು ಸಂಪತ್ತಿನ ಮೌಲ್ಯ ಶೇ. 5.3 ರಷ್ಟು ವೃದ್ಧಿಯಾಗಿದೆ.
- ಸದ್ಯ ವಿಶ್ವದಲ್ಲಿ 2,170 ಮಂದಿ ಶತಕೋಟ್ಯಧೀಶರಿದ್ದು ಇವರ ಒಟ್ಟಾರೆ ಸಂಪತ್ತಿನ ಮೌಲ್ಯ 6.5 ಲಕ್ಷ ಕೋಟಿ ಡಾಲರ್ ಗಳಷ್ಟಾಗಿದೆ. ಇದು ಅಮೆರಿಕ ಮತ್ತು ಚೀನ ದೇಶಗಳನ್ನು ಹೊರತುಪಡಿಸಿದಂತೆ ವಿಶ್ವದ ಉಳಿದೆಲ್ಲಾ ರಾಷ್ಟ್ರಗಳ ಜಿಡಿಪಿಗಿಂತ ಅಧಿಕವಾಗಿದೆ.

- ಭಾರತದಲ್ಲಿ ಶತಕೋಟ್ಯಧೀಶರು ಕೈಗಾರಿಕೆ ಮತ್ತು ಫಾರ್ಮಾಸೆಟಿಕಲ್ ಉದ್ಯಮಗಳಲ್ಲಿ ತಮ್ಮನ್ನು ಹೆಚ್ಚಾಗಿ ತೊಡಗಿಸಿಕೊಂಡಿದ್ದಾರೆ ಎಂದು ವರದಿ ತಿಳಿಸಿದೆ.

**ವಿಶ್ವದ ಅತ್ಯಂತ ಪ್ರಭಾವಿ ಸಿಖ್ ಮುಖಂಡರಾಗಿ ಪ್ರಧಾನಿ ಮನಮೋಹನ್ ಸಿಂಗ್**

ಪ್ರಧಾನಿ ಮನಮೋಹನ್ ಸಿಂಗ್ ಅವರನ್ನು ಸಿಖ್ ಸಮುದಾಯದಲ್ಲಿನ ವಿಶ್ವದ ಅತ್ಯಂತ ಪ್ರಭಾವಿ ಮುಖಂಡ ಎಂದು ಇಲ್ಲಿ ಪ್ರಕಟಗೊಂಡಿರುವ 'ಸಿಖ್ 100' ವಾರ್ಷಿಕ ಸಂಚಿಕೆಯ ಮೊದಲ ಆವೃತ್ತಿಯಲ್ಲಿ ಉಲ್ಲೇಖಿಸಲಾಗಿದೆ. ಸಿಂಗ್ ಅವರನ್ನು ಉನ್ನತ ಮಟ್ಟದ ಚಿಂತಕ ಮತ್ತು ವಿದ್ವಾಂಸ ಎಂದೂ ಶ್ಲಾಘಿಸಲಾಗಿದೆ. ಯೋಜನಾ ಆಯೋಗದ ಉಪಾಧ್ಯಕ್ಷ ಮೊಂಟೆಕ್ ಸಿಂಗ್ ಅಹ್ಲುವಾಲಿಯಾ ಅವರು ಸಮುದಾಯದ ಅತ್ಯಂತ ಪ್ರಭಾವಿ ಮುಖಂಡರ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ.

**ಡೇವಿಡ್ ಕ್ಯಾಮರಾನ್ ಗೆ ಸನ್ಮಾನ:**

ಸಿಖ್ ಸಮುದಾಯದ ಒಳಿತು ಬಯಸಿದ್ದಕ್ಕಾಗಿ ಬ್ರಿಟನ್ ಪ್ರಧಾನಿ ಡೇವಿಡ್ ಕ್ಯಾಮರಾನ್ ಅವರನ್ನು ಸಿಖ್ ಸಮುದಾಯದವರು ವಿಶೇಷ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು. ಇಲ್ಲಿಯ ಡೌನಿಂಗ್ ಸ್ಟ್ರೀಟ್‌ನಲ್ಲಿರುವ ಹಿಲ್ಟನ್ ಹೋಟೆಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿ ನೀಡಲಾಯಿತು. ಈ ವರ್ಷದ ಆರಂಭದಲ್ಲಿ ಕ್ಯಾಮರಾನ್ ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸ್ವರ್ಣ ಮಂದಿರಕ್ಕೆ ಭೇಟಿ ನೀಡಿದ್ದನ್ನು ಪ್ರಶಸ್ತಿ ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಅಮೃತಸರದಲ್ಲಿರುವ ಜಲಿಯನ್ ವಾಲಾ ಬಾಗ್ ಉದ್ಯಾನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅಮೃತಸರ ಹತ್ಯಾಕಾಂಡಾ ಸ್ಮಾರಕಕ್ಕೆ ಮಾಲಾರ್ಪಣೆ ಮಾಡಿದ ಅವರು, ಬ್ರಿಟಿಷ್ ಅಧ್ಯಾಯದಲ್ಲಿ ಇದೊಂದು ಅವಮಾನಕರ ಘಟನೆ ಎಂದಿದ್ದರು ಎನ್ನುವುದನ್ನೂ ಪತ್ರದಲ್ಲಿ ತಿಳಿಸಲಾಗಿದೆ.

**ವಿಪ್ರೋ ಸಂಸ್ಥೆ ಅಧ್ಯಕ್ಷ ಅಜೀಂ ಪ್ರೇಮ್ ಜೀ ಭಾರತದ ನಂ.1 ದಾನಿ**

ಬಡ ಮಕ್ಕಳಿಗೆ ಶಿಕ್ಷಣ, ಆರೋಗ್ಯ ಸೇರಿದಂತೆ ಹಲವು ಸೇವೆಗಳನ್ನು ನೀಡುವ ಸಲುವಾಗಿ ದೇಣಿಗೆ ನೀಡುವುದರಲ್ಲಿ ವಿಪ್ರೋ ಸಂಸ್ಥೆ ಅಧ್ಯಕ್ಷ ಅಜೀಂ ಪ್ರೇಮ್‌ಜೀ ಅವರು ದೇಶದಲ್ಲೇ ಮೊದಲ ಸ್ಥಾನದಲ್ಲಿದ್ದಾರೆ. 2013ರಲ್ಲಿ ಭಾರತದಲ್ಲಿ ಅತಿ ಹೆಚ್ಚು ದೇಣಿಗೆ ನೀಡಿದವರ ಪಟ್ಟಿಯನ್ನು ಚೀನಾ ಮೂಲದ ಹುರುನ್ ಕಂಪನಿ ಬಿಡುಗಡೆಗೊಳಿಸಿದೆ.

**ಹುರುನ್ ಕಂಪನಿ ಪಟ್ಟಿ:**

- ಈ ಪಟ್ಟಿಯಲ್ಲಿ ಪ್ರೇಮ್‌ಜೀ ಅವರು 8 ಸಾವಿರ ಕೋಟಿ ರೂ. ದಾನ ನೀಡುವ ಮೂಲಕ ಅಗ್ರಸ್ಥಾನ ಗಿಟ್ಟಿಸಿಕೊಂಡಿದ್ದಾರೆ.
- ಎರಡನೇ ಸ್ಥಾನದಲ್ಲಿರುವ ಎಚ್‌ಸಿಎಲ್ ಗ್ರೂಪ್ ಅಧ್ಯಕ್ಷ ಶಿವ ನಾಡಾರ್ 3000 ಕೋಟಿ ರೂ. ದೇಣಿಗೆ ನೀಡಿದ್ದರೆ,
- ಜಿಎಂಆರ್ ವರಲಕ್ಷ್ಮಿ ಫೌಂಡೇಷನ್ ಸಂಸ್ಥೆ ಮುಖ್ಯಸ್ಥ ಜಿ.ಎಂ.ರಾವ್ ಅವರು 740 ಕೋಟಿ ರೂ. ದೇಣಿಗೆ ನೀಡಿದ್ದಾರೆ.

- 2012 ಏಪ್ರಿಲ್ 1ರಿಂದ 2013 ಮಾರ್ಚ್ 31ರವರೆಗೆ 10 ಕೋಟಿ ರೂ.ಗೂ ಅಧಿಕ ದೇಣಿಗೆ ನೀಡಿದ 31 ಭಾರತೀಯರ ಪಟ್ಟಿಯನ್ನು ಹುರುನ್ ಬಿಡುಗಡೆ ಮಾಡಿದೆ.
- ದಾನಿಗಳು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದು ಈ ಕ್ಷೇತ್ರಕ್ಕೆ 12200 ಕೋಟಿ ರೂ. ದೇಣಿಗೆ ನೀಡಿದ್ದಾರೆ.
- ನಂತರದಲ್ಲಿ ಸಾಮಾಜಿಕ ಅಭಿವೃದ್ಧಿ (1210 ಕೋಟಿ ರೂ.), ಆರೋಗ್ಯ (1065 ಕೋಟಿ ರೂ.), ಗ್ರಾಮೀಣಾಭಿವೃದ್ಧಿ (565 ಕೋಟಿ ರೂ.), ಪರಿಸರ ಕಾಳಜಿ (170 ಕೋಟಿ ರೂ.) ಮತ್ತು ಕೃಷಿ (40 ಕೋಟಿ ರೂ.) ಕ್ಷೇತ್ರಕ್ಕೆ ದೇಣಿಗೆ ನೀಡಿದ್ದಾರೆ.

**ಭಾರತೀಯ ಮೂಲದ ವೈದ್ಯ ಡಾ. ವಿವೇಕ್ ಹಳ್ಳೆಗೆರೆ ಮೂರ್ತಿ ಅಮೆರಿಕಾದ ಪ್ರಧಾನ ವೈದ್ಯಾಧಿಕಾರಿ**

ಭಾರತೀಯ ಮೂಲದ ವೈದ್ಯ ಡಾ.ವಿವೇಕ್ ಹಳ್ಳೆಗೆರೆ ಮೂರ್ತಿ ಅವರನ್ನು ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾ ಅವರು ಮುಂದಿನ ಪ್ರಧಾನ ವೈದ್ಯಾಧಿಕಾರಿ ಹುದ್ದೆಗೆ ನಾಮನಿರ್ದೇಶನ ಮಾಡಿದ್ದಾರೆ. ಸದ್ಯ ಬ್ರಿಗ್‌ಹ್ಯಾಂನಲ್ಲಿ ಆಸ್ಪತ್ರೆಯ ಸಹ ಸಂಸ್ಥಾಪಕ ವೈದ್ಯರಾಗಿರುವ ಮೂರ್ತಿ ಅವರು ಅಮೆರಿಕ ಅಧ್ಯಕ್ಷರ ವೈದ್ಯರಲ್ಲಿ ಒಬ್ಬರಾಗಿದ್ದಾರೆ. ಒಂದೊಮ್ಮೆ ಒಬಾಮಾ ಅವರ ನಿರ್ಧಾರವನ್ನು ಸೆನೆಟ್ ಬೆಂಬಲಿಸಿದರೆ ಸಾರ್ವಜನಿಕ ಆರೋಗ್ಯ ವಿಷಯಗಳ ಕುರಿತಾಗಿ ಗಮನಹರಿಸುವ ಪ್ರಧಾನ ವೈದ್ಯಾಧಿಕಾರಿ ಹುದ್ದೆಯನ್ನು ವಿವೇಕ್ ಅಲಂಕರಿಸಲಿದ್ದಾರೆ.

**ಆರೋಗ್ಯ ಸೇವೆಯ ಕಾಯ್ದೆ:**

2009ರಲ್ಲಿ ಒಬಾಮಾ ಅವರಿಂದ ಪ್ರಧಾನ ವೈದ್ಯಾಧಿಕಾರಿಯಾಗಿ ನೇಮಕಗೊಂಡಿದ್ದ ರೆಜಿನಾ ಬೆಂಜಮಿನ್ ಅವರು ಕಳೆದ ಬೆಸಿಗೆಯಲ್ಲಿ ಸ್ಥಾನ ತೆರವುಗೊಳಿಸಿದ್ದರು. ಮೂರ್ತಿ ಅವರು 2011ರಲ್ಲಿ ರೋಗ ಸಾರ್ವಜನಿಕ ಆರೋಗ್ಯ ಉತ್ತೇಜಿಸುವ ಅಧ್ಯಕ್ಷರ ಸಲಹಾ ಸಮಿತಿಗೆ ನೇಮಕಗೊಂಡಿದ್ದಾರೆ. ಕೈಗೆಟುಕುವ ಆರೋಗ್ಯ ಸೇವೆಯ ಕಾಯ್ದೆ ಮತ್ತು ಆರೋಗ್ಯ ಸುಧಾರಣೆ ಕಾನೂನಿನ ಭಾಗವಾಗಿ ಸಲಹಾ ಸಮಿತಿಯನ್ನು ರಚಿಸಲಾಗುತ್ತದೆ. ಮೂರ್ತಿ ಅವರ ಗುಂಪಿನ ವೈದ್ಯರು ಅಮೆರಿಕದವರಾಗಿದ್ದು, ಈ ಗುಂಪನ್ನು ಒಬಾಮಾ ವೈದ್ಯರೆಂದೇ ಕರೆಯಲಾಗುತ್ತದೆ. ಇದು ಚುನಾವಣೆ ವೇಳೆ ಒಬಾಮಾ ಪರ ಪ್ರಚಾರ ನಡೆಸುತ್ತದೆ.

**ವಿವೇಕ್ ಬಗ್ಗೆ:**

- ಭಾರತ ಮತ್ತು ಅಮೆರಿಕ ಸೇರಿದಂತೆ ವಿಶ್ವದಾದ್ಯಂತ ಎಚ್ಐವಿ/ಏಡ್ಸ್ ಕುರಿತಾದ ಶಿಕ್ಷಣ ನೀಡುತ್ತಿರುವ `ವಿಜನ್ಸ್' ಎಂಬ ಸೇವಾ ಸಂಘಟನೆಯನ್ನು 1995ರಲ್ಲಿ ಹುಟ್ಟುಹಾಕುವಲ್ಲಿ ಶ್ರಮಿಸಿದ ಮೂರ್ತಿ ಅವರು 2000ರ ವರೆಗೆ ಅಧ್ಯಕ್ಷರಾಗಿ ಮತ್ತು 2000-2003ರ ವರೆಗೆ ಮಂಡಳಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.
- ಹಾರ್ವರ್ಡ್ ವಿಶ್ವವಿದ್ಯಾಲಯದಿಂದ ಬಿಎ ಪದವಿ, ಯಾಲೆಯ ಮ್ಯಾನೇಜ್‌ಮೆಂಟ್ ಸ್ಕೂಲ್‌ನಿಂದ ಎಂಬಿಎ ಪದವಿ ಹಾಗೂ ಯಾಯೆಯ ಸ್ಕೂಲ್ ಆಫ್ ಮೇಡಿಸಿನ್‌ನಿಂದ ಎಂಡಿ ಪದವಿ ಪಡೆದಿದ್ದಾರೆ.
- ಮೂರ್ತಿ ಸೇರಿದಂತೆ ಮೂರು ಪ್ರಮುಖ ಹುದ್ದೆಗಳ ನೇಮಕಾತಿ ಕುರಿತಂತೆ ಘೋಷಿಸಿರುವ ಒಬಾಬಾ ಅವರು `ಅಮೆರಿಕ ನಾಗರೀಕರಿಗಾಗಿ ಇವರು ಗಮನಾರ್ಹ ಸೇವೆ ಸಲ್ಲಿಸಿರುವರೆಂಬ ವಿಶ್ವಾಸವನ್ನು ಹೊಂದಿದ್ದಾರೆ ಎಂದು ಹೇಳಲಾಗಿದೆ.

**ಮಾಲ್ಡೀವ್ಸ್‌ನ ನೂತನ ಅಧ್ಯಕ್ಷರಾಗಿ ಅಬ್ದುಲ್ಲಾ ಯಮೀನ್ ಅಬ್ದುಲ್ ಗಯೂಂ ಆಯ್ಕೆ**

ಮಾಲ್ಡೀವ್ಸ್‌ನ ನೂತನ ಅಧ್ಯಕ್ಷರಾಗಿ ಅಬ್ದುಲ್ಲಾ ಯಮೀನ್ ಅಬ್ದುಲ್ ಗಯೂಂ ಅವರು ಅಧಿಕಾರ ವಹಿಸಿಕೊಳ್ಳುವುದರೊಂದಿಗೆ ದೇಶದಲ್ಲಿ ಕಳೆದ ಎರಡು ವರ್ಷಗಳಿಂದ ತಲೆದೋರಿದ್ದ ರಾಜಕೀಯ ಅನಿಶ್ಚತತೆಗೆ ಅಂಕದ ಪರದೆ ಬಿದ್ದಿದೆ.

**ಅಬ್ದುಲ್ ಗಯೂಂ:**

ಮಾಲ್ಡೀವ್ಸ್‌ನ ಮಾಜಿ ಸರ್ವಾಧಿಕಾರಿ ಮೌಮೂನ್ ಅಬ್ದುಲ್ ಗಯೂಂರ ಮಲ ಸಹೋದರನಾಗಿರುವ ಯಮೀನ್ ಅವರಿಗೆ ಸಂಸತ್‌ನ ವಿಶೇಷ ಅಧಿವೇಶನದಲ್ಲಿ ದೇಶದ ಮುಖ್ಯ ನ್ಯಾಯಾಧೀಶ ಅಹ್ಮದ್ ಫೈಜ್ ಅವರು ಅಧಿಕಾರ ಮತ್ತು ಗೌಪ್ಯತೆಯ ಪ್ರಮಾಣವಚನ ಬೋಧಿಸಿದರು. ನೂತನ ಅಧ್ಯಕ್ಷರ ಗೌರವಾರ್ಥವಾಗಿ 21 ಸುತ್ತು ಕುಶಾಲುತೋಪುಗಳನ್ನು ಸಿಡಿಸಲಾಯಿತು. ಇದೇ ವೇಳೆ ಮೊಹಮ್ಮದ್ ಜಮೀಲ್ ಅವರು ಉಪಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು. ಮಾಲ್ಡೀವ್ಸ್‌ನ ಪ್ರಗತಿಪರ ಪಕ್ಷ (ಪಿಪಿಎಂ)ನ ಅಭ್ಯರ್ಥಿಯಾಗಿರುವ 54ರ ಹರೆಯದ ಯಮೀನ್ ಅವರು ಅರ್ಥಶಾಸ್ತ್ರಜ್ಞರಾಗಿದ್ದಾರೆ. ಇಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಅವರು ಶೇ.51.39 ಮತಗಳನ್ನು ಪಡೆಯುವ ಮೂಲಕ ವಿಪಕ್ಷ ಅಭ್ಯರ್ಥಿ ಮೊಹಮ್ಮದ್ ನಶೀದ್ ಅವರನ್ನು ಪರಾಭವಗೊಳಿಸಿ ಅನಿರೀಕ್ಷಿತ ಗೆಲುವು ಸಾಧಿಸಿದ್ದರು. ನಶೀದ್ ಅವರಿಗೆ ಶೇ.48.61ರಷ್ಟು ಮತಗಳು ಲಭಿಸಿದುವು.

**ಪ್ರತಿಷ್ಠಿತ DSC ಸಾಹಿತ್ಯ ಪ್ರಶಸ್ತಿ ಸ್ಪರ್ಧೆಯಲ್ಲಿ ಭಾರತದ ಮೂವರು ಸಾಹಿತಿಗಳು**

ದಕ್ಷಿಣಾ ಏಷ್ಯಾದ ಪ್ರತಿಷ್ಠಿತ ಸಾಹಿತ್ಯ ಪ್ರಶಸ್ತಿಯ ಸ್ಪರ್ಧೆಯಲ್ಲಿ ಈ ಬಾರಿ ಭಾರತದ ಮೂವರು ಸಾಹಿತಿಗಳು ತೀವ್ರ ಪ್ರತಿಸ್ಪರ್ಧೆಯನ್ನು ಒಡ್ಡುವ ಮೂಲಕ ಪ್ರಶಸ್ತಿ ಆಕಾಂಕ್ಷಿಗಳ ಕಣದಲ್ಲಿದ್ದಾರೆ. ಪಾಕಿಸ್ತಾನದ ಮೊಹಸೀನ್ ಹಮೀದ್ ಮತ್ತು ನದೀಮ್ ಅಸ್ಲಾಂ ಸೇರಿದಂತೆ ಭಾರತ ಮೂವರು ಸಾಹಿತಿಗಳು ಸೇರಿ ಒಟ್ಟು ಆರು ಸಾಹಿತಿಗಳಲ್ಲಿ ಈ ಪ್ರತಿಷ್ಠಿತ ಪ್ರಶಸ್ತಿ ಯಾರಿಗೆ ಒಲಿಯಲಿದೆ ಎನ್ನುವುದು ಕುತೂಹಲ ಮೂಡಿಸಿದೆ. ಪ್ರಶಸ್ತಿಯ ವಿಜೇತರನ್ನು ಜನವರಿಯಲ್ಲಿ ನಡೆಯಲಿರುವ ಜೈಪುರ ಸಾಹಿತ್ಯ ಸಮ್ಮೇಳನದಲ್ಲಿ ಪ್ರಕಟಿಸಲಾಗುವುದು,

**ಭಾರತದ ಸಾಹಿತಿಗಳು**:

ಪ್ರತಿಷ್ಠಿತ ಪ್ರಶಸ್ತಿಗೆ ಸ್ಪರ್ಧೆಯಲ್ಲಿರುವ ಮೂವರು ಸಾಹಿತಿಗಳೆಂದರೆ:

- ಬೆನ್ಯಮಿನ್ ರವರ “ಗೋಟ್ ಡೇಸ್ (Goat Days)” (ಮಲೆಯಾಳಂ ನ ಅನುವಾದ ಕೃತಿ)
- ಆನಂದ್ ರವರ “ಡಿಸ್ಟ್ರಕಷನ್ (Destruction)” (ಮಲೆಯಾಳಂ ನ ಅನುವಾದ ಕೃತಿ)
- ಸಿರಸ್ ಮಿಸ್ತ್ರಿ ರವರ “ಕ್ರೊನಿಕಲ್ ಆಫ್ ಎ ಕರ್ಪ್ಸ್ ಬಿಯರೆರ್ (Chronicle of a Corpse Bearer)”

**ಸ್ಪರ್ಧೆಯಲ್ಲಿರುವ ಇತರೆ ಕೃತಿಗಳು:**

- ಪಾಕಿಸ್ತಾನ ಹಮೀದ್ ರವರ ಕೃತಿ "ಹೌ ಟು ಗೆಟ್ ಫಿಲ್ತಿ ರಿಚ್ ಇನ್ ರೈಸಿಂಗ್ ಏಷ್ಯಾ". ಹಮೀದ್ ಅವರ "ರಿಲೆಕ್ಟಂಟ್ ಫಂಡ್ ಮೆಂಟಲಿಸ್ಟ್" ಮತ್ತು "ಮಾತ್ ಸ್ಮೋಕ್" ಈ ಮುಂಚೆ ವಿಮರ್ಶಕರ ಪ್ರಶಂಸೆಯನ್ನು ಗಳಿಸಿದ ಕೃತಿಗಳು.
- ನದೀಮ್ ಅಸ್ಲಂ ಅವರ "ಬ್ಲೈಂಡ್ ಮ್ಯಾನ್ ಗಾರ್ಡನ್" ಈ ಬಾರಿ ಸ್ಪರ್ಧೆಯಲ್ಲಿರುವ ಕೃತಿ,

**DSC ಪ್ರಶಸ್ತಿ:**

- DSC ಪ್ರಶಸ್ತಿ ದಕ್ಷಿಣ ಏಷ್ಯಾ ಸಾಹಿತ್ಯಕ್ಕೆ ನೀಡಲಾಗುವ ಪ್ರತಿಷ್ಠಿತ ಸಾಹಿತ್ಯ ಪ್ರಶಸ್ತಿ. ಈ ಪ್ರಶಸ್ತಿಯನ್ನು ವಾರ್ಷಿಕವಾಗಿ ನೀಡಲಾಗುತ್ತದೆ, ದಕ್ಷಿಣ ಏಷ್ಯಾದ ರಾಜಕೀಯ, ಇತಿಹಾಸ ಅಥವಾ ಜನರಿಗೆ ಸಂಬಂಧಿಸಿದಂತೆ ರಚಿಸಲಾಗುವ ಕೃತಿಗಳಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

**ಇದುವರೆಗೂ ಪ್ರಶಸ್ತಿಯನ್ನು ಗೆದ್ದಿರುವ ಸಾಹಿತಿಗಳು:**

- 2011: ಹೆಚ್.ಎಂ.ನಾಕ್ವಿ (ಹೋಮ್ ಬಾಯ್)
- 2012:ಶೇಶನ್ ಕರುನತಿಲಕ (ರ್ಯಾಂಡಮ್ ಹೌಸ್)
- 2013: ಜೀತ್ ಥಾಯಿಲ್ (ನಾರ್ಕೊಪೊಲಿಸ್)

## <u>ಚೀನಾ ಅಕಾಡೆಮಿ ಆಫ್ ಸೈನ್ಸ್ ಗೆ ನೇಮಕಗೊಂಡ ಸಿ.ಎನ್.ಆರ್.ರಾವ್</u>

ಖ್ಯಾತ ವಿಜ್ಞಾನಿ ಹಾಗೂ ಭಾರತ ರತ್ನ ಪುರಸ್ಕೃತ ಸಿ.ಎನ್,ಆರ್.ರಾವ್ ಅವರು ಚೀನಾ ಅಕಾಡೆಮಿ ಆಫ್ ಸೈನ್ಸ್ ಗೆ ನೇಮಕಗೊಂಡ ಭಾರತದ ಮೊದಲ ವಿಜ್ಞಾನಿ ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ.

- ಖ್ಯಾತ ವಿಖ್ಯಾತ ನೊಬೆಲ್ ಪ್ರಶಸ್ತಿಯನ್ನು ಒಳಗೊಂಡಿರುವ "ಚೀನಾ ಅಕಾಡೆಮಿ ಆಫ್ ಸೈನ್ಸ್" ಗೆ ಆಯ್ಕೆಯಾದ ಭಾರತದ ಮೊದಲ ವಿಜ್ಞಾನಿ.
- ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿಯಲ್ಲಿ ಜನಿಸಿರುವ ರಾವ್ ಅವರು ಬೆಂಗಳೂರಿನಲ್ಲಿರುವ "ಜವಹಾರ್ ಲಾಲ್ ನೆಹರೂ ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರಿಸರ್ಚ್" ಸಂಸ್ಥೆಯ ಸಂಸ್ಥಾಪಕರು.
- ವಿಜ್ಞಾನ ಕ್ಷೇತ್ರಕ್ಕೆ ರಾವ್ ನೀಡಿರುವ ಗಣನೀಯ ಕೊಡುಗೆಯನ್ನು ಗಮನಿಸಿ ಭಾರತ ಸರ್ಕಾರ ಅವರಿಗೆ ಇತ್ತೀಚೆಗೆ ಭಾರತ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.
- ರಾವ್ ಅವರು ಈ ಹಿಂದೆ ರಾಯಲ್ ಸೊಸೈಟಿ ಆಫ್ ಲಂಡನ್, ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸ್ (ಯುಎಸ್ಎ), ಜಪಾನ್ ಅಕಾಡೆಮಿ ಆಫ್ ಸೈನ್ಸ್ ಸೇರಿದಂತೆ ವಿಶ್ವದ ಇತರೆ ಪ್ರತಿಷ್ಠಿತ ಅಕಾಡೆಮಿಗಳಿಗೆ ನೇಮಕಗೊಂಡಿದ್ದಾರೆ.

- ಪ್ರಧಾನಿ ಮಂತ್ರಿಯವರ ವೈಜ್ಞಾನಿಕ ಸಮಿತಿಯ ಸಲಹೆಗಾರರಾಗಿರುವ ರಾವ್ ಅವರು ಸುಮಾರು 60 ಕ್ಕೂ ಹೆಚ್ಚು ಡಾಕ್ಟರೇಟ್ ಪದವಿಗಳನ್ನು ಪಡೆದಿದ್ದಾರೆ.

**ವಿಶ್ವದ ಅತಿ ವೇಗದ ಕಂಪ್ಯೂಟರ್ ಆಗಿ ಮತ್ತೆ ಸ್ಥಾನ ಪಡೆದ ಚೀನಾದ "Tianhe-2"**

ವಿಶ್ವದ ಟಾಪ್-500 ಸೂಪರ್ ಕಂಪ್ಯೂಟರ್ ಗಳ ಪೈಕಿ ಚೀನಾದ Tianhe-2 ಕಂಪ್ಯೂಟರ್ ವಿಶ್ವದ ಅತ್ಯಂತ ವೇಗದ ಕಂಪ್ಯೂಟರ್ ಎನ್ನುವ ಖ್ಯಾತಿಗೆ ಪಾತ್ರವಾಗಿದೆ. ವಿಶ್ವದ ಸೂಪರ್ ಕಂಪ್ಯೂಟರ್ ಗಳ ಪಟ್ಟಿಯನ್ನು ಎರಡು ವರ್ಷಕ್ಕೊಮ್ಮೆ ಬಿಡುಗಡೆಗೊಳಿಸಲಾಗುತ್ತದೆ. "ಜರ್ಮನ್ ಯುನಿರ್ವಸಿಟಿ ಆಫ್ ಮನ್ನಹೈಮ್" ನ ಪ್ರೋಫೆಸರ್ ಗಳ ತಂಡ ಈ ಪಟ್ಟಿಯನ್ನು ತಯಾರಿಸುತ್ತದೆ.

- "Tianhe-2" ರ ಅನುವಾದದ ಅರ್ಥ "ಮಿಲ್ಕಿ ವೇ-2". "ಚೀನಾ ನ್ಯಾಷನಲ್ ಯೂನಿವರ್ಸಿಟಿ ಆಫ್ ಡಿಫೆನ್ಸ್" ಈ ಕಂಪ್ಯೂಟರ್ ಅನ್ನು ಅಭಿವೃದ್ಧಿ ಪಡಿಸಿದೆ. ಪ್ರಸ್ತುತ Tianhe-2 ಚೀನಾದ ಗುವಾಂಗ್ಜು ನಗರದಲ್ಲಿದೆ.
- ಅಮೆರಿಕಾದ ಟೈಟಾನ್ ಕಂಪ್ಯೂಟರ್ ಜಗತ್ತಿನ ಎರಡನೇ ಅತ್ಯಂತ ಸೂಪರ್ ವೇಗದ ಕಂಪ್ಯೂಟರ್.
- Tianhe-2 ಕಂಪ್ಯೂಟರ್ 33.86 ಪೆಟಾಪ್ಲಾಫ್/ಸೆಕೆಂಡ್ ವೇಗದಲ್ಲಿ ಕಾರ್ಯನಿರ್ವಹಸಲಿದೆ. ಅಂದರೆ 33,863 ಟ್ರಿಲಿಯನ್ ಕ್ಯಾಲುಕೇಶನ್/ಸೆಕೆಂಡ್.
- ಭಾರತದ ಇನ್ಸ್ ಸ್ಟಿಟ್ಯೂಟ್ ಆಫ್ ಮೆಟ್ರಿಯಲಾಜಿಕಲ್ ಸಂಸ್ಥೆಯಲ್ಲಿರುವ ಕಂಪ್ಯೂಟರ್ ವಿಶ್ವದ ಸೂಪರ್ ಕಂಪ್ಯೂಟರ್ ಗಳ ಪಟ್ಟಿಯಲ್ಲಿ 44 ನೇ ಸ್ಥಾನವನ್ನು ಗಳಿಸಿದೆ.

**ಕಲೆ ಮತ್ತು ಮಾನವೀಯತೆಗಾಗಿನ ಅಧ್ಯಕ್ಷರ ಸಮಿತಿಯ ಸದಸ್ಯರಾಗಿ ಕಲ್ಪೇನ್ ಹಿತೇಶ್ ಮೋದಿ ನೇಮಕ**

ಕಲೆ ಮತ್ತು ಮಾನವೀಯತೆಗಾಗಿನ ಅಧ್ಯಕ್ಷರ ಸಮಿತಿಯ ಸದಸ್ಯರನ್ನಾಗಿ ಜನಪ್ರಿಯ ಭಾರತೀಯ ಅಮೆರಿಕನ್ ನಟ ಮತ್ತು ಶ್ವೇತ ಭವನದ ಮಾಜಿ ನೌಕರ ಕಾಲ್ ಪೆನ್ ಅಲಿಯಾಸ್ ಕಲ್ಪೇನ್ ಹಿತೇಶ್ ಮೋದಿ ಅವರನ್ನು ಅಧ್ಯಕ್ಷ ಬರಾಕ್ ಒಬಾಮಾ ನೇಮಕ ಮಾಡಿದ್ದಾರೆ.

**ನೇಮಕದ ಹಿನ್ನೆಲೆ:**

ಒಬಾಮಾ ಅವರ ಪ್ರಥಮ ಅಧ್ಯಕ್ಷೀಯ ಅವಧಿಯಲ್ಲಿ ಕಾಲ್ ಪೆನ್ ಅವರು ಶ್ವೇತಭವನದ ನೌಕರರಾಗಿ ಕಾರ್ಯನಿರ್ವಹಿಸಿದ್ದರು. ಕಳೆದ ವರ್ಷ ನಡೆದ ಒಬಾಮಾ ಅವರ ಪುನಾರಾಯ್ಕೆಗಾಗಿನ ಪ್ರಚಾರ ಅಭಿಯಾನದ ವೇಳೆ ಪೆನ್ ಅವರು ಒಬಾಮಾ ಪರವಾಗಿ ಪ್ರಚಾರ ಮಾಡುವ ಮೂಲಕ ಮತದಾರರನ್ನು ಅದರಲ್ಲೂ ಮುಖ್ಯವಾಗಿ ಯುವಜನರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದ್ದರು.

**ಸುರೇಶ್ ಮೋದಿ ಬಗ್ಗೆ:**

ನ್ಯೂಜೆರ್ಸಿಯಲ್ಲಿ ಜನಿಸಿದ ಕಾಲ್ ಪೆನ್ ಅವರ ಮೂಲ ಹೆಸರು ಕಲ್ಪೇನ್ ಸುರೇಶ್ ಮೋದಿ. ನಟ, ಚಿತ್ರಲೇಖಕ ಮತ್ತು ನಿರ್ಮಾಪಕರಾಗಿ ಜನಪ್ರಿಯತೆಯನ್ನು ಪಡೆದಿರುವ ಪೆನ್ ಹೆರಾಲ್ಡ್ ಮತ್ತು ಕುಮಾರ್ ಸರಣಿಯ ಹೆಸರಾಂತ ಚಿತ್ರಗಳನ್ನು ಪ್ರೇಕ್ಷಕರಾಗಿ ನೀಡಿದ್ದಾರೆ. 2009ರಿಂದ 2011ರ ವರೆಗೆ ಸಾರ್ವಜನಿಕ ಸಂಪರ್ಕ ಕಚೇರಿಯಲ್ಲಿ ಸಹಾಯಕ ನಿರ್ದೇಶಕರಾಗಿದ್ದರು.

**ಹೂಡಿಕೆಗೆ ವಿಶ್ವದಲ್ಲೇ ಅತ್ಯಂತ ನೆಚ್ಚಿನ ತಾಣವಾಗಿ ಹೊರಹೊಮ್ಮಿದ ಭಾರತ**

ವಿದೇಶಿ ನೇರ ಬಂಡವಾಳ ಹೂಡಿಕೆಯ ನಿಯಮಗಳನ್ನು ಬಹುತೇಕ ಸಡಿಲಗೊಳಿಸಿರುವ ಭಾರತ, ಹೂಡಿಕೆಗೆ ವಿಶ್ವದಲ್ಲೇ ಅತ್ಯಂತ ನೆಚ್ಚಿನ ತಾಣವಾಗಿ ಹೊರಹೊಮ್ಮಿದೆ. ಈ ಹಾದಿಯಲ್ಲಿ ಚೀನಾ ಮತ್ತು ಅಮೆರಿಕವನ್ನೂ ಭಾರತ ಹಿಂದಿಕ್ಕಿದೆ. 'ಅರ್ನಸ್ಟ್ ಆಯಂಡ್ ಯಂಗ್' ಸಂಸ್ಥೆ ನಡೆಸಿದ ಜಾಗತಿಕ ಸಮೀಕ್ಷೆಯಲ್ಲಿ ಈ ವಿಷಯ ಹೊರಬಿದ್ದಿದೆ. ಭಾರತದ ನಂತರದ ಸ್ಥಾನದಲ್ಲಿ ಬ್ರೆಜಿಲ್ ಮತ್ತು ಚೀನಾ ರಾಷ್ಟ್ರಗಳಿವೆ.

**ನಿಯಮ ಸಡಿಲಿಕೆ:**

- ರೂಪಾಯಿಯ ಮೌಲ್ಯ ಕುಸಿತ ಕಂಡಿರುವುದು ಮತ್ತು ವಿದೇಶಿ ನೇರ ಬಂಡವಾಳ ಹೂಡಿಕೆ ನಿಯಮಗಳಲ್ಲಿ ಸಡಿಲ ಮಾಡಿರುವುದರಿಂದ, ಭಾರತ ಹೂಡಿಕೆಗೆ ವಿಶ್ವದಲ್ಲೇ ಅತ್ಯಂತ ನೆಚ್ಚಿನ ತಾಣವಾಗಿ ಹೊರಹೊಮ್ಮಿದೆ.
- ಕಳೆದ ಆಗಸ್ಟ್ ತಿಂಗಳಿನಲ್ಲಷ್ಟೇ ಕೇಂದ್ರ ಸರ್ಕಾರ, ಚಿಲ್ಲರೆ, ಟೆಲಿಕಾಂ ಸೇರಿದಂತೆ ಹಲವು ವಲಯಗಳಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಇದ್ದ ಮಿತಿಯನ್ನು ಸಡಿಲ ಮಾಡಿತ್ತು. ಇದರ ಜೊತೆಗೆ ಪ್ರಸಕ್ತ ಬೃಹತ್ ಆರ್ಥಿಕತೆಯ ಒತ್ತಡ, ಸಾಲದ ಒತ್ತಡದಿಂದಾಗಿ ಹಲವು ಭಾರತೀಯ ಕಂಪನಿಗಳು ಕೆಲವು ಉದ್ಯಮಗಳಿಂದ ಹೊರಬರುತ್ತಿವೆ. ಹೀಗಾಗಿ ವಿದೇಶಿ ಹೂಡಿಕೆದಾರರಿಗೆ ಭಾರತದಲ್ಲಿ ಹೂಡಿಕೆಗೆ ಹೊಸ ಹೊಸ ಅವಕಾಶಗಳು ಸೃಷ್ಟಿಯಾಗಿವೆ ಎಂದು ಸಂಸ್ಥೆ ಹೇಳಿದೆ.
- ಎರಡು ವರ್ಷಗಳ ಬಳಿಕ ಯುರೋಪ್ ಮತ್ತು ಜರ್ಮನ್ ಹೂಡಿಕೆದಾರರು ಮತ್ತೆ ಭಾರತದತ್ತ ಮುಖ ಮಾಡಿದ್ದಾರೆ. ಆಟೋಮೊಬೈಲ್, ಜೀವ ವಿಜ್ಞಾನ ಮತ್ತು ದಿನಬಳಕೆಯ ಗ್ರಾಹಕ ಉತ್ಪನ್ನಗಳ ಕ್ಷೇತ್ರದಲ್ಲಿ ವಿದೇಶಿ ಹೂಡಿಕೆದಾರರು ಹೆಚ್ಚಿನ ಹೂಡಿಕೆ ಮಾಡಿದ್ದಾರೆ.
- ಇದೇ ವೇಳೆ ಕೆಲ ಭಾರತೀಯ ಕಂಪನಿಗಳು ವಿದೇಶಿ ಕಂಪನಿಗಳ ಖರೀದಿಯಲ್ಲಿ ತೊಡಗಿಸಿಕೊಂಡಿವೆ ಎಂದು ಸಂಸ್ಥೆ ಹೇಳಿದೆ.
- ಇನ್ನು ಅಮೆರಿಕ, ಫ್ರಾನ್ಸ್ ಮತ್ತು ಜಪಾನ್, ಭಾರತದಲ್ಲಿ ಅತಿ ಹೆಚ್ಚಿನ ಹೂಡಿಕೆ ಮಾಡಿದ ಮೂರು ರಾಷ್ಟ್ರಗಳಾಗಿವೆ.

## 'ಟೈಮ್' ಮ್ಯಾಗಜೀನ್ ನ ವರ್ಷದ ವ್ಯಕ್ತಿ ಪ್ರಶಸ್ತಿಯ ಅಂತಿಮ ಸುತ್ತಿಗೆ ನರೇಂದ್ರ ಮೋದಿ

ಅಮೆರಿಕದ ಪ್ರತಿಷ್ಠಿತ 'ಟೈಮ್' ಮ್ಯಾಗಜೀನ್, ತನ್ನ ವರ್ಷದ ವ್ಯಕ್ತಿ ಪ್ರಶಸ್ತಿಗೆ ಅಂತಿಮ 42 ಜನರ ಪಟ್ಟಿಯೊಂದನ್ನು ಸಿದ್ಧಪಡಿಸಿದ್ದು, ಇದರಲ್ಲಿ ಬಿಜೆಪಿ ಪ್ರಧಾನಿ ಅಭ್ಯರ್ಥಿ ನರೇಂದ್ರ ಮೋದಿ ಸ್ಥಾನ ಪಡೆದುಕೊಂಡಿದ್ದಾರೆ. ಪಟ್ಟಿಯಲ್ಲಿ ಸ್ಥಾನ ಪಡೆದ ಏಕೈಕ ಭಾರತೀಯ ರಾಜಕಾರಣಿ, ಮೋದಿ.

**ಮುಂದಿನ ತಿಂಗಳು ಘೋಷಣೆ:**

ಮುಂದಿನ ತಿಂಗಳು ಟೈಮ್ ವರ್ಷದ ವ್ಯಕ್ತಿಯ ಅಂತಿಮ ಹೆಸರನ್ನು ಘೋಷಣೆ ಮಾಡಲಾಗುತ್ತದೆ. ನರೇಂದ್ರ ಮೋದಿ ಅವರನ್ನು, 'ವಿವಾದಿತ ಹಿಂದೂ ರಾಷ್ಟ್ರೀಯವಾದಿ ನಾಯಕ' ಎಂದು ನಿಯತಕಾಲಿಕೆ ಬಣ್ಣಿಸಿದ್ದು, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಆಡಳಿತಾರೂಢ ಕಾಂಗ್ರೆಸ್ ಅನ್ನು ಮಣಿಸಿ ಪ್ರಧಾನಿ ಸ್ಥಾನಕ್ಕೇರುವ ಸಾಧ್ಯತೆ ಹೆಚ್ಚಿದೆ ಎಂದು ಹೇಳಿದೆ.

**ಪಟ್ಟಿಯಲ್ಲಿರುವ ಇತರರು:**

ಉಳಿದಂತೆ ಪಟ್ಟಿಯಲ್ಲಿ ಅಮೆರಿಕ ಅಧ್ಯಕ್ಷ ಬರಾಕ್ ಒಬಾಮಾ, ಪಾಕಿಸ್ತಾನದ ಮಕ್ಕಳ ಶಿಕ್ಷಣ ಹೋರಾಟಗಾರ್ತಿ ಮಲಾಲಾ ಯೂಸುಫ್ಜೈ, ಜಪಾನ್ ಪ್ರಧಾನಿ ಶಿಂಜೋ ಅಬೆ, ಅಮೆಜಾನ್ ಸಿಇಒ ಜೆಫ್ ಬೆಜೋಸ್, ಅಮೆರಿಕದ ರಾಷ್ಟ್ರೀಯ ಭದ್ರತಾ ಸಂಸ್ಥೆಯ ಮಾಜಿ ಉದ್ಯೋಗಿ ಎಡ್ವರ್ಡ್ ಸ್ನೋಡೆನ್ ಮತ್ತು ಇತ್ತೀಚೆಗಷ್ಟೇ ಜನ್ಮತಾಳಿದ ಬ್ರಿಟನ್‌ನ ಯುವರಾಜ ಜಾರ್ಜ್ ಸ್ಥಾನ ಪಡೆದುಕೊಂಡಿದ್ದಾರೆ.

**ಆನ್‌ಲೈನ್‌ನಲ್ಲೂ ಮುಂಚೂಣಿ:**

ಟೈಮ್ ವರ್ಷದ ವ್ಯಕ್ತಿಗೆ ಈಗಾಗಲೇ ಆನ್‌ಲೈನ್ ಮೂಲಕ ಬೆಂಬಲ ವ್ಯಕ್ತಪಡಿಸುವ ಪ್ರಕ್ರಿಯೆ ಆರಂಭಗೊಂಡಿದ್ದು, ನರೇಂದ್ರ ಮೋದಿ 2650 ಮತಗಳನ್ನು (ಚಲಾವಣೆಯಾಗಿದ್ದರಲ್ಲಿ ಶೇ.25ರಷ್ಟು ಪಾಲು) ಗಳಿಸುವ ಮೂಲಕ ಮುಂಚೂಣಿಯಲ್ಲಿದ್ದಾರೆ. ಎರಡನೇ ಸ್ಥಾನದಲ್ಲಿರುವ ಅಮೆರಿಕದ ಮಾಜಿ ಗೂಢಚರ ಎಡ್ವರ್ಡ್ ಸ್ನೋಡೆನ್ ಶೇ.7 ರಷ್ಟು ಮತ ಪಡೆದುಕೊಂಡಿದ್ದಾರೆ.

## ಭಾರತದ ಅತ್ಯಂತ ಸ್ಫೂರ್ತಿದಾಯಕ ಮಹಿಳಾ ರಾಜಕಾರಣಿ ಸೋನಿಯಾ ಗಾಂಧಿ

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಭಾರತದ ಅತ್ಯಂತ ಸ್ಫೂರ್ತಿದಾಯಕ ಮಹಿಳಾ ರಾಜಕಾರಣಿ ಎನ್ನುವ ಖ್ಯಾತಿಗೆ ಪಾತ್ರರಾಗಿದ್ದಾರೆ. ಅಲ್ಲದೇ ಅವರು ತಮ್ಮ ರಾಜಕೀಯ ವೃತ್ತಿ ಮತ್ತು ಕುಟುಂಬವನ್ನು ಸಮರ್ಥವಾಗಿ ನಿಭಾಯಿಸಬಲ್ಲವರಾಗಿದ್ದಾರೆ ಎಂದು ಸಮೀಕ್ಷೆಯೊಂದು ತಿಳಿಸಿದೆ.

**ಸಮೀಕ್ಷೆ ಹೇಗೆ?**

- ಅಂತರ್ಜಾಲದಲ್ಲಿ ವೈವಾಹಿಕ ಸಂಬಂಧಗಳ ಸೇವೆ ಒದಗಿಸುವ ಶಾದಿ.ಕಾಮ್ ನಡೆಸಿದ ಸಮೀಕ್ಷೆಯಲ್ಲಿ ಈ ವಿಷಯ ಹೊರಬಿದ್ದಿದೆ.
- ಈ ಸಮೀಕ್ಷೆಯಲ್ಲಿ ದೇಶದ ವಿವಿಧ ನಗರದ 5,100 ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು.
- ಅಂತರ್ಜಾಲ ಸಮೀಕ್ಷೆಯಲ್ಲಿ ಸೋನಿಯಾಗಾಂಧಿ ಅವರು ಶೇ. 36.2ರಷ್ಟು ಮತಗಳನ್ನು ಸಂಪಾದಿಸುವ ಮೂಲಕ ಈ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.
- ಸೋನಿಯಾ ಅವರ ರಾಜಕೀಯ ಪ್ರತಿಸ್ಪರ್ಧಿ, ಬಿಜೆಪಿ ನಾಯಕಿ ಸುಷ್ಮಾ ಸ್ವರಾಜ್ ಶೇ.33.6 ರಷ್ಟು ಮತದೊಂದಿಗೆ 2ನೇ ಸ್ಥಾನದಲ್ಲಿದ್ದಾರೆ.
- ಕಾರ್ಪೊರೇಟ್ ವಲಯದಲ್ಲಿ ರಿಲಯನ್ಸ್‌ನ ನೀತಾ ಅಂಬಾನಿ (ಶೇ. 35.6) ಅತ್ಯಂತ ಯಶಸ್ವಿ ಮಹಿಳಾ ಉದ್ಯಮಿ ಎನ್ನುವ ಕೀರ್ತಿಗೆ ಪಾತ್ರರಾಗಿದ್ದಾರೆ.
- ನಂತರದ ಸ್ಥಾನಗಳನ್ನು ಬಯೋಕಾನ್ ಕಂಪನಿಯ ಕಿರಣ್ ಮಜುಮ್ದಾರ್, ಐಸಿಐಸಿಐ ಬ್ಯಾಂಕ್‌ನ ಸಿಇಒ ಚಂದಾ ಕೊಚ್ಚರ್ ಮತ್ತು ಆಯಕ್ಸಿಸ್ ಬ್ಯಾಂಕ್‌ನ ಸಿಇಒ ಶಿಖಾ ಶರ್ಮಾ ಪಡೆದಿದ್ದಾರೆ.

**ಕ್ರೀಡಾ ಮತ್ತು ಬಾಲಿವುಡ್ ಕ್ಷೇತ್ರ:**

- ಇನ್ನು ಕ್ರೀಡಾ ಕ್ಷೇತ್ರದಲ್ಲಿ, ಐದು ಬಾರಿಯ ಮಹಿಳಾ ಬಾಕ್ಸಿಂಗ್ ಚಾಂಪಿಯನ್ ಮೇರಿ ಕೋಮ್ ಅತ್ಯಂತ ಯಶಸ್ವಿ ಕ್ರೀಡಾತಾರೆ (ಶೇ.33.5) ಎನಿಸಿದ್ದಾರೆ.
- ನಂತರದ ಸ್ಥಾನವನ್ನು ಬ್ಯಾಡ್ಮಿಂಟನ್ ಆಟಗಾರ್ತಿ ಸೈನಾ ನೆಹವಾಲ್, ಟೆನಿಸ್ ತಾರೆ ಸಾನಿಯಾ ಮಿರ್ಜಾ ಮತ್ತು ಯುವ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು ಪಡೆದಿದ್ದಾರೆ.
- ಬಾಲಿವುಡ್‌ಗೆ ಸಂಬಂಧಿಸಿದಂತೆ ನಟ ಶಾರುಖ್ ಖಾನ್ ಅವರ ಪತ್ನಿ ಗೌರಿ ಖಾನ್ ಅಗ್ರ ಸ್ಥಾನದಲ್ಲಿದ್ದಾರೆ.
- ನಂತರದ ಸ್ಥಾನವನ್ನು ಮಾಜಿ ವಿಶ್ವ ಸುಂದರಿ ಐಶ್ವರ್ಯಾ ರೈ, ಮಾಧುರಿ ದೀಕ್ಷಿತ್ ಮತ್ತು ಕಾಜೋಲ್ ಹಂಚಿಕೊಂಡಿದ್ದಾರೆ.

**ಫೋರ್ಬ್ಸ್ ಮ್ಯಾಗಜೀನ್‌ನ ಭಾರತದ 100 ಶ್ರೀಮಂತರ ಪಟ್ಟಿಯಲ್ಲಿ ಕರ್ನಾಟಕದ 15 ಮಂದಿ**

ಅಮೆರಿಕದ ಫೋರ್ಬ್ಸ್ ಮ್ಯಾಗಜೀನ್ ಭಾರತದ 100 ಶ್ರೀಮಂತರ ಪಟ್ಟಿಯೊಂದನ್ನು ಬಿಡುಗಡೆ ಮಾಡಿದ್ದು, ಅದರಲ್ಲಿ ಕರ್ನಾಟಕದ 15 ಮಂದಿ ಸ್ಥಾನ ಪಡೆದಿದ್ದಾರೆ. ಕರ್ನಾಟಕದ ಅತ್ಯಂತ ಶ್ರೀಮಂತರ ಪಟ್ಟಿಯಲ್ಲಿ ವಿಪ್ರೋ ಸಂಸ್ಥೆಯ ಮುಖ್ಯಸ್ಥ ಅಜೀಂ ಪ್ರೇಂಜಿ ನಂ.1 ಸ್ಥಾನ ಪಡೆದಿದ್ದಾರೆ. ಇವರ ಆಸ್ತಿ 88300 ಕೋಟಿ ರೂ. ಹಾಗೆಯೇ ಮಣಿಪಾಲ ಶಿಕ್ಷಣ ಮತ್ತು ವೈದ್ಯಕೀಯ ಸಮೂಹದ (ಎಂಇಎಂಜಿ) ಮುಖ್ಯಸ್ಥ ರಂಜನ್ ಪೈ ಐದನೇ ಸ್ಥಾನ ಪಡೆದುಕೊಂಡಿದ್ದಾರೆ.

**ಶ್ರೀಮಂತರ ಪಟ್ಟಿ:**

- ಒಟ್ಟಾರೆ 100 ಭಾರತೀಯರಲ್ಲಿ ರಂಜನ್ ಪೈ ಅವರದು 51 ನೇ ಸ್ಥಾನ.
- ಫೋರ್ಬ್ಸ್ ಪತ್ರಿಕೆ ಬಿಡುಗಡೆ ಮಾಡಿರುವ 100 ಶ್ರೀಮಂತರ ಪಟ್ಟಿಯಲ್ಲಿ ರಿಲಯನ್ಸ್ ಸಮೂಹದ ಮುಖೇಶ್ ಅಂಬಾನಿ (1.34 ಲಕ್ಷ ಕೋಟಿ ರೂ), ಆರ್ಸೆಲಾರ್ ಮಿತ್ತಲ್ ಕಂಪನಿಯ ಮಾಲೀಕ ಲಕ್ಷ್ಮೀನಿವಾಸ್ ಮಿತ್ತಲ್ (1.02 ಲಕ್ಷ ಕೋಟಿ ರೂ.) ಮತ್ತು ಸನ್ ಫಾರ್ಮಸುಟಿಕಲ್ಸ್‌ನ ದಿಲೀಪ್ ಸ್ಯಾಂ (8900 ಕೋಟಿ ರೂ.) ಕ್ರಮವಾಗಿ ಮೊದಲ ಮೂರು ಸ್ಥಾನ ಪಡೆದುಕೊಂಡಿದ್ದಾರೆ.
- ಉಳಿದಂತೆ 100 ಶ್ರೀಮಂತರ ಪಟ್ಟಿಯಲ್ಲಿ ಕರ್ನಾಟಕ ಮೂಲದ 15 ಉದ್ಯಮಿಗಳು ಸ್ಥಾನ ಪಡೆದುಕೊಂಡಿದ್ದಾರೆ.
- ಕರ್ನಾಟಕದವರ ಪೈಕಿ ಅಗ್ರಸ್ಥಾನದಲ್ಲಿ ವಿಪ್ರೋ ಸಮೂಹದ ಅಜೀಂ ಪ್ರೇಮ್‌ಜಿ, ಇನ್ಫೋಸಿಸ್ ಸಂಸ್ಥಾಪಕ ಎನ್.ಆರ್.ನಾರಾಯಣಮೂರ್ತಿ, ಇನ್ಫೋಸಿಸ್‌ನ ಕಾರ್ಯಕಾರಿ ಉಪಾಧ್ಯಕ್ಷ ಇದ್ದಾರೆ. ಇನ್ಫೋಸಿಸ್ ಸಹ ಸಂಸ್ಥಾಪಕ, ಹಾಲಿ ಆಧಾರ್ ಯೋಜನೆ ಮುಖ್ಯಸ್ಥರೂ ಆಗಿರುವ ದೆಹಲಿ ನಿವಾಸಿ, ಕನ್ನಡಿಗ ನಂದನ್ ನಿಲೇಕಣಿ ಅವರು ಪಟ್ಟಿಯಲ್ಲಿ 4ನೇ ಸ್ಥಾನದಲ್ಲಿದ್ದರೆ, ಅವರ ನಂತರದ ಸ್ಥಾನದಲ್ಲಿ ಎಂಇಎಂಜಿಯ ರಂಜನ್ ಪೈ ಇದ್ದಾರೆ. ಅಬುಧಾಬಿಯಲ್ಲಿ ನೆಲೆಸಿರುವ ಕನ್ನಡಿಗ ಉದ್ಯಮಿ ಬಿ.ಆರ್.ಶೆಟ್ಟಿ ಅವರೂ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

**ಪಟ್ಟಿಯಲ್ಲಿರುವ ಕರ್ನಾಟಕದವರು:**

1) ಅಜೀಂ ಪ್ರೇಮ್‌ಜಿ: ವಿಪ್ರೋ: 88300 ಕೋಟಿ ರೂ.

2) ನಾರಾಯಣ ಮೂರ್ತಿ ಮತ್ತು ಕುಟುಂಬ: ಇನ್ಫೋಸಿಸ್: 10500 ಕೋಟಿ ರೂ

3) ಕ್ರಿಸ್ ಗೋಪಾಲಕೃಷ್ಣನ್ ಮತ್ತು ಕುಟುಂಬ: ಇನ್ಫೋಸಿಸ್: 8900 ಕೋಟಿ ರೂ

4) ನಂದನ್ ನಿಲೇಕಣಿ: ಇನ್ಫೋಸಿಸ್: 8300 ಕೋಟಿ ರೂ.

5) ರಂಜನ್ ಪೈ: ಎಂಇಎಂಜಿ: 8000 ಕೋಟಿ ರೂ.

6) ಜಿ.ಎಂ.ರಾವ್: ಜಿಎಂಆರ್ ಇನ್ಫ್ರಾಸ್ಟ್ರಕ್ಚರ್: 6500 ಕೋಟಿ ರೂ.

7) ಕೆ. ದಿನೇಶ್ ಮತ್ತು ಕುಟುಂಬ: ಇನ್ಫೋಸಿಸ್: 6400 ಕೋಟಿ ರೂ

8) ರಾಜೇಶ್ ಮೆಹ್ತಾ: ರಾಜೇಶ್ ಎಕ್ಸ್‌ಪೋರ್ಟ್ಸ್: 6250 ಕೋಟಿ ರೂ

9) ಜಿತೇಂದ್ರ ವೀರಾಣಿ: ಎಂಬಸಿ ಪ್ರಾಪರ್ಟಿ: 5700 ಕೋಟಿ ರೂ.

10) ಶಿಬುಲಾಲ್ ಮತ್ತು ಕುಟುಂಬ: ಇನ್ಫೋಸಿಸ್: 5600 ಕೋಟಿ ರೂ.

11) ಬಿ.ಆರ್.ಶೆಟ್ಟಿ: ಎಂಎನ್‌ಸಿ ಹೆಲ್ತ್‌ಕೇರ್: 5570 ಕೋಟಿ ರೂ.

12) ವಿ.ಜಿ. ಸಿದ್ಧಾರ್ಥ: ಕಾಫಿ ಡೇ: 5400 ಕೋಟಿ ರೂ.

13) ಪಿ.ಎನ್.ಸಿ. ಮೆನನ್: ಶೋಭಾ ಡೆವಲಪರ್: 4800 ಕೋಟಿ ರೂ.

14) ವಿಜಯ್ ಮಲ್ಯ: ಯುಬಿ ಗ್ರೂಪ್: 4750 ಕೋಟಿ ರೂ.

15) ಕಿರಣ್ ಮಜುಂದಾರ್ ಷಾ: ಬಯೋಕಾನ್: 4200 ಕೋಟಿ ರೂ.

**ಭಾರತದ ಟಾಪ್ 3 ಶ್ರೀಮಂತರು:**

1. ಮುಖೇಶ್ ಅಂಬಾನಿ ರಿಲಯ, 1.34 ಲಕ್ಷ ಕೋಟಿ ರೂ
2. ಲಕ್ಷ್ಮೀಮಿತ್ತಲ್ ಆರ್ಸೆಲಾರ್ ಮಿತ್ತಲ್ 1.02 ಲಕ್ಷ ಕೋಟಿ ರೂ.
3. ದಿಲೀಪ್ ಸ್ಯಾಂ, ಸನ್ ಫಾರ್ಮಸುಟಿಕಲ್ಸ್ 8900 ಕೋಟಿ ರೂ.

**ವಿಶ್ವದ ಭ್ರಷ್ಟ ರಾಷ್ಟ್ರಗಳ ಪೈಕಿ ಭಾರತಕ್ಕೆ 94 ನೇ ಸ್ಥಾನ: ಸಮೀಕ್ಷೆ**

ಯಾವ ರಾಷ್ಟ್ರಗಳು ಎಷ್ಟು ಭ್ರಷ್ಟ ಎನ್ನುವ ಕುರಿತು 'ಟ್ರಾನ್ಸ್‌ಪರೆನ್ಸಿ ಇಂಟರ್‌ನ್ಯಾಷನಲ್' ಸಂಸ್ಥೆಯು ವರದಿಯೊಂದನ್ನು ಪ್ರಕಟಿಸಿದ್ದು, 174 ರಾಷ್ಟ್ರಗಳ ಪೈಕಿ ಭಾರತ 94ನೇ ಸ್ಥಾನ ಪಡೆದುಕೊಂಡಿದೆ. ಕಳೆದ ವರ್ಷ ಹೊಂದಿದ್ದ ಸ್ಥಾನದಲ್ಲೇ ಮುಂದುವರೆಯುವ ಮೂಲಕ ಭ್ರಷ್ಟಾಚಾರವನ್ನು ಕಾಪಾಡಿಕೊಂಡ ಕುಖ್ಯಾತಿ ಪಡೆದುಕೊಂಡಿದೆ. 40 ಅಂಕಗಳನ್ನು ಗಳಿಸಿಕೊಂಡಿರುವ ನೆರೆಯ ಚೀನಾ 80ನೇ ಸ್ಥಾನದಲ್ಲಿದೆ. ಪಾಕಿಸ್ತಾನಕ್ಕೆ ಹೋಲಿಸಿಕೊಂಡರೆ ಭಾರತದಲ್ಲಿನ ಭ್ರಷ್ಟಾಚಾರ ಪ್ರಮಾಣ ಕಡಿಮೆ ಪ್ರಮಾಣದಲ್ಲಿದ್ದು, ಪಾಕಿಸ್ತಾನ 28 ಅಂಕಗಳನ್ನು ಗಳಿಸಿ 127ನೇ ಸ್ಥಾನದಲ್ಲಿದೆ.

**ಶ್ರೇಣಿ ಹೇಗೆ:**

- ವಿಶ್ವದ ಎಲ್ಲ ದೇಶಗಳನ್ನು ಪಟ್ಟಿಮಾಡಿ ಆ ದೇಶಗಳಲ್ಲಿನ ಭ್ರಷ್ಟಾಚಾರ ಪ್ರಮಾಣಕ್ಕೆ ಅನುಗುಣವಾಗಿ 0-100 ವರೆಗಿನ ಅಂಕಗಳನ್ನು ನೀಡಲಾಗಿದೆ.
- ವಿವಿಧ ಮಾನದಂಡಗಳಡಿ ನಿಗದಿ ಮಾಡಲಾಗಿದ್ದ ಗರಿಷ್ಠ 100 ಅಂಕಗಳಿಗೆ ಭಾರತ 36 ಅಂಕಗಳನ್ನಷ್ಟೇ ಪಡೆದಿದೆ. ಯಾವ ಅಂಕವನ್ನೂ ಪಡೆಯಲಾಗದೆ ಸೊನ್ನೆ (0) ಸುತ್ತುವ ರಾಷ್ಟ್ರ 'ಪರಮ ಭ್ರಷ್ಟ'ವಾದರೆ 100 ಅಂಕ ಗಳಿಸುವ ರಾಷ್ಟ್ರ 'ಅತ್ಯಂತ ಶುದ್ಧ' ಎಂದು ಪರಿಗಣಿಸಲಾಗುತ್ತದೆ.

- ಆ ಪ್ರಕಾರ ವಿಶ್ವದ ಅತ್ಯಂತ ಭ್ರಷ್ಟ ದೇಶಗಳ ಸಾಲಿನಲ್ಲಿ ಸೊಮಾಲಿಯಾ, ಉತ್ತರ ಕೊರಿಯಾ ಮತ್ತು ಆಫ್ಘಾನಿಸ್ತಾನ ದೇಶಗಳು ತಲಾ 8 ಅಂಕಗಳನ್ನು ಗಳಿಸುವುದರೊಂದಿಗೆ ಜಂಟಿ ಪ್ರಥಮ ಸ್ಥಾನದಲ್ಲಿವೆ.
- ಅಂತೆಯೇ 91 ಅಂಕಗಳನ್ನು ಗಳಿಸಿರುವ ಡೆನ್ಮಾರ್ಕ್ ಮತ್ತು ನ್ಯೂಜಿಲೆಂಡ್ ದೇಶಗಳು ಪಟ್ಟಿಯಲ್ಲಿ ಕೊನೆಯ ಸ್ಥಾನ ಪಡೆಯುವ ಮೂಲಕ ಅತ್ಯಂತ ಕಡಿಮೆ ಭ್ರಷ್ಟಾಚಾರ ನಡೆವ ದೇಶಗಳು ಎಂಬ ಖ್ಯಾತಿ ಪಡೆದಿವೆ.
- ಆದರೆ ಇಲ್ಲಿ ವಿಶ್ವದ ಯಾವುದೇ ರಾಷ್ಟ್ರವೂ ಕೂಡ 100 ಅಂಕಗಳಿಸಿ ಸಂಪೂರ್ಣ ಭ್ರಷ್ಟಾಚಾರ ಮುಕ್ತ ರಾಷ್ಟ್ರ ಎನಿಸಿಕೊಳ್ಳುವುದರಲ್ಲಿ ವಿಫಲವಾಗಿವೆ.

**ಟಾಪ್ 10 ಭ್ರಷ್ಟ ರಾಷ್ಟ್ರಗಳು:**

'ಟ್ರಾನ್ಸ್‌ಪರೆನ್ಸಿ ಇಂಟರ್‌ನ್ಯಾಷನಲ್' ಬಿಡುಗಡೆ ಮಾಡಿರುವ ವಿಶ್ವದ ಮೊದಲ ಹತ್ತು ಅತ್ಯಂತ ಹೆಚ್ಚು ಭ್ರಷ್ಟ ರಾಷ್ಟ್ರಗಳು ಸೊಮಾಲಿಯಾ (8) ಆಫ್ಘಾನಿಸ್ತಾನ (8) ಉತ್ತರ ಕೊರಿಯಾ (8) ಸುಡಾನ್ (11) ದಕ್ಷಿಣ ಸುಡಾನ್ (14) ಲಿಬಿಯಾ (15) ಇರಾಕ್ (16) ಉಜ್ಬೇಕಿಸ್ತಾನ (17) ಟರ್ಕ್‌ಮೆನಿಸ್ತಾನ (17) ಸಿರಿಯಾ (17)

**ಅತ್ಯಂತ ಕಡಿಮೆ ಭ್ರಷ್ಟ ರಾಷ್ಟ್ರಗಳು:**

ವಿಶ್ವದ ಮೊದಲ ಹತ್ತು ಅತ್ಯಂತ ಕಡಿಮೆ ಭ್ರಷ್ಟ ರಾಷ್ಟ್ರಗಳು ಡೆನ್ಮಾರ್ಕ್ (91) ನ್ಯೂಜಿಲ್ಯಾಂಡ್ (91) ಫಿನ್ ಲ್ಯಾಂಡ್ (89) ಸ್ವೀಡನ್ (89) ನಾರ್ವೆ (86) ಸಿಂಗಾಪುರ (86) ಸ್ವಿಟ್ಜರ್‌ಲ್ಯಾಂಡ್ (85) ನೆದರ್ ಲ್ಯಾಂಡ್ (83) ಆಸ್ಟ್ರೇಲಿಯಾ (81) ಕೆನಡಾ (81)

## ಚೂರು-ಪಾರು ಸುದ್ಧಿಗಳು

- **ಉಷಾ ಸಂಗ್ವಾನ್ ಲೈಫ್ ಇನ್ಶೂರೆನ್ಸ್ ಕಾರ್ಪೋರೇಷನ್ ಆಫ್ ಇಂಡಿಯಾದ ಎಂ.ಡಿ.:** ಲೈಫ್ ಇನ್ಶೂರೆನ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ(ಎಲ್ಐಸಿ) ಮೊತ್ತಮೊದಲ ಬಾರಿಗೆ ಮಹಿಳಾ ವ್ಯವಸ್ಥಾಪಕ ನಿರ್ದೇಶಕಿ(ಎಂಡಿ)ಯನ್ನು ಹೊಂದಿದೆ. ಉಷಾ ಸಂಗ್ವಾನ್ ಅವರನ್ನು ಎಲ್ಐಸಿಯ ಹೊಸ ಎಂಡಿಯಾಗಿ ಸರ್ಕಾರ ನೇಮಕ ಮಾಡಿದೆ. ಕಾರ್ಪೋರೇಟ್ ಕಮ್ಯೂನಿಕೇಷನ್ಸ್ ಕಾರ್ಯಕಾರಿ ನಿರ್ದೇಶಕಿಯಾಗಿದ್ದ ಉಷಾ ಸಂಗ್ವಾನ್ ಹಾಗೂ ಎಲ್ಐಸಿ ಹೌಸಿಂಗ್ ಫೈನಾನ್ಸ್ ಎಂಡಿ ಮತ್ತು ಸಿಇಒ ಆಗಿದ್ದ ವಿ.ಕೆ. ಶರ್ಮಾ ಅವರನ್ನು ಎಲ್ಐಸಿಯ ಹೊಸ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ. ಈ ಮೂಲಕ ಎಲ್ಐಸಿಯು ಬಹುತೇಕ 2 ವರ್ಷಗಳ ಬಳಿಕ ನಾಲ್ವರು ಎಂಡಿಗಳನ್ನು ಹೊಂದಿದಂತಾಗಿದೆ. ಎಸ್.ಬಿ. ಮೈನಕ್ ಹಾಗೂ ಸುಶೋಭನ್ ಸರ್ಕಾರ್ ಅವರು ವ್ಯವಸ್ಥಾಪಕ ನಿರ್ದೇಶಕರಾಗಿ ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದಾರೆ. ಖಾಲಿ ಉಳಿದಿದ್ದ ಮತ್ತೆರಡು ಎಂಡಿ ಸ್ಥಾನಗಳನ್ನು ಉಷಾ ಹಾಗೂ ಶರ್ಮಾ ತುಂಬಿದ್ದಾರೆ.

- **ವಿಶ್ವಸಂಸ್ಥೆಯ ಅಡಿಟರ್ ಗಳ ಮಂಡಳಿಗೆ ಶಶಿಕಾಂತ್ ಶರ್ಮಾ ಆಯ್ಕೆ:** ವಿಶ್ವಸಂಸ್ಥೆಯ ಅಡಿಟರ್ ಗಳ ಮಂಡಳಿಗೆ ನಡೆದ ಚುನಾವಣೆಯಲ್ಲಿ ಭಾರತದ ಮಹಾಲೇಖಪಾಲ ಶಶಿಕಾಂತ್ ಶರ್ಮಾ ಅತಿ ಹೆಚ್ಚು ಮತಗಳಿಂದ ವಿಜಯ ಸಾಧಿಸಿದ್ದಾರೆ. ವಿಶ್ವಸಂಸ್ಥೆಯ ಮಹಾಸಭೆಯ ಆಡಳಿತಾತ್ಮಕ ಮತ್ತು ಬಜೆಟ್ಗೆ ಸಂಬಂಧಿಸಿದ ಮಹಾಸಭೆಯಲ್ಲಿ ನಡೆದ ಚುನಾವಣೆಯಲ್ಲಿ ಶರ್ಮಾ 186 ಮತಗಳಲ್ಲಿ 124 ಮತಗಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಶರ್ಮಾ ಅವರು ಮುಂದಿನ 6 ವರ್ಷ ಕಾಲ ವಿಶ್ವಸಂಸ್ಥೆ ಅಡಿಟರ್ಗಳ ಬೋರ್ಡ್ನಲ್ಲಿ ಸೇವೆ ಸಲ್ಲಿಸಲಿದ್ದಾರೆ. ವಿಶ್ವಸಂಸ್ಥೆಯ ಮಹಾಸಭೆಯು ಈ ಮಂಡಳಿಯನ್ನು ವಿಶ್ವಸಂಸ್ಥೆಯ ಸಂಘಟನೆಗಳು ಮತ್ತು ಅವುಗಳ ನಿಧಿ ಹಾಗೂ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಆಡಿಟ್ಗಾಗಿ ರಚಿಸಿದೆ. ಈ ಹಿಂದೆ 1993ರಲ್ಲಿ ಭಾರತವು ಈ ಮಂಡಳಿಯಲ್ಲಿ ಪ್ರಾತಿನಿಧ್ಯ ಪಡೆದಿತ್ತು.

- **ಗುಲಾಬಿ ಮತ್ತು ಬಿಳಿ ಬಣ್ಣದಲ್ಲಿ 'ನನ್ ಆಫ್ ದ ಎಬೌವ್-ನೋಟಾ' ಬಟನ್:** ಐದು ರಾಜ್ಯಗಳ ವಿಧಾನಸಭೆ ಚುನಾವಣೆಯಲ್ಲಿ ಮೊದಲ ಬಾರಿಗೆ ಮತದಾರರು ಅಭ್ಯರ್ಥಿಗಳನ್ನು ತಿರಸ್ಕರಿಸುವ ಮೇಲಿನವರು ಯಾರೂ ಬೇಡ (ನನ್ ಆಫ್ ದ ಎಬೌವ್ -ನೋಟಾ) ಮತ ಚಲಾಯಿಸುವ ಹಕ್ಕು ಪಡೆದುಕೊಳ್ಳಲಿದ್ದಾರೆ. ವಿಧಾನಸಭೆ ಚುನಾವಣೆಯ ಮತಯಂತ್ರ ಅಥವಾ ಮತಪತ್ರದಲ್ಲಿ ನೋಟ ಗುಂಡಿ ಗುಲಾಬಿ ಬಣ್ಣದಲ್ಲಿ ಮತ್ತು ಲೋಕಸಭೆಗೆ ಬಿಳಿ ಬಣ್ಣದಲ್ಲಿರುತ್ತದೆ. ಮೂಲೆಗಳು ಬಾಗಿರುವ ಆಯತಾಕಾರದೊಳಗೆ ಕಪ್ಪು ಹಿನ್ನೆಲೆಯಲ್ಲಿ ಇಂಗ್ಲೀಷ್ನ ದೊಡ್ಡಕ್ಷರಗಳಲ್ಲಿ 'ನೋಟಾ' ಎಂದು ಬರೆದಿರುವ ವಿನ್ಯಾಸವನ್ನು ಚುನಾವಣಾ ಆಯೋಗ ಅಂಗೀಕರಿಸಿದೆ. ವಿಧಾನಸಭೆ ಚುನಾವಣೆಗೆ 'ನೋಟಾ' ಕಾಲಂಅನ್ನು ಗುಲಾಬಿ ಬಣ್ಣದಲ್ಲಿ ಮುದ್ರಿಸಲಾಗುವುದು. ಲೋಕಸಭೆಗೆ ಚುನಾವಣೆಗೆ ಇದೇ ವಿನ್ಯಾಸ ಇದ್ದರೂ 'ನೋಟಾ'ವನ್ನು ಇಂಗ್ಲೀಷಿನ ದೊಡ್ಡಕ್ಷರದಲ್ಲಿ ಬಿಳಿ ಬಣ್ಣದಲ್ಲಿ ಬರೆಯಲಾಗುವುದು. ನನ್ ಆಫ್ ದ ಎಬೌವ್ ಶಬ್ದಗಳನ್ನು ಮತಪತ್ರದ ಭಾಷೆಗೆ ಹೊಂದಿಕೊಂಡು ಸ್ಥಳೀಯ ಭಾಷೆಗಳಲ್ಲಿ ಮುದ್ರಿಸಬೇಕು. ಆದರೆ ಏಕರೂಪತೆಯನ್ನು ಕಾಯ್ದುಕೊಳ್ಳುವ ಉದ್ದೇಶದಿಂದ 'ನೋಟಾ'ವನ್ನು ಮಾತ್ರ ಚುನಾವಣಾ ಆಯೋಗದ ಸಿದ್ಧ ಮಾದರಿಯಲ್ಲೇ ಮುದ್ರಿಸಬೇಕು. ಅಂದರೆ 'ನೋಟಾ' ದೇಶದ ಎಲ್ಲ ಮತಯಂತ್ರಗಳಲ್ಲಿ ಒಂದೇ ರೀತಿ ಇರುತ್ತದೆ.

- **ಭಾರತದ ಯೂಕಿ ಭಾಂಬ್ರಿ ಆಸ್ಟ್ರೇಲಿಯಾದ ಎಟಿಪಿ ಚಾಲೆಂಜರ್ ಟೆನಿಸ್ ಚಾಂಪಿಯನ್:** ಭಾರತದ ಯುವ ಆಟಗಾರ ಯೂಕಿ ಭಾಂಬ್ರಿ ಆಸ್ಟ್ರೇಲಿಯಾದ ಟ್ರಾರಲ್ಗಾನ್‌ನಲ್ಲಿ ನಡೆದ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಈ ಮೂಲಕ ಭಾಂಬ್ರಿ ಪ್ರಸಕ್ತ ಸಾಲಿನ ಮೊದಲ ಹಾಗೂ ವೃತ್ತಿಜೀವನದ ಎರಡನೇ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. ಇಲ್ಲಿ ನಡೆದ ಫೈನಲ್‌ನಲ್ಲಿ 277ನೇ ಶ್ರೇಯಾಂಕಿತ ಭಾಂಬ್ರಿ 6-7 (13), 6-3, 6-4 ಸೆಟ್‌ಗಳಿಂದ 128ನೇ ಶ್ರೇಯಾಂಕಿತ ಅಮೆರಿಕದ ಬ್ರ್ಯಾಡ್ಲಿ ಕ್ಲಾನ್ ವಿರುದ್ಧ ರೋಚಕ ಗೆಲುವು ಸಾಧಿಸಿದರು. ಈ ಗೆಲುವಿನೊಂದಿಗೆ ಯೂಕಿ ಪ್ರಸಕ್ತ ಟೂರ್ನಿಯಲ್ಲಿ ತಮಗಿಂತ ಮೇಲಿನ ಶ್ರೇಯಾಂಕಿತ ಮೂವರು ಆಟಗಾರರ ವಿರುದ್ಧ ಗೆಲುವು ಸಾಧಿಸಿದಂತೆ ಆಯಿತು. ಇದಕ್ಕೂ ಮುನ್ನ ಭಾಂಬ್ರಿ, 191ನೇ ಶ್ರೇಯಾಂಕಿತ ಜಪಾನ್‌ನ ತಟ್ಸುಮಾ ಇಟೊ ಮತ್ತು 147ನೇ ಶ್ರೇಯಾಂಕಿತ ಆಸ್ಟ್ರೇಲಿಯಾದ ಜೇಮ್ಸ್ ಡಕ್‌ವರ್ತ್ ಅವರನ್ನು ಸೋಲಿಸಿದ್ದರು. ಈ ಗೆಲುವಿನಿಂದ ಭಾರಿ ಜಿಗಿತ ಕಂಡಿರುವ ಭಾಂಬ್ರಿ 80 ರ್‍ಯಾಂಕಿಂಗ್ ಅಂಕದೊಂದಿಗೆ 204ನೇ ಸ್ಥಾನಕ್ಕೇರಿದ್ದಾರೆ.

- **ಫುಟ್ಬಾಲ್ ಆಟಗಾರ ಡೇವಿಡ್ ಬೆಕಂಗೆ ವರ್ಷದ ಸ್ಟೈಲಿಷ್ ಆಟಗಾರ ಪ್ರಶಸ್ತಿ:** ಮಾಜಿ ಫುಟ್ಬಾಲ್ ಆಟಗಾರ ಡೇವಿಡ್ ಬೆಕಂ ವರ್ಷದ ಸ್ಟೈಲಿಷ್ ಪುರುಷ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ಉತ್ತಮ ವಸ್ತ್ರ ವಿನ್ಯಾಸ ಮತ್ತು ಫ್ಯಾಷನ್ ಮೇಲೆ ಪ್ರಭಾವ ಬೀರುವ ರೀತಿಯ ವಸ್ತ್ರಗಳನ್ನು ತೊಡವ ಬೆಕಂ ಅವರಿಗೆ ಜರ್ಮನಿಯ ಜಿಕ್ಯು ಪತ್ರಿಕೆ ಸಂಪಾದಕ ಜೋಸ್ ರೆಡೊನೊಡೊವ್ ಈ ಪ್ರಶಸ್ತಿ ನೀಡಿ ಗೌರವಿಸಿದರು. ಇತರ ಯಾವುದೇ ಕ್ರೀಡಾಪಟುಗಳು ಬೆಕಂ ಮಾದರಿಯಲ್ಲಿ ಫ್ಯಾಷನ್ ಮೇಲೆ ಪ್ರಭಾವ ಬೀರಿಲ್ಲ. ಟ್ರೆಂಡ್ ಹುಟ್ಟುಹಾಕುವ ರೀತಿಯಲ್ಲಿ ಅದರಲ್ಲೂ ವಿಶೇಷ ವಿನ್ಯಾಸದ ವಸ್ತ್ರಗಳನ್ನು ಧರಿಸುವಲ್ಲಿ ಬೆಕಂ ಹಿಂಜರಿಕೆ ಇಲ್ಲ. ಅದರಲ್ಲೂ ವಿನ್ಯಾಸ, ರೂಪದರ್ಶಿ ಮತ್ತು ಛಾಯಾಚಿತ್ರಗಾರರ ನಡುವೆ ಸೇತುವೆಯಾಗಿದ್ದಾರೆ ಎಂದು ಅವರು ಹೇಳಿದ್ದಾರೆ.

- **ರಷ್ಯಾದಲ್ಲಿ ಪ್ರಪಂಚದ ಶಕ್ತಿಶಾಲಿ ಉಲ್ಕಾ ಸ್ಫೋಟ:** ರಷ್ಯಾದಲ್ಲಿ ಕಳೆದ ಫೆಬ್ರುವರಿಯಲ್ಲಿ ಉಲ್ಕಾಪಾತದಿಂದ ಸಂಭವಿಸಿದ ಸ್ಫೋಟವು 600 ಸಾವಿರ ಟನ್ ಟ್ರೈನೈಟ್ರೊಟಾಲ್ವೀನ್ (ಟಿಎನ್‌ಟಿ) ಸ್ಫೋಟದಷ್ಟು ಪ್ರಮಾಣದಾಗಿದ್ದು, ಇದು ಸೂರ್ಯನಿಗಿಂತ ಹೆಚ್ಚು ಪ್ರಕಾಶಮಾನವಾಗಿತ್ತು ಎಂದು ಅಮೆರಿಕದ ನಾಸಾ ಮತ್ತು ಅಂತರರಾಷ್ಟ್ರೀಯ ವಿಜ್ಞಾನಿಗಳ ತಂಡ ಹೇಳಿದೆ. ರಷ್ಯಾದ ಅರಲ್ ಪರ್ವತ ಪ್ರದೇಶದ ಚೆಲ್ಯಾಬಿನ್ಸ್ಕ್‌ನಲ್ಲಿ ಫೆಬ್ರುವರಿ 15 ರಂದು 20 ಮೀಟರ್ ಗಾತ್ರದ ಉಲ್ಕಾ ಶಿಲೆಯೊಂದು ಬಿದ್ದು ಭಾರಿ ಸ್ಫೋಟ ಉಂಟಾಗಿ ಸುಮಾರು 1200 ಜನರು ಗಾಯಗೊಂಡಿದ್ದರು. ಈ ಅಪರೂಪದ ವಿದ್ಯಮಾನದ ಬಗ್ಗೆ ಸಂಶೋಧನೆ ನಡೆಸಿರುವ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ವಿಜ್ಞಾನಿಗಳು 'ಮನುಕುಲಕ್ಕೆ ಇದೊಂದು ಎಚ್ಚರಿಕೆಯ ಗಂಟೆ' ಎಂದು ಹೇಳಿದ್ದಾರೆ.

- **ಬೆಂಗಳೂರು ಮೂಲದ ವಿಜ್ಞಾನಿ ಜಿ.ಕೆ.ಸೂರ್ಯಪ್ರಕಾಶ್ ಗೆ ಇಸ್ರೇಲ್ ಪ್ರಶಸ್ತಿ:** ಅಮೆರಿಕದ ಯೂನಿವರ್ಸಿಟಿ ಆಫ್ ಸದರನ್ ಕ್ಯಾಲಿಫೋರ್ನಿಯಾದ ರಸಾಯನ ವಿಜ್ಞಾನ ವಿಭಾಗದ ಮುಖ್ಯಸ್ಥರಾಗಿರುವ ಬೆಂಗಳೂರು ಮೂಲದ ವಿಜ್ಞಾನಿ ಜಿ.ಕೆ.ಸೂರ್ಯಪ್ರಕಾಶ್ ಅವರಿಗೆ ಇಸ್ರೇಲ್ ಸರ್ಕಾರ ಪರ್ಯಾಯ ಇಂಧನ ಕ್ಷೇತ್ರದ ಸಾಧನೆಗೆ ಪ್ರಶಸ್ತಿ ನೀಡಿದೆ.

ಸೂರ್ಯಪ್ರಕಾಶ್ ಅವರು ನೊಬೆಲ್ ಪ್ರಶಸ್ತಿ ಪುರಸ್ಕೃತ ಜಾರ್ಜ್ ಎ.ಓಲಾ ಅವರೊಂದಿಗೆ ಪ್ರಶಸ್ತಿ ಹಂಚಿಕೊಂಡಿದ್ದಾರೆ. ಪ್ರಶಸ್ತಿಯ ಮೊತ್ತ ರೂ.6.30 ಕೋಟಿ (ಹತ್ತು ಲಕ್ಷ ಡಾಲರ್). ಟೆಲ್ ಅವೀವ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಪ್ರಶಸ್ತಿ ಪ್ರದಾನ ಮಾಡಿದರು.

- **ದೇಶದ ಪ್ರಥಮ ಮಹಿಳಾ ಬ್ಯಾಂಕಿನ ಅಧ್ಯಕ್ಷರಾಗಿ ಉಷಾ ಅನಂತಸುಬ್ರಹ್ಮಣ್ಯನ್ ಆಯ್ಕೆ:** ಕೇಂದ್ರ ಹಣಕಾಸು ಸಚಿವ ಕಳೆದ ಬಜೆಟ್‌ನಲ್ಲಿ ಘೋಷಣೆ ಮಾಡಿದ ಸಂಪೂರ್ಣ ಮಹಿಳಾ ಬ್ಯಾಂಕ್‌ಗೆ ಹೊಸ ಅಧ್ಯಕ್ಷರ ನೇಮಕ ಮಾಡಲಾಗಿದೆ. ಸದ್ಯ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರಾಗಿರುವ ಉಷಾ ಅನಂತಸುಬ್ರಹ್ಮಣ್ಯನ್ ಅವರನ್ನು ಸಂಪೂರ್ಣ ಮಹಿಳಾ ಬ್ಯಾಂಕ್‌ನ ಮೊದಲ ಅಧ್ಯಕ್ಷರನ್ನಾಗಿ ನೇಮಿಸಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ನವೆಂಬರ್ 19 ರಂದು ಪ್ರಧಾನಿ ದಿ.ಇಂದಿರಾ ಗಾಂಧಿಯವರ ಹುಟ್ಟಿದ ಹಬ್ಬದ ದಿನದಂದು ಹೊಸ ಬ್ಯಾಂಕ್ ಅಧಿಕೃತವಾಗಿ ಕಾರ್ಯಾರಂಭ ಮಾಡಲಿದೆ. ಮದ್ರಾಸ್ ವಿವಿಯಿಂದ ಸಂಖ್ಯಾಶಾಸ್ತ್ರ ಮತ್ತು ಮುಂಬೈ ವಿಶ್ವವಿದ್ಯಾನಿಲಯದಿಂದ ಪ್ರಾಚೀನ ಭಾರತದ ಸಂಸ್ಕೃತಿ ವಿಚಾರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

- **ಮೌಂಟ್ ಎವರೆಸ್ಟ್ ಏರಿದ ಮೊದಲ ನಾಯಿ 'ರುಪಿ':** ರುಪಿ ಹೆಸರಿನ ನಾಯಿ ವಿಶ್ವದ ಅತಿ ಎತ್ತರದ ಪರ್ವತ ಮೌಂಟ್ ಎವರೆಸ್ಟ್ ಅನ್ನು ಭಾಗಶಃ ಏರುವ ಮೂಲಕ ಸಾಧನೆ ಮಾಡಿದೆ. ಈ ಶಿಖರವೇರಿದ ಮೊದಲ ಬೀದಿ ನಾಯಿ ಎಂದೂ ಇದನ್ನು ಕರೆಯಲಾಗುತ್ತಿದೆ. ದಕ್ಷಿಣ ಆಫ್ರಿಕಾದ ಮಾಜಿ ಗಾಲ್ಫ್ ಆಟಗಾರ್ತಿ ಜೋಹನ್ ಲೆಫನ್ ಅವರಿಗೆ ಕಳೆದ ಸೆಪ್ಟೆಂಬರ್‌ನಲ್ಲಿ ಜಮ್ಮು- ಕಾಶ್ಮೀರದ ಲೇಹ್‌ನಲ್ಲಿ ಹಸಿವಿನಿಂದ ಸಾಯುವ ಹಂತ ತಲುಪಿದ್ದ ಬೀದಿ ನಾಯಿ ಸಿಕ್ಕಿತ್ತು. 11 ತಿಂಗಳ ನಾಯಿಯನ್ನು ದತ್ತು ತೆಗೆದುಕೊಂಡ ಅವರು 'ರುಪಿ' ಎಂಬ ಹೆಸರಿಟ್ಟಿದ್ದರು. ಮೌಂಟ್ ಎವರೆಸ್ಟ್ ಏರಲು ನಿರ್ಧರಿಸಿದ್ದ ಜೋಹನ್ ಅವರು ತಮ್ಮ ಜತೆಗೆ ಈ ನಾಯಿಯನ್ನೂ ಕರೆದುಕೊಂಡು ಹೋದರು. ನಿರಾಶ್ರಿತ ನಾಯಿಗಳ ಸಂಕಷ್ಟ ಹಾಗೂ ನಾಯಿ ದತ್ತು ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶವಿಟ್ಟುಕೊಂಡು 17,598 ಅಡಿ ಎತ್ತರದ ಎವರೆಸ್ಟ್ ಬೇಸ್ ಕ್ಯಾಂಪ್ ಹತ್ತಲು ಆರಂಭಿಸಿದ ಈ ಜೋಡಿ 13 ದಿನಗಳಲ್ಲಿ ಗುರಿ ಮುಟ್ಟಿತು ಎಂದು ಜೋಹನ್ ಅವರು ತಿಳಿಸಿದ್ದಾರೆ. ಮೌಂಟ್ ಎವರೆಸ್ಟ್ 29035 ಅಡಿ ಎತ್ತರವಿದೆ.

- **ನಾಸಾದಿಂದ 'ಮಾವೆನ್' ಎಂಬ ಮತ್ತೊಂದು ಬಾಹ್ಯಾಕಾಶ ನೌಕೆ ಉಡಾವಣೆ:** ಮಂಗಳ ಗ್ರಹದ ಹವಾಮಾನದ ಅಧ್ಯಯನ ನಡೆಸಲಿರುವ ನಾಸಾದ 'ಮಾವೆನ್' ಬಾಹ್ಯಾಕಾಶ ನೌಕೆಯನ್ನು ನಭಕ್ಕೆ ಏರಿಸಲಿರುವ ಅಟ್ಲಾಸ್-೫ ರಾಕೆಟ್ ನ್ನು ಫ್ಲಾರಿಡಾದ ಕೇಪ್ ಕೆನವರಲ್ ಉಡಾವಣಾ ಕೇಂದ್ರಕ್ಕೆ ತರಲಾಯಿತು. ಈ ರಾಕೆಟ್ 57.3 ಮೀಟರ್ ಉದ್ದವಿದೆ. ರಾಕೆಟ್ ಉಡಾವಣೆ ಸಂದರ್ಭದಲ್ಲಿ ವಾತಾವರಣವು ಶೇ ೬೦ರಷ್ಟು ಅನು ಕೂಲಕರವಾಗಿರಬಹುದು ಎಂಬುದು ಹವಾಮಾನ ತಜ್ಞರ ಲೆಕ್ಕಾಚಾರವಾಗಿದೆ. 'ಮಾರ್ಸ್ ಅಟ್ಮಾಸ್ಫಿಯರ್ ಅಂಡ್ ವಾಲಟೈಲ್ ಎವಲ್ಯೂಷನ್' (ಎಂಎ ವಿಇಎನ್) ಬಾಹ್ಯಾಕಾಶ ನೌಕೆಯು 10 ತಿಂಗಳ ಕಾಲ ಪ್ರಯಾಣದ ನಂತರ ಮಂಗಳನ ಕಕ್ಷೆಯನ್ನು ಸೇರಲಿದೆ. ನಂತರ

ಆ ಗ್ರಹ ಏಕೆ ಶೀತಲ ಮರುಭೂಮಿಯಾಗಿ ಮಾರ್ಪಟ್ಟಿತು ಎಂಬುದರ ಅಧ್ಯಯನಕ್ಕೆ ಪೂರಕವಾದ ದತ್ತಾಂಶಗಳನ್ನು ಭೂಮಿಗೆ ರವಾನಿಸಲಿದೆ.

- **ವಹೀದಾ ರೆಹಮಾನ್ ಗೆ ಭಾರತೀಯ ಚಿತ್ರೋದ್ಯಮದ ಶತಮಾನೋತ್ಸವ ಪ್ರಶಸ್ತಿ:** ಭಾರತೀಯ ಚಿತ್ರೋದ್ಯಮದ ಶತಮಾನೋತ್ಸವ ಸಂದರ್ಭದಲ್ಲಿ ಸ್ಥಾಪಿಸಲಾಗಿರುವ ಪ್ರಶಸ್ತಿಗೆ ಬಾಲಿವುಡ್‌ನ ಖ್ಯಾತ ನಟಿ ವಹೀದಾ ರೆಹಮಾನ್ ಅವರನ್ನು ಆಯ್ಕೆ ಮಾಡಲಾಗಿದೆ. ಪಣಜಿಯಲ್ಲಿ ಈ ನವೆಂಬರ್ 20 ರಿಂದ 30ರ ವರೆಗೆ ನಡೆಯಲಿರುವ 2013 ನೇ ಸಾಲಿನ ಭಾರತದ ಅಂತರ ರಾಷ್ಟ್ರೀಯ ಚಲನಚಿತ್ರೋತ್ಸದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಚಿತ್ರೋದ್ಯಮದ ಶತಮಾನೋತ್ಸವ ಸಂದರ್ಭದಲ್ಲಿ ಗಣನೀಯ ಸಾಧನೆ ಮಾಡಿದವರಿಗೆ ವಾರ್ಷಿಕ ಪ್ರಶಸ್ತಿ ನೀಡಲು ನಿರ್ಧರಿಸಿದ್ದು, ಪ್ರಥಮ ಪ್ರಶಸ್ತಿಯನ್ನು ವಹೀದಾ ರೆಹಮಾನ್ ಅವರಿಗೆ ನೀಡಲಾಗುತ್ತಿದೆ.

- **'ಆ್ಯಪಲ್'' ಜಗತ್ತಿನ ಅತ್ಯಂತ ಬೆಲೆಬಾಳುವ ಬ್ರ್ಯಾಂಡ್:** ಜಾಗತಿಕ ತಂತ್ರಜ್ಞಾನ ದಿಗ್ಗಜ ಸಂಸ್ಥೆ 'ಆ್ಯಪಲ್', ಜಗತ್ತಿನ ಅತಿ ಬೆಲೆಬಾಳುವ ಬ್ರ್ಯಾಂಡ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಫೋಬ್ಸ್ ನಿಯತಕಾಲಿಕ ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ 10,430 ಕೋಟಿ ಡಾಲರ್ (ಅಂದಾಜು ರೂ.6.5 ಲಕ್ಷ ಕೋಟಿ) ಬ್ರ್ಯಾಂಡ್ ಮೌಲ್ಯ ಹೊಂದಿರುವ 'ಆ್ಯಪಲ್' ಮೊದಲ ಸ್ಥಾನದಲ್ಲಿದ್ದರೆ, ನಂತರ ಸ್ಥಾನಗಳಲ್ಲಿ ಮೈಕ್ರೊಸಾಫ್ಟ್, ಕೋಕ- ಕೋಲಾ, ಐಬಿಎಂ , ಗೂಗಲ್ ಇವೆ. ಭಾರತದ ಯಾವ ಕಂಪೆನಿಯೂ 100 ಕಂಪೆನಿಗಳ ಪಟ್ಟಿಯಲ್ಲಿ ಇಲ್ಲ. ಆಯಪಲ್ ತನ್ನ ಬ್ರ್ಯಾಂಡ್ ಮೌಲ್ಯವನ್ನು ಕಳೆದ ಒಂದು ವರ್ಷದಲ್ಲಿ ಶೇ. 20ರಷ್ಟು ಏರಿಸಿಕೊಂಡಿದೆ. ಉಳಿದಂತೆ ಉನ್ನತ 10 ಮೌಲ್ಯಯುತ ಬ್ರ್ಯಾಂಡ್ ಗಳಲ್ಲಿ ಮೆಕ್ ಡೊನಾಲ್ಡ್, ಜನರಲ್ ಇಲೆಕ್ಟ್ರಾನಿಕ್ಸ್, ಇಂಟೆಲ್, ಸ್ಯಾಮ್‌ಸಂಗ್, ಲೂಯಿಸ್ ವಿಟಾನ್ ಸ್ಥಾನ ಪಡೆದಿವೆ. ಫೋಬ್ಸ್ ಬಿಡುಗಡೆ ಮಾಡಿರುವ 100 ಬ್ರ್ಯಾಂಡ್ ಗಳ ಪಟ್ಟಿಯಲ್ಲಿ ಅಮೆರಿಕ ಮೂಲದ ಕಂಪನಿಗಳು 50 ಕ್ಕಿಂತಲೂ ಹೆಚ್ಚಿದ್ದು, 9 ಬ್ರ್ಯಾಂಡ್ ಗಳನ್ನು ಹೊಂದಿರುವ ಜರ್ಮನಿ 2ನೇ ಸ್ಥಾನ ಮತ್ತು ಫ್ರಾನ್ಸ್ ಮತ್ತು ಜಪಾನ್ ನಂತರದ ಸ್ಥಾನದಲ್ಲಿದೆ. ಭಾರತದ ಯಾವುದೇ ಕಂಪನಿ ಫೋಬ್ಸ್ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿಲ್ಲ.

- **ದೆಹಲಿ ದೂರದರ್ಶನ ಕೇಂದ್ರದ ಹೆಚ್ಚುವರಿ ಮಹಾ ನಿರ್ದೇಶಕರಾಗಿ ಡಾ| ಮಹೇಶ್ ಜೋಶಿ**: ದೆಹಲಿ ದೂರದರ್ಶನ ಕೇಂದ್ರದ ಹೆಚ್ಚುವರಿ ಮಹಾ ನಿರ್ದೇಶಕರಾಗಿ ಡಾ| ಮಹೇಶ್ ಜೋಶಿ ಅಧಿಕಾರ ವಹಿಸಿಕೊಂಡಿದ್ದಾರೆ. ಇದರೊಂದಿಗೆ ಅವರು ಈಶಾನ್ಯ ಹಾಗೂ ದಕ್ಷಿಣ ವಲಯಗಳ ದೂರದರ್ಶನ ಕೇಂದ್ರಗಳ ಉಸ್ತುವಾರಿಯೂ ಆಗಿರುತ್ತಾರೆ. ದೆಹಲಿ ಸೇರಿದಂತೆ ಸುಮಾರು ಹತ್ತು ದೂರದರ್ಶನ ಕೇಂದ್ರಗಳು ಅವರ ಆಡಳಿತ ವ್ಯಾಪ್ತಿಗೆ ಬರಲಿವೆ. ಇಂತಹ ಮಹತ್ತರ ಹುದ್ದೆ ಅಲಂಕರಿಸಿದ ಮೊದಲ ಕನ್ನಡಿಗ ಎಂಬ ಹೆಮ್ಮೆಗೂ ಅವರು ಭಾಜನರಾಗಿದ್ದಾರೆ. ಬೆಂಗಳೂರು ದೂರದರ್ಶನ ಕೇಂದ್ರದ ಮುಖ್ಯಸ್ಥರಾಗಿದ್ದ ಅವರು, ನಂತರ ಬಡ್ತಿ ಹೊಂದಿ ದಕ್ಷಿಣ ವಲಯದ ಹೆಚ್ಚುವರಿ ಮಹಾ ನಿರ್ದೇಶಕರಾಗಿದ್ದರು. ಸ್ವತಃ ಗಾಯಕರೂ ಆಗಿರುವ ಜೋಶಿ, ಮಧುರ ಮಧುರವೀ ಮಂಜುಳಗಾನ, ಹುತಾತ್ಮ ಯೋಧರ ಸ್ಮರಣಾಂಜಲಿ ಕಾರ್ಯಕ್ರಮಗಳ ಮೂಲಕ ಖಾಸಗಿ ವಾಹಿನಿಗಳ ಭರಾಟೆಯ ನಡುವೆಯೂ ದೂರದರ್ಶನವನ್ನು ಜನರ ಬಳಿಗೆ

ಕೊಂಡೊಯ್ದ ಹೆಗ್ಗಳಿಕೆ ಹೊಂದಿದ್ದಾರೆ. ಹೀಗಾಗಿಯೇ ಅವರ ಬಗ್ಗೆ ದೂರದರ್ಶನವನ್ನು ಸಮೀಪ ದರ್ಶನವಾಗಿಸಿದರು ಎಂಬ ಮಾತಿದೆ.

- **ಕರ್ನಾಟಕದ ಮಡಿಲಿಗೆ 'ಕಾಳು ಮೆಣಸಿನ ರಾಜ' ಪಟ್ಟ:** 'ಕಾಳು ಮೆಣಸಿನ ರಾಜ' ಪಟ್ಟ ಕೇರಳದ ಕೈತಪ್ಪಿ ಕರ್ನಾಟಕದ ಮಡಿಲಿಗೆ ಬಿದ್ದಿದೆ. ಇಳುವರಿ ಲೆಕ್ಕಾಚಾರದಲ್ಲಿ ಕರ್ನಾಟಕದ ಕಾಳು ಮೆಣಸು ಉತ್ಪಾದನೆ ಕೇರಳಕ್ಕಿಂತ ಹೆಚ್ಚಾಗಿದ್ದು, ದೇಶದಲ್ಲೇ ಮೊದಲ ಸ್ಥಾನ ಪಡೆದಿದೆ. ಸಂಬಾರ ಮಂಡಳಿ ಅಂಕಿ-ಅಂಶಗಳ ಪ್ರಕಾರ ಐದು ವರ್ಷದಲ್ಲಿ ಕರ್ನಾಟಕದ ಕಾಳು ಮೆಣಸು ಇಳುವರಿ ಎಂಟು ಪಟ್ಟು ಹೆಚ್ಚಿದೆ. 2007-08ನೇ ಸಾಲಿನಲ್ಲಿ 16,320 ಹೆಕ್ಟೇರ್‌ನಲ್ಲಿ 3624 ಟನ್ ಕಾಳು ಮೆಣಸು ಬೆಳೆದಿದ್ದ ಕರ್ನಾಟಕ ಈ ವರ್ಷ 21,000 ಹೆಕ್ಟೇರ್‌ನಲ್ಲಿ 25,000 ಟನ್ ಇಳುವರಿ ಸಾಧಿಸಿ ದಾಖಲೆ ಮಾಡಿದೆ. ಹವಾಮಾನ ಪ್ರತಿಕೂಲವಾಗಿದ್ದರೂ ಮುಂದಿನ ವರ್ಷವೂ ಕರ್ನಾಟಕದಿಂದ 20,000- 22,000 ಟನ್ ಇಳುವರಿ ಸಿಗುವ ನಿರೀಕ್ಷೆಯಿದೆ. ಕರ್ನಾಟಕದಲ್ಲಿ ಕಾಳುಮೆಣಸು ಇಳುವರಿ ಹೆಚ್ಚಿರುವುದು ಗಮನಾರ್ಹ. 2002ರಲ್ಲಿ ದೇಶದಲ್ಲಿ 2.18 ಲಕ್ಷ ಹೆಕ್ಟೇರ್ ಕೃಷಿ ಭೂಮಿಯಲ್ಲಿ ಕಾಳು ಮೆಣಸು ಬೆಳೆಯುತ್ತಿದ್ದರು. 2012ರಲ್ಲಿ ಇದು 1.71 ಲಕ್ಷ ಹೆಕ್ಟೇರ್‌ಗಿಳಿದಿದೆ.

- **ಐಸಿಸಿ ಟ್ವೆಂಟಿ-20 ವಿಶ್ವಕಪ್ ಟೂರ್ನಿಗೆ ನೇಪಾಳ ಮತ್ತು ಯುಎಇ ತಂಡಗಳ ಅರ್ಹತೆ:** ನೇಪಾಳ ತಂಡ ಮುಂದಿನ ವರ್ಷ ಬಾಂಗ್ಲಾದೇಶದಲ್ಲಿ ನಡೆಯಲಿರುವ ಐಸಿಸಿ ಟ್ವೆಂಟಿ-20 ವಿಶ್ವಕಪ್ ಟೂರ್ನಿಗೆ ಅರ್ಹತೆ ಗಿಟ್ಟಿಸಿಕೊಂಡಿತು. ವಿಶ್ವಕಪ್ ಅರ್ಹತಾ ಟೂರ್ನಿಯ ಸೆಮಿಫೈನಲ್ ಪ್ರವೇಶಿಸುವ ಮೂಲಕ ನೇಪಾಳ ಈ ಸಾಧನೆ ಮಾಡಿದೆ. ಅಬುಧಾಬಿಯ ಶೇಖ್ ಜಾಯೇದ್ ಕ್ರೀಡಾಂಗಣದಲ್ಲಿ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ನೇಪಾಳ ಹಾಂಕಾಂಗ್ ವಿರುದ್ಧ ಐದು ವಿಕೆಟ್‌ಗಳ ಜಯ ಸಾಧಿಸಿತು. ಟೂರ್ನಿಯ ಮತ್ತೊಂದು ಪಂದ್ಯದಲ್ಲಿ ಹಾಲೆಂಡ್ ತಂಡವನ್ನು 10 ರನ್‌ಗಳಿಂದ ಮಣಿಸಿದ ಯುಎಇ ಕೂಡಾ ವಿಶ್ವಕಪ್‌ಗೆ ಅರ್ಹತೆ ಗಿಟ್ಟಿಸಿತು.

- **ಪಂಜಾಬ್ ಕೃಷಿ ವಿಶ್ವವಿದ್ಯಾಲಯದಿಂದ ಮೊದಲ ಕಪ್ಪು ಕ್ಯಾರೆಟ್ (ಗಜ್ಜರಿ) ಅಭಿವೃದ್ಧಿ:** ವಿವಿಧ ಬಣ್ಣದ ಟೊಮೆಟೋ, ಮೆಣಸಿನ ಕಾಯಿ ಈಗಾಗಲೇ ಮಾರುಕಟ್ಟೆಗೆ ಬಂದಿವೆ. ಇದಕ್ಕೆ ಇನ್ನೊಂದು ಸೇರ್ಪಡೆ ಎಂಬಂತೆ ಪಂಜಾಬ್ ಕೃಷಿ ವಿಶ್ವವಿದ್ಯಾಲಯ ಮೊದಲ ಕಪ್ಪು ಕ್ಯಾರೆಟ್ (ಗಜ್ಜರಿ) ಅಭಿವೃದ್ಧಿಪಡಿಸಿದೆ. ಈ ವಿಶೇಷ ತರಕಾರಿ ರಕ್ತದ ಕ್ಯಾನ್ಸರ್, ಹೊಟ್ಟೆ ನೋವುಗಳನ್ನು ಗುಣಪಡಿಸುವ ಔಷಧೀಯ ಗುಣಗಳನ್ನು ಹೊಂದಿದೆ. ಕಪ್ಪು ಕ್ಯಾರೆಟ್ ರಕ್ತ ಪರಿಚಲನೆಯನ್ನು ಹೆಚ್ಚಿಸುವ ಮೂಲಕ ರಕ್ತಹೀನತೆ ಕಾಯಿಲೆಯನ್ನು ಗುಣಪಡಿಸಬಲ್ಲದು. ಅಲ್ಲದೇ ಅಪೌಷ್ಟಿಕತೆಯಿಂದ ಬಳಲುತ್ತಿರುವ ದೇಶದ ಬಹುಸಂಖ್ಯಾತ ಜನರಿಗೆ ಇದು ದಿವ್ಯ ಔಷಧವಾಗಿದೆ. ಅಲ್ಲದೆ ಇದರಲ್ಲಿ ಅತ್ಯಧಿಕ ಕಬ್ಬಿಣ, ಕ್ಯಾಲ್ಸಿಯಂ ಪೋಷಕಾಂಶಗಳು ಹೇರಳ ಪ್ರಮಾಣದಲ್ಲಿದೆ. ಬೆಳೆದ ಸುಮಾರು 93 ದಿನಗಳ ಬಳಿಕ ಕಪ್ಪು ಕ್ಯಾರೆಟ್‌ನ್ನು ಕೀಳಬಹುದು. ಪ್ರತಿ ಎಕರೆಗೆ 196 ಕ್ವಿಂಟಲ್‌ನಷ್ಟು ಕಪ್ಪು ಕ್ಯಾರೆಟ್‌ನ್ನು ಬೆಳೆಯಬಹುದಾಗಿದೆ. ಇದರ ಎಲೆಗಳು ಅಚ್ಚ ಹಸುರಾಗಿರುತ್ತವೆ.

- **ಚುನಾವಣಾ ಸಂಬಂಧಿ ಅಂತರ್ಜಾಲ ತಾಣ ಆರಂಭಿಸಿದ ಗೂಗಲ್ :** ಫೇಸ್‌ಬುಕ್ ಬಳಿಕ ಇದೀಗ ಗೂಗಲ್ ಕೂಡ ಚುನಾವಣೆಗೆ ಸಂಬಂಧಿಸಿದ ಅಂತರ್ಜಾಲ ತಾಣ ಆರಂಭಿಸಿದೆ. ಚುನಾವಣೆ ಮತ್ತು ರಾಜಕೀಯ ಪಕ್ಷಗಳ ಕುರಿತು ಭಾರತೀಯ ಬಳಕೆದಾರರು ಈ ತಾಣದಿಂದ ಸಮಗ್ರ ಮಾಹಿತಿ ಪಡೆಯಬಹುದು ಎಂದು ಗೂಗಲ್ ತನ್ನ ಅಧಿಕೃತ ಬ್ಲಾಗ್ ನಲ್ಲಿ ತಿಳಿಸಿದೆ.

- **ಅಮೆರಿದ ಮೊದಲ ಮುದ್ರಿತ ಪುಸ್ತಕ 88.40 ಕೋಟಿ ರೂಪಾಯಿಗಳಿಗೆ ಹರಾಜು:** ಅಮೆರಿದ ಮೊದಲ ಮುದ್ರಿತ ಪುಸ್ತಕ 88.40 ಕೋಟಿ ರೂ.ಗೆ ಹರಾಜಾಗಿದೆ. ಈ ಮೂಲಕ 1640 ರಲ್ಲಿ ಪ್ರಕಟಗೊಂಡ 'ದ ಬೆ ಪಸ್ಲಮ್ಸ್' ವಿಶ್ವದ ಅತ್ಯಂತ ದುಬಾರಿ ಪುಸ್ತಕ ಎನಿಸಿಕೊಂಡಿದೆ. ಅಮೆರಿಕದಲ್ಲಿ ಮೊದಲ ಮುದ್ರಣಗೊಂಡ ಪುಸ್ತಕದ 11 ಪ್ರತಿಗಳು ಮಾತ್ರ ಈಗ ಲಭ್ಯವಿದ್ದು, ಅವುಗಳಲ್ಲಿ ಒಂದು ಪುಸ್ತಕವನ್ನು ಹರಾಜು ಹಾಕಲಾಗಿದೆ. ಅಮೆರಿಕದ ಉದ್ಯಮಿ ಡೇವಿಡ್ ರುಬೆನ್‌ಸ್ಟೆನ್ 88.40 ಕೋಟಿ ರೂ.ಗೆ ಖರೀದಿಸಿದ್ದಾರೆ. ದ ಬೆ ಪಸ್ಲಮ್ಸ್ ಮೂಲ ಹಿಬ್ರೂ ಭಾಷೆಯಲ್ಲಿದೆ. 2010ರಲ್ಲಿ ಜೋನ್ ಜೇಮ್ಸ್ ಅವರ ಆಡುಬಾನ್ಸ್ ಬರ್ಡ್ಸ್ ಆಫ್ ಅಮೆರಿಕ 66 ಕೋಟಿಗೆ ಹರಾಜಾಗಿತ್ತು.

- **ಪಾಕಿಸ್ತಾನದ ನೂತನ ಸೇನಾ ಮುಖ್ಯಸ್ಥರನ್ನಾಗಿ ಲೆ.ಜ| ರಹೀಲ್ ಶರೀಫ್ ನೇಮಕ:** ಪಾಕಿಸ್ತಾನದ ನೂತನ ಸೇನಾ ಮುಖ್ಯಸ್ಥರನ್ನಾಗಿ ಲೆ.ಜ| ರಹೀಲ್ ಶರೀಫ್ ಅವರನ್ನು ಪ್ರಧಾನಿ ನವಾಜ್ ಶರೀಫ್ ನೇಮಕ ಮಾಡಿದ್ದಾರೆ. ಜತೆಗೆ ಜಂಟಿ ಸೇನಾ ಮುಖ್ಯಸ್ಥರ ಸಮಿತಿಯ ಅಧ್ಯಕ್ಷರಾಗಿ ಲೆ.ಜ| ರಶೀದ್ ಮೆಹಮೂದ್ ಅವರನ್ನು ನೇಮಿಸಲಾಗಿದೆ. ಈ ಇಬ್ಬರ ನೇಮಕಕ್ಕೆ ಅಧ್ಯಕ್ಷ ಮಮೂನ್ ಹುಸೇನ್ ಅನುಮತಿ ನೀಡಿದ್ದಾರೆ. ಸೇನಾಮುಖ್ಯಸ್ಥ ಹುದ್ದೆಯಿಂದ ಶುಕ್ರವಾರ ನಿವೃತ್ತರಾದ ಅಶ್ಫಾಖ್ ಪರ್ವೇಜ್ ಕಯಾನಿ ಅವರ ಸ್ಥಾನವನ್ನು ರಹೀಲ್ ಶರೀಫ್ ತುಂಬಲಿದ್ದಾರೆ.

- **ಭಾರತ ಮೂಲದ ಡಾ.ಜಸ್ಮಂದರ್ ಗೆ 'ಏಷ್ಯನ್ ಲೈಟ್ ಪ್ರೊಫೆಷನಲ್ ಎಕ್ಸಲೆನ್ಸ್' ಪ್ರಶಸ್ತಿ:** ಮ್ಯಾಂಚೆಸ್ಟರ್ ನಲ್ಲಿ ಮನೋವೈದ್ಯರಾಗಿ ಉತ್ತಮ ಸೇವೆ ಸಲ್ಲಿಸಿರುವ ಭಾರತ ಮೂಲದ ಡಾ. ಜಸ್ವಿಂದರ್ ಎಸ್. ಬಮ್ರಾಹ್ ಅವರಿಗೆ ಬ್ರಿಟನ್ 'ಏಷ್ಯನ್ ಲೈಟ್ ಪ್ರೊಫೆಷನಲ್ ಎಕ್ಸಲೆನ್ಸ್' ಪ್ರಶಸ್ತಿ ನೀಡಿ ಗೌರವಿಸಿದೆ. 1978ರಲ್ಲಿ ಪಂಜಾಬಿನ ಪಟಿಯಾಲದ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಪದವಿ ಪಡೆದ ಅವರು, 1985ರಲ್ಲಿ ಇಲ್ಲಿನ ರಾಯಲ್ ಕಾಲೇಜಿಗೆ ಸೇರಿದ್ದರು

- **ಕಾಮನ್‌ವೆಲ್ತ್ ಚಾಂಪಿಯನ್‌ಶಿಪ್‌ನಲ್ಲಿ ಭಾರತಕ್ಕೆ ಒಟ್ಟು 117 ಪದಕಗಳು:** ಭಾರತದ ಲಿಫ್ಟರ್‌ಗಳು ಮಲೇಷ್ಯಾದ ಪೆನಾಂಗ್‌ನಲ್ಲಿ ಮುಕ್ತಾಯಗೊಂಡ ಕಾಮನ್‌ವೆಲ್ತ್ ಚಾಂಪಿಯನ್‌ಶಿಪ್‌ನಲ್ಲಿ ಅಮೋಘ ಸಾಧನೆ ತೋರುವ ಮೂಲಕ ಚಾಂಪಿಯನ್ ಪಟ್ಟ ಪಡೆದಿದ್ದಾರೆ. ಇದರೊಂದಿಗೆ ಭಾರತ ಟೂರ್ನಿಯಲ್ಲಿ 57 ಬಂಗಾರದೊಂದಿಗೆ ಒಟ್ಟು 117 ಪದಕ

ತನ್ನದಾಗಿಸಿಕೊಂಡಿದೆ. ಭಾರತವು ಯೂತ್ ಬಾಲಕ ಮತ್ತು ಬಾಲಕಿಯರ ವಿಭಾಗ, ಜೂನಿಯರ್ ಬಾಲಕ ಮತ್ತು ಬಾಲಕಿಯರ ವಿಭಾಗ ಮತ್ತು ಸೀನಿಯರ್ ಪುರುಷರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಸೀನಿಯರ್ ಮಹಿಳೆಯರ ವಿಭಾಗದಲ್ಲಿ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ. ಭಾರತ ಟೂರ್ನಿಯಲ್ಲಿ 57 ಬಂಗಾರದ ಜೊತೆಗೆ 39 ಬೆಳ್ಳಿ ಮತ್ತು 21 ಕಂಚಿನ ಪದಕವನ್ನು ಗಳಿಸಿದೆ.

- **ದೇಶದಲ್ಲಿ ನಿರುದ್ಯೋಗ ದರ ಶೇ.13.3 ರಷ್ಟು; ಸರ್ಕಾರಿ ವರದಿ:** ದೇಶದಲ್ಲಿ 2012-13ರಲ್ಲಿ 15-29 ವಯಸ್ಸಿನ ನಿರುದ್ಯೋಗ ದರ ಶೇ 13.3ರಷ್ಟು ಇದೆ ಎಂದು ಸರ್ಕಾರಿ ವರದಿ ಬಹಿರಂಗ ಪಡಿಸಿದೆ. ದೇಶದಲ್ಲಿ 15ರಿಂದ 29 ವರ್ಷದೊಳಗಿನ ಪ್ರತಿ ಒಂದು ಸಾವಿರ ಜನರಲ್ಲಿ 133 ಮಂದಿ ನಿರುದ್ಯೋಗಿಗಳಿದ್ದಾರೆ.ಇದು ಶೇಕಡಾ 13.3ರಷ್ಟು ನಿರುದ್ಯೋಗ ಪ್ರಮಾಣದ ದರವನ್ನು ಸೂಚಿಸುತ್ತದೆ ಎಂದು 'ಯುವ ಉದ್ಯೋಗ-ನಿರುದ್ಯೋಗ 2012-13' ಕುರಿತು ಕಾರ್ಮಿಕ ಸಚಿವಾಲಯ ನೀಡಿದ ವರದಿಯಲ್ಲಿ ಈ ಅಂಶ ಬಹಿರಂಗವಾಗಿದೆ.

- **ಬೆಂಗಳೂರಿನ ವರ್ಷಾ ವಿಶ್ವ ಸ್ನೂಕರ್ ನಲ್ಲಿ ದಾಖಲೆ ಸಾಧನೆ:** ಬೆಂಗಳೂರಿನ ಶಾಲಾ ಬಾಲಕಿ ವರ್ಷಾ ಸಂಜೀವ್ ಐಬಿಎಸ್ಎಫ್ ವಿಶ್ವ ಸ್ನೂಕರ್ ಚಾಂಪಿಯನ್‌ಶಿಪ್‌ನಲ್ಲಿ ನಾಕೌಟ್ ಹಂತಕ್ಕೆ ಅರ್ಹತೆ ಗಿಟ್ಟಿಸುವ ಮೂಲಕ ಈ ಸಾಧನೆ ಮಾಡಿದ ಮೊದಲ ಭಾರತೀಯ ಆಟಗಾರ್ತಿ ಎಂಬಗೌರವಕ್ಕೆ ಪಾತ್ರವಾಗಿದ್ದಾರೆ. ಬೆಂಗಳೂರಿನಿಲ್ಲಿ ನಡೆದ 'ಎಫ್' ಗುಂಪಿನ ಪಂದ್ಯದಲ್ಲಿ 17ರ ಹರೆಯದ ವರ್ಷಾ ಸಂಜೀವ್ 3-0 ಫ್ರೇಮ್‌ಗಳಿಂದ ಉಕ್ರೇನ್‌ನ ಮಾರಿಯಾ ಬಕರಸ್ಕಾ ವಿರುದ್ಧ ಸುಲಭ ಗೆಲುವು ಸಾಧಿಸಿದರು. ಇದರೊಂದಿಗೆ ಟೂರ್ನಿಯಲ್ಲಿ ಆಡಿದ 5 ಪಂದ್ಯಗಳ ಪೈಕಿ ನಾಲ್ಕರಲ್ಲಿ ಜಯ ಸಾಧಿಸಿ ನಾಕೌಟ್‌ಗೆ ಪ್ರವೇಶಿಸಿದರು.

***************************************************************************************************